

ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 27 ಸಂಚಿಕೆ 24 - 25 ಜೂನ್ 19, 2005 ಬೆಲೆ ರೂ. 3.00




ಬಜರಂಗದಳದ ಅಟ್ಟಹಾಸವೂ +
ಆಡಳಿತದ ಹಸ್ತಲಾಘವವೂ =
ದ. ಕನ್ನಡದಲ್ಲಿ ವಿನಾಶದ ದಳ್ಳುರಿ





ಬಾಬಾಬುಡನ್ ಗಿರಿ :
ಹೊಸ ವಿವಾದವೇನು ?

ಕರ್ನಾಟಕ : ಮೈತ್ರಿಕೂಟ
1 ವರ್ಷ ಕಳಕೊಂಡ ನೂರಾರು ಅವಕಾಶಗಳು



- ಫ್ರೆಂಚ್ ಜನಮತದ ಕ್ರಾಂತಿ
- ಈದ್ಗಾ ವಿವಾದ : ನ್ಯಾಯಾಲಯದತ್ತ
- ಸಿನಿಮಾ ಹಾಲ್‌ನಲ್ಲಿ ಬಾಂಬ್ ಏಕೆ ?

ಅಡ್ವಾನಿ:
ತೆರೆಮರೆಯ
ಕಿರುನಾಟಕ

ಕೋಮುವಾದ ಕೇವಲ ಚಿಂತನೆಯ ವಸ್ತುವಲ್ಲ, ಅದು ಕ್ರಿಯೆಯಲ್ಲಿ ಹೆಚ್ಚೆಹೆಚ್ಚೂ ಮುಖಾಮುಖಿಯಾಗಬೇಕಾದ ವಾಸ್ತವ, ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಚಿಂತಕರ ಅನುಭವ ಮತ್ತದರ ಅರಿವಿನ ಫಲವಾಗಿ 'ಕೋಮುವಾದದ ಕರಾಳ ಮುಖಗಳು' ಒಂದು ಅಮೂಲ್ಯ ಗ್ರಂಥವಾಗಿ ಹೊರಬಂದಿದೆ. ಅದರ ಬಿಡುಗಡೆಯ ಸಮಾರಂಭವೂ ಚಿಂತನ-ಮಂಥನವೇ?

ಕೋಮುವಾದದ ವಿವಿಧ ಮುಖಗಳ ಅನಾವರಣ

ಪುಸ್ತಕ ಬಿಡುಗಡೆ ಹಾಗೂ ಚಿಂತನೆಯ ವಿಶಿಷ್ಟ ಕಾರ್ಯಕ್ರಮ

ಕೋಮುವಾದಿಗಳು ಏಕ ಧರ್ಮ, ಏಕ ಸಂಸ್ಕೃತಿಯ ಪ್ರತಿಪಾದಕರು. ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸರ್ವಾಧಿಕಾರ ತೋರುವ ಪ್ರವೃತ್ತಿ ಹೊಂದಿದ್ದಾರೆ. ಇದಕ್ಕೆ ವಿರುದ್ಧವಾಗಿ ಕೋಮುವಾದವನ್ನು ವಿರೋಧಿಸುವವರು ಬಹುಮುಖ ಸಂಸ್ಕೃತಿಯನ್ನು ಒಪ್ಪಿಕೊಂಡಿರುತ್ತಾರೆ, ಬದುಕುತ್ತಿದ್ದಾರೆ ಎಂದು ಸಾಹಿತಿ, ಪ್ರೋ. ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಸೆನೆಟ್ ಹಾಲ್ ನಲ್ಲಿ(ಸೆಂಟ್ರಲ್ ಕಾಲೇಜ್ ಆವರಣ) ನವಕರ್ನಾಟಕ ಪಬ್ಲಿಕೇಷನ್ ಏರ್ಪಡಿಸಿದ 'ಕೋಮುವಾದದ ಕರಾಳ ಮುಖಗಳು' ಪುಸ್ತಕ ಬಿಡುಗಡೆ, ವಿಚಾರಗೋಷ್ಠಿಯ ಸಮಾರಂಭದಲ್ಲಿ 'ಕೋಮುವಾದವನ್ನು ಹಿಮ್ಮೆಟ್ಟಿಸುವಲ್ಲಿ ಸಾಹಿತ್ಯ, ಸಾಂಸ್ಕೃತಿಗಳ ಪಾತ್ರ'ದ ಬಗ್ಗೆ ಮಾತನಾಡುತ್ತಾ ನಮ್ಮ ಸಾಹಿತ್ಯ, ಸಾಂಸ್ಕೃತಿಕ ಚಳುವಳಿಗಳು ಕೋಮುವಾದವನ್ನು ಮತ್ತು ಜಾತಿವಾದವನ್ನು ಮೀರಿಸುವ ಚಳುವಳಿ ಆಗಬೇಕು ಎಂದರು. ಕೋಮುವಾದಿಗಳು. ಸಾಹಿತ್ಯ ಚರಿತ್ರೆ ಮತ್ತು ಪುರಾಣಗಳ ನ್ನು, ತಮಗೆ ಬೇಕಾದಂತೆ ತಿರುಚುತ್ತಿದ್ದಾರೆ. 12ನೇ ಶತಮಾನದಲ್ಲೂ ಜೈನರು ಮತ್ತು ವೀರಶೈವರ ನಡುವೆ ಹಾಗೂ 14ನೇ ಶತಮಾನದಲ್ಲಿ ಜೈನರು ಮತ್ತು ವೈಷ್ಣವ ಮತಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಸಂಕುಚಿತ ಭಾವನೆಗಳನ್ನು ಹೊಂದಿದ್ದವು. ಇದನ್ನು ಬಿಜೆಪಿಯವರು ಎಲ್ಲಿಯೂ ಹೇಳುತ್ತಿಲ್ಲ ಎಂದು ಬರಗೂರು ರಾಮಚಂದ್ರಪ್ಪ ತಿಳಿಸಿದರು. ಕೋಮುವಾದವನ್ನು ವಿರೋಧಿಸುವವರು, ಜಾತಿವಾದವನ್ನು ವಿರೋಧಿಸುವ ಅವಶ್ಯಕತೆ ಇದೆ ಎಂದು ಆಗ್ರಹಿಸಿದರು.

ಪ್ರಜಾಪ್ರಭುತ್ವ ನಿಷ್ಕ್ರೀಯಗೊಳಿಸುವ ರಾಜಕೀಯ

ಲೇಖಕರಾದ ಕೆ.ಫಣಿರಾಜ್ ಮಾತನಾಡಿ 'ಹಿಂದುತ್ವವಾದವು ಬಹಳ ಕರಾರುವಕ್ಕಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಮಾಡುತ್ತಿದೆ. ಸಂಘ ಪರಿವಾರವು ಪ್ರಜಾಪ್ರಭುತ್ವದ ಹಕ್ಕುಗಳ ಮೇಲೆ ದಾಳಿ ನಡೆಸುತ್ತಿದೆ. ಅಲ್ಲದೆ ದುರ್ಬಲರು, ಶಕ್ತಿಹೀನರೂ ತಮ್ಮ ಹಕ್ಕುಗಳನ್ನು ಕಳೆದುಕೊಂಡು ಬದುಕುವ ಪರಿಸ್ಥಿತಿ ಇದೆ' ಎಂದು ಆತಂಕ ವ್ಯಕ್ತಪಡಿಸಿದರು. ಅದೇ ರೀತಿಯಾಗಿ ಮತಾಂತರದ ಕುರಿತು ಫಣಿರಾಜ್ ಮಾತನಾಡುತ್ತಾ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 'ಮತಾಂತರದ' ನೆಪಮಾಡಿಕೊಂಡು ಸಂಘ ಪರಿವಾರದವರು ಕ್ರಿಶ್ಚಿಯನ್ನರ ಪ್ರಾರ್ಥನ ಸಭೆಗಳ ಮೇಲೆ ದಾಳಿ ಮಾಡಿದ ಹಲವು ಪ್ರಸಂಗಗಳ ಬಗ್ಗೆ ಪೋಲಿಸ್ ಠಾಣೆಯಲ್ಲಿ ವಿಚಾರಿಸಿದ್ದೇವೆ. ಮತಾಂತರದ ಕುರಿತಾಗಿ ಸಂಘ ಪರಿವಾರ ಪೇಟೆಂಟ್ ಮಾಡಿ ಕೊಂಡಿರುವ ಎರಡು ತರ್ಕಗಳಿವೆ. ಒಂದು ಹೆಣ್ಣು, ಹಣ, ಸುಖಜೀವನದ ಆಮಿಷ ತೋರಿಸಿ ಮತಾಂತರ ಮಾಡುತ್ತಾರೆ. ಇನ್ನೊಂದು ಮುಸಲ್ಮಾನರಿಗೆ ಮತ್ತು ಕ್ರಿಶ್ಚಿಯನ್ನರಿಗೆ ತಮ್ಮ ಧರ್ಮವೇ ಶ್ರೇಷ್ಠ, ಉಳಿದ ಧರ್ಮಗಳ ಬಗ್ಗೆ ಹೀಯಾಳಿಸುವ ಅಹಂಕಾರವಿದೆ. ಅವರು ಧರ್ಮ ಪ್ರಚಾರದ ನೆಪದಲ್ಲಿ ಹಿಂದೂ ಧರ್ಮವನ್ನು ಹೀಗಳೆಯುತ್ತಾರೆ. ಇದನ್ನು ನಾವು ಸಹಿಸಕೂಡದು ಎನ್ನುವುದಾಗಿದೆ. ಒಂದು ಮತದ ಬಗ್ಗೆ, ಒಂದು ಸಿದ್ಧಾಂತದ ಬಗ್ಗೆ ಯಾರಾದರೂ ಕೆಳಮಟ್ಟದಲ್ಲಿ ಮಾತನಾಡಿದರೆ ಮನುಷ್ಯರಾದವರು ಆಕ್ರೋಶಿತರಾಗುವುದು ಸಹಜ ಎಂಬುದನ್ನು ಒಪ್ಪಿಕೊಳ್ಳುವ ಬಗ್ಗೆ ತಿಳಿಸುತ್ತಾ , ದಿನ ಪತ್ರಿಕೆಯಲ್ಲಿ ಪ್ರಕಟವಾದ ಎರಡು ಬರಹಗಳನ್ನು ಅದರಲ್ಲೂ 'ಅದಮಾರು ಶ್ರೀಪಾದರಿಗೊಂದು ಬಹಿರಂಗ ಪತ್ರದ ಸಾರಾಂಶವನ್ನು ವಿವರಿಸಿದರು. ಸೋಸಿಯಲಿಸ್ಟರು ಮತ್ತು ಕಮ್ಯೂನಿಸ್ಟರು ನೂರಾರು ವರ್ಷಗಳ ಊಳಿಗಮಾನ್ಯ ವ್ಯವಸ್ಥೆಯ ಅಸಮಾನತೆಯ ವ್ಯಾಖ್ಯಾನದ ಆಧಾರದಲ್ಲಿ ತಮ್ಮ ರಾಜಕೀಯವನ್ನು ನಿರೂಪಿಸಿದರು. ಶೂದ್ರರು, ದಲಿತರು ಮೇಲ್ಜಾತಿಯ ಜನರು ತಮಗೆ ಮಾಡಿದ ಅನ್ಯಾಯಗಳ 'ತಿಳುವಳಿಕೆ' ಯಿಂದ ಚಳುವಳಿಗಳನ್ನು ನಡೆಸಿದ್ದು ಹಾಗೂ ತಮ್ಮ ಹಕ್ಕುಗಳಿಗಾಗಿ ದೀರ್ಘವಾದ ಹೋರಾಟವನ್ನು ಈಗಲೂ ನಡೆಸುತ್ತಿದ್ದಾರೆ, ಎಂದು ನೆನಪಿಸಿದರು.

ಹೀಗೆ ಸಂಘ ಪರಿವಾರವು ಅನುಸರಿಸುತ್ತಿರುವ 'ಹಿಂದುತ್ವ'ದ ರಾಜಕೀಯ ಪ್ರಜಾಪ್ರಭುತ್ವವನ್ನು ನಿಷ್ಕ್ರಿಯಗೊಳಿಸುತ್ತಿದೆ. ಆದಿವಾಸಿ ಚಳುವಳಿಯ ಮೇಧಾ ಪಾಟ್ಕರ್ ಗುಜರಾತ್‌ಗೆ ಭೇಟಿ ನೀಡುವಾಗ ಅವರನ್ನು ಬೆನ್ನಟ್ಟಿ, ಸಮಾರಂಭಕ್ಕೆ ಭಾಗವಹಿಸದಂತೆ ಅಡ್ಡಿ ಮಾಡುತ್ತಾರೆ. ಇದರಿಂದಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಿಕೊಳ್ಳುವ ಚಳುವಳಿ ಅಗತ್ಯ ಎಂದು ತಿಳಿಸಿದರು.

ಸಾಮಾಜಿಕ ಸೌಹಾರ್ಧತೆ - ಶಿಕ್ಷಣ

ಕಾರ್ಯಕ್ರಮದಲ್ಲಿ ಎರಡನೇ ವಿಚಾರಗೋಷ್ಠಿ 'ಕೋಮು ಸೌಹಾರ್ದ ಕಾಪಾಡುವಲ್ಲಿ ಶಿಕ್ಷಣದ ಪಾತ್ರ'ದ ಬಗ್ಗೆ ಲಿಂಗದೇವರು ಹಳೆಮನೆ ಮಾತನಾಡುತ್ತಾ, ನಮ್ಮ ವರ್ತಮಾನದ ಕೋಮುವಾದದ ಕರಾಳ ಮುಖಗಳನ್ನು ನಿಯಂತ್ರಿಸುವಲ್ಲಿ ಹಾಗೂ ಕೋಮು ಸೌಹಾರ್ದತೆ ಕಾಪಾಡುವಲ್ಲಿ ಶಿಕ್ಷಣದ ಪಾತ್ರ ಹೇಗಿರಬೇಕು? ಮತ್ತು ಇದರ ಕುರಿತು ಗಂಭೀರ ಚರ್ಚೆ ಆಗಬೇಕಿದೆ. ನಮ್ಮ ಸಮಾಜದಲ್ಲಿ ಕುಟುಂಬ, ಸುತ್ತ ಮುತ್ತಲ ಪರಿಸರ ಪ್ರಭಾವಗಳಿಂದಾಗಿ ತಮ್ಮನಡೆ, ನುಡಿವಿಚಾರದಲ್ಲಿ ವಿದ್ಯಾರ್ಥಿಗಳು ಅನ್ಯಜಾತಿ ಮತ್ತು ಮತಗಳ ಬಗ್ಗೆ ತಮ್ಮದೆ ಆದ ಒಂದು ಮನಃಸ್ಥಿತಿಯನ್ನು ರೂಪಿಸಿಕೊಳ್ಳುತ್ತಾರೆ. ಆದ್ದರಿಂದ ನಾವು ಶಿಕ್ಷಣ ನೀಡುವಲ್ಲಿ ವಿದ್ಯಾರ್ಥಿಗಳಿಗೆ ಜಾತ್ಯಾತೀತ, ಮತಾತೀತ, ಮನೋಭಾವವನ್ನು, ಸಾಮಾಜಿಕ ಸೌಹಾರ್ದತೆಯನ್ನು ಉತ್ತೇಜಿಸಬೇಕು ಎಂದು ತಿಳಿಸಿದರು.

ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಜನಪ್ರಿಯವಾಗುತ್ತಿವೆ, ಬಹುತೇಕ ಶಾಲೆಗಳು ಧರ್ಮ ಮತ್ತು ಜಾತಿಯ ನೆಲೆಗಟ್ಟಿನ ಮೇಲೆ ನಿರ್ಮಿತವಾಗಿವೆ. ಅವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಮ್ಮ-ತಮ್ಮ ಶಿಕ್ಷಣ ಸಂಸ್ಥೆಗಳ ಪರಿಸರದಲ್ಲಿ ತಮ್ಮ-ತಮ್ಮ ಜಾತಿ/ಧರ್ಮಗಳ ಶ್ರೇಷ್ಠತೆಯನ್ನು ಸಾರುವಲ್ಲಿ ಪ್ರಯತ್ನಿಸುತ್ತಿವೆ ಎಂದರು. ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ ಬಹಳ ದೊಡ್ಡದು, ವಿದ್ಯಾರ್ಥಿಗಳಿಗೆ ಅವರು ಹೇಳಿದ್ದೆ ವೇದವಾಕ್ಯ ವಾಗಿರುತ್ತದೆ. ಆದರೆ ಇಂದು ಶಿಕ್ಷಕರಲ್ಲಿ ಎಷ್ಟು ಮಂದಿ ಜಾತ್ಯಾತೀತ ಮನೋಭಾವದವರಾಗಿ ದ್ದಾರೆ ಎಂದು ಪ್ರಶ್ನಿಸಿದರು. ಆದ್ದರಿಂದ ಶಿಕ್ಷಕರ ಪಾತ್ರ ಬಹು ಮುಖ್ಯವಾಗಿದೆ. ಅಲ್ಲದೆ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕೋಮುವಾದದ ಬಹುಮುಖವನ್ನು ತೆರೆದಿಡುತ್ತಿಲ್ಲ. ಎನ್.ಎಸ್.ಡಿ.ಯಂತಹ ರಂಗಶಿಕ್ಷಣದ ಮೂಲಕ ಶಿಕ್ಷಣ ಸಂಸ್ಥೆಗಳಲ್ಲಿ ಜಾತ್ಯಾತೀತ ಅರಿವನ್ನು ಮೂಡಿಸಲು ಪ್ರಯತ್ನಿಸಬೇಕು ಎಂದರು.

ಹಿಂದಿನ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ರಾಷ್ಟ್ರಮಟ್ಟದಲ್ಲಿ 'ನ್ಯಾಷನಲ್ ಕರಿಕ್ಯೂಲಮ್ ಪ್ರೇಂ ವರ್ಕ್' ಒಂದನ್ನು ರೂಪಿಸುವ ನೆಪದಲ್ಲಿ ಪಠ್ಯಕ್ರಮವನ್ನು ಕೇಸರಿಕರಣ ಮಾಡಲು ಪ್ರಯತ್ನಿಸಿತು ಮತ್ತು ಪಠ್ಯಕ್ರಮವನ್ನು ರೂಪಿಸಲು ಎನ್.ಸಿ.ಆರ್.ಟಿ. ಸಂಸ್ಥೆಗೆ ತಮ್ಮ ಮಾತನ್ನು ಕೇಳುವ ನಿರ್ದೇಶಕರನ್ನು ನೇಮಿಸಿ, ಇತಿಹಾಸದ ಪುಸ್ತಕಗಳನ್ನು ಪರಿಷ್ಕರಿಸುವ ನೆಪದಲ್ಲಿ ತನ್ನದೇ ಕೋಮುವಾದ ಸಿದ್ಧಾಂತವನ್ನು ತುಂಬುವ ಪ್ರಯತ್ನ ಮಾಡಿತ್ತು. ಆ ಸರ್ಕಾರ ಬಿದ್ದು ಹೋಗಿ ಹೊಸ ಸರ್ಕಾರ ಬಂದಿದೆ, ಹೊಸ ಸರ್ಕಾರ ಪಠ್ಯಕ್ರಮವನ್ನು ಪರಿಷ್ಕರಿಸುವ ಕೆಲಸಕ್ಕೆ ಕೈ ಹಾಕಿದೆ ಇದು ಸ್ವಾಗತರ್ಹಕ್ರಮವಾಗಿದೆ ಎಂದರು.

ಕೋಮುವಾದ ಎದುರಿಸುವಲ್ಲಿ

ವಿಚಾರವಾದಿ, ಡಾ. ಜಿ.ರಾಮಕೃಷ್ಣ ಅವರು, ಎಸ್.ಆರ್.ಭಟ್, ಜಿ.ರಾಜಶೇಖರ ಮತ್ತು ಕೆ.ಫಣಿರಾಜ್ ಅವರ 'ಕೋಮುವಾದದ ಕರಾಳ ಮುಖಗಳು' ಕೃತಿ ಬಿಡುಗಡೆ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐನ ಸಿದ್ದನಗೌಡ ಪಾಟೀಲ್ ಮಾತನಾಡುತ್ತಾ ತಾತ್ವಿಕವಾಗಿ, ಒಂದು ಸಮೂಹವಾಗಿ ಕೋಮು ವಾದವನ್ನು ಎದುರಿಸಲು ಎಡಪಂಥೀಯರು ಹಿಂದೆ ಬಿದ್ದಿಲ್ಲ. ಆದರೆ ಕೋಮುವಾದಿಗಳು ಇಂಥ ಶೋಷಿತ ಜನರ ಮಧ್ಯೆಯೇ ತಮ್ಮ ನೆಲೆಯನ್ನು ವಿಸ್ತರಿಸುತ್ತಿರುವುದನ್ನು ಗಮನಿಸಿದರೆ ಎಡ ಪಕ್ಷಗಳು ಮತ್ತು ಅವರ ಸಾಮೂಹಿಕ ಸಂಘಟನೆಗಳ ಮೇಲಿರುವ ಜವಾಬ್ದಾರಿ ಇನ್ನೂ ದೊಡ್ಡದಿದೆ. ಇಂದು ರೈತ, ಕಾರ್ಮಿಕ, ಕೂಲಿಕಾರ, ಯುವಕ, ವಿದ್ಯಾರ್ಥಿ ಇಂಥ ಸಮುದಾಯಗಳನ್ನು ಕೇವಲ ಸಂಘಟಿಸಿದರೆ ಸಾಲದು ಧರ್ಮ ಮತ್ತು ಧರ್ಮಾಂಧತೆಯನ್ನು ವಿಂಗಡಿಸಿ ನೋಡುವ ಶಕ್ತಿಯನ್ನು ಮತ್ತು ಮತಾಂಧರ ಹುನ್ನಾರವನ್ನು ಅರ್ಥ ಮಾಡಿಕೊಳ್ಳುವ ಶಕ್ತಿಯನ್ನು ಅವರಿಗೆ ಕೊಡಬೇಕಿದೆ ಎಂದರು. ವೇದಿಕೆಯಲ್ಲಿ ಜಿ.ರಾಜಶೇಖರ ಉಪಸ್ಥಿತರಿದ್ದರು. ಹಾಗೂ ಕಾರ್ಯಕ್ರಮಕ್ಕೆ ಸಾಹಿತಿಗಳು, ಪ್ರಗತಿಪರರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವರದಿ- ಕರಿಬಸಪ್ಪ.ಪಿ



ಪುಸ್ತಕ ಬಿಡುಗಡೆ : ಡಾ. ಜಿ.ಆರ್. ರಿಂದ. ವೇದಿಕೆಯಲ್ಲಿ ಫಣಿರಾಜ್, ಜಿ.ರಾಜಶೇಖರ್, ಬರಗೂರು, ಲಿಂಗದೇವರ ಹಳೆಮನೆ ಮತ್ತು ಸಿದ್ದನಗೌಡ ಪಾಟೀಲರು

ಜಾತಿ-ಜಾತಿಗಳ ವೈಷ್ಯಮ್ಯದ ವಿರುದ್ದ ಅಂತರ್‌ಜಾತಿ ವಿವಾಹ

ಇಂದು ಸಮಾಜದಲ್ಲಿ ಎಲ್ಲಿ ನೋಡಿದರಲ್ಲಿ ಜಾತಿಯ ಪ್ರಶ್ನೆಗಳು ಬೆಳೆಯುತ್ತಿದೆ. ಇದರಿಂದ ಸಮಾಜದಲ್ಲಿ ಅಸಮಾನತೆ, ಭೇದ ಭಾವ ತಾರತಮ್ಯಗಳು ತಾಂಡವವಾಡುತ್ತಿವೆ. ಅದರ ವಿರುದ್ಧ ನಿರಂತರ ಹೋರಾಟವನ್ನು ನಡೆಸುತ್ತಿರುವ ಕ್ರಾಂತಿಕಾರಿ ಯುವಜನ ಸಂಘಟನೆ ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಧನರಾಜ್ ಮತ್ತು ಜಿಲ್ಲಾ ಖಜಾಂಚಿ ಸ್ವರೂಪ ಇಬ್ಬರೂ ಜಾತಿ ವ್ಯವಸ್ಥೆಯನ್ನು ಮೆಟ್ಟಿ ಮೇ29 ರಂದು ಮದುವೆಯಾದರು.

ಈ ಅಂತರ ಜಾತಿ ಮದುವೆಯ ಸಮಾರಂಭವನ್ನು ಭಾರತ ಕಮ್ಯೂನಿಷ್ಟ ಪಕ್ಷ (ಮಾರ್ಕ್ಸ್‌ವಾದಿ) ಶ್ರೀರಾಮಪುರ ಪ್ರದೇಶ ಸಮಿತಿಯು ವ್ಯವಸ್ಥೆಗೊಳಿಸಿತು. ಈ ಕಾರ್ಯಕ್ರಮಕ್ಕೆ ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್. ನಾಗರಾಜ್, ಶಾಸಕರು ಪ್ರಗತಿಪರ ಸಾಹಿತಿಗಳು ಎಲ್.ಹನುಮಂತಯ್ಯ, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಅಧ್ಯಕ್ಷರಾದ ಕೆ.ಎನ್.ಉಮೇಶ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ, ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ ವಕೀಲರ ಸಂಘಟನೆಯ ವೆಂಕಟೇಶಗೌಡರೂ, ರೈತ ಸಂಘಟನೆಯ ಬಯ್ಯಾರೆಡ್ಡಿಯವರು ಮತ್ತು ಸಿಪಿಎಂ ಪ್ರದೇಶ ಸಮಿತಿ ಕಾರ್ಯದರ್ಶಿ ಕಾಂ। ಗೋಪಾಲಕೃಷ್ಣ ಮತ್ತು ಎಲ್ಐಸಿಯ ವಿಜಯಕುಮಾರ್ ಮುಂತಾದವರು ಭಾಗವಹಿಸಿದ್ದರು. ಈ ಮದುವೆಗೆ ಸಾಮೂಹಿಕ ಸಂಘಟನೆಯ ಮುಖಂಡರು, ಸ್ನೇಹಿತರು ಮತ್ತು ಸಂಬಂಧಿಕರು ಹಾಜರಿದ್ದರು. ಇಂದಿನ ಸಮಾಜದಲ್ಲಿ ಜಾತಿಯ ಅಪಾಯದ ಬಗ್ಗೆ ಸಮಾಜಕ್ಕೆ ಅದರಿಂದ ಆಗುವ ದಕ್ಕೆ ಯ ಬಗ್ಗೆ ಎಲ್ಲಾ ಜನವಿಭಾಗಗಳನ್ನು ಒಂದು ಗೂಡಿಸಿ ಮುದಕ್ಕೆ, ಇಂದಿನ ವ್ಯವಸ್ಥೆಯ ವಿರುದ್ದ ನಡೆದ ಹಲವಾರು ಜಾಗೃತಿಯ ಪ್ರಯತ್ನಗಳನ್ನು, ಅದು ವ್ಯಕ್ತಗೊಂಡ ಸಾಹಿತ್ಯ, ಹೋರಾಟ, ತ್ಯಾಗ ಬಲಿದಾನಗಳನ್ನು ನೆನಪಿಸುತ್ತಾ ಜೊತೆಗೆ ಇಂತಹ ಅಂತರ ಜಾತಿ ವಿವಾಹ ಬಹಳ ಪ್ರಮುಖ ವೆಂದು ಹಲವಾರು ಮುಖಂಡರು ತಿಳಿಸಿದರು.

ಧನರಾಜ್ ಮತ್ತು ಸ್ವರೂಪ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಗೆದ್ದು ಮದುವೆಯಾದರು. ಈ ಮದುವೆಗೆ ಬಂದ ಎಲ್ಲಾ ಜನವಿಭಾಗವೆ ಸಾಕ್ಷಿ. ನೂತನ ದಂಪತಿಗಳಿಗೆ ಶುಭ ಹಾರೈಕೆಗಳು.

ವರದಿ- ವಿನೋದ



ಈದ್ಗಾ ಮೈದಾನ ವಿವಾದ : ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರಲಿ

ಈದ್ಗಾ ಮೈದಾನದ ವಿವಾದದ ಬಗ್ಗೆ ನ್ಯಾಯಾಲಯದ ಸೂಚನೆಯಂತೆ ಉಭಯ ಪಕ್ಷಗಳ ನಡುವಿನ ಸಂಧಾನ ವಿಫಲವಾಗಿದೆ. ಇಂತಹ ಸನ್ನಿವೇಶದಲ್ಲಿ ಉಳಿದ ಹಾದಿಯೇನು?

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಭಾರತದ ತ್ರಿವರ್ಣ ಧ್ವಜ ಹಾರಿಸಿಬಿಟ್ಟರೆ ಮುಸ್ಲಿಂರ ದೇಶಪ್ರೇಮವೂ ಸಾಬೀತಾಗಿ, ಎಬ್ಬಿಸಲಾದ ವಿವಾದವೂ ಇತ್ಯರ್ಥವಾಗಿ ಬಿಡುತ್ತದೆ ಎಂದು ನಂಬಿಸಲಾದದ್ದು ವಿಶ್ವವಿಖ್ಯಾತ ಸುಳ್ಳುಗಾರ ಗೊಬೆಲ್ಸ್‌ನ ಸತ್ಯ ಮಾತ್ರ ಎಂದು ಪದೆ ಪದೇ ಸಾಬೀತಾಗುತ್ತಲೇ ಇದೆ. ವಿವಾದವನ್ನು ಹುಟ್ಟುಹಾಕಿ ರಕ್ತಸಿಕ್ತದ ರಂಪಾಟ ಮಾಡಿದ ಸಂಘ ಪರಿವಾರವೇ ಒಂದು ಬೇಡಿಕೆಯ ನಂತರ, ಮತ್ತೊಂದನ್ನು ಅದರ ಬಾಲಕ್ಕೆ ಇನ್ನೊಂದು ಬಾಯಿಯನ್ನು ಪೋಣಿಸುತ್ತಾ ವಿವಾದಗಳ ಸರಮಾಲೆ ಸೃಷ್ಟಿಸುತ್ತಿರುವುದು ಯಾರು ಅರಿಯದ ಸಂಗತಿಯೇನಲ್ಲ. ಈ 'ಖಾವೀ ಪಡೆ'ಗೆ ಸಮಸ್ಯೆ ಇತ್ಯರ್ಥವಾಗುವುದು ಬೇಕಿಲ್ಲ. ಇತ್ಯರ್ಥ ಪಡಿಸಬೇಕಾದ ಹಲವು ಜ್ವಲಂತ ಪ್ರಶ್ನೆಗಳೂ ಅದರ ಗುಪ್ತ ಅಜೆಂಡಾಕ್ಕೆ ಅಗತ್ಯವಲ್ಲ. ಮೈದಾನದಲ್ಲಿ ಧ್ವಜ ಹಾರಿಸುವುದೇ ನಿಜವಾದ ಸಮಸ್ಯೆಯಾಗಿದ್ದರೆ ತಕರಾರುಗಳು ಎಂದಿಗೋ ಮುಗಿದುಹೋಗುತ್ತಿದ್ದವು. ಧ್ವಜ ಹಾರಿಸುವ ನೆಪದಲ್ಲಿ ಕೋಮುವಿಭಜನೆ ತಂದು ಉದ್ರಿಕ್ತತೆ ಸೃಷ್ಟಿಸಿ 1994 ರ ಆಗಸ್ಟ್ 15 ರ ಗೋಲಿಬಾರಿನಲ್ಲಿ ಐದು ಜನ ಅಮಾಯಕರ ಜೀವ ಹತ್ಯೆಗೆ ಕಾರಣವಾದದ್ದು ಈ ಚೆಡ್ಡಿ ಪಡೆಗಳೇ. ಸೌಹಾರ್ದತೆ, ಶಾಂತಿಕದಡುವ ಮೂಲಕ ಕಾನೂನು-ಸಂವಿಧಾನ ಉಲ್ಲಂಘಿಸಿದ್ದರಿಂದ ಆಡಳಿತ ಹಾಕಿದ ಮೊಕದ್ದಮೆಗಳನ್ನೇ ನಾಚಿಕೆ ಇಲ್ಲದೇ, ವಿಜೃಂಭಿಸಿ, ನಿರುದ್ಯೋಗಿಯಾಗಿದ್ದ ಉಮಾಭಾರತಿಯ ತಿರಂಗ ಯಾತ್ರೆಯನ್ನು ನಡೆಸಿ ರಾಜಕೀಯ ದುರ್ಲಾಭ ಹೊಡೆಯಲು ಬಿಜೆಪಿ-ಪರಿವಾರ ಮುಂದಾದದ್ದು ಈಚೆಗಿನ ಪ್ರಹಸನ. (ದೆಹಲಿ ಸೇರುವ ಒಳಗೆ ಉಮಾಭಾರತಿ ಸೀಟು ಅಲ್ಲಾಡಿ ರಾಜಕೀಯ ಸನ್ಯಾಸತ್ವದ ಸಂಕಲ್ಪಯಾತ್ರೆಯಾದದ್ದು ವ್ಯಂಗ್ಯವೇ ಸರಿ) ಅಂದರೆ ಈ ವಿಷಯವನ್ನು ಜೀವಂತವಾಗಿಟ್ಟರೆ ಮಾತ್ರ ಮತದಾರರ ಓಟು ಗಿಟ್ಟುತ್ತದೆ ಎಂಬುದನ್ನು ಖಾವಿ ಪಡೆ ನೆಚ್ಚಿಕೊಂಡಿದೆ. ಹೀಗಾಗಿ ಅದನ್ನು ಕೆಣಕುತ್ತಲೇ ಇರುತ್ತದೆ. ಬೇರೆಯವರು ಅಲ್ಪ ಸಂಖ್ಯಾತರ ಓಟು ಗಿಟ್ಟಿಸುವ ರಾಜಕೀಯ ಮಾಡುವವರೆಂದು ದೂಷಿಸುತ್ತಿರುತ್ತದೆ.

ಪ್ರಸ್ತುತ ಪ್ರಶ್ನೆಯೆಂದರೆ ಈದ್ಗಾ ಮೈದಾನದ ಕುರಿತ ಹಲವಾರು ವಿವಾದಗಳ ಮೊಕದ್ದಮೆಯು ಸುಪ್ರೀಂಕೋರ್ಟ್‌ನ ಮುಂದಿದೆ. ಹುಬ್ಬಳ್ಳಿಯ ಅಂಜುಮಾನ್ ಸಂಸ್ಥೆ ತನ್ನ ಅನುಭೋಗ ವ್ಯಾಪ್ತಿಯಲ್ಲಿರುವ ಈದ್ಗಾ ಮೈದಾನದಲ್ಲಿ ಇಸ್ಲಾಂ ಪವಿತ್ರ ಹಬ್ಬದ ಸಂದರ್ಭಗಳಲ್ಲಿ ನಮಾಜು ಪ್ರಾರ್ಥನೆಗೆ ಬಳಸುತ್ತಾ ಬಂದಿದೆ. ಅಲ್ಲದೆ ಈ ಪ್ರದೇಶವ್ಯಾಪ್ತಿಯಲ್ಲಿ ಈಗಿರುವ ನಾಲ್ಕು ಮಳಿಗೆಗಳ ದುರಸ್ತೀಕರಣ, ಹೊಸ ಮಳಿಗೆಗಳ ನಿರ್ಮಾಣ ಹಾಗೂ ಮೈದಾನಕ್ಕೆ ಬೇಲಿ ಹಾಕುವುದನ್ನು ಒಳಗೊಂಡ ಕ್ರಮಗಳನ್ನು ಆರ್‌ಎಸ್‌ಎಸ್ ಆಕ್ಷೇಪಿಸಿ ವಿವಾದ ಎಬ್ಬಿಸಿತು. ಇದಕ್ಕೆ ಧ್ವಜಾರೋಹಣದ 'ದೇಶಪ್ರೇಮ'ವನ್ನು ಹೊದಿಸಿ ರಕ್ಷಣಾಗುರಾಣಿಯಾಗಿ ಬಳಸಿತು. ಈದ್ಗಾ ಮೈದಾನದ ಒಡೆತನದ ಪ್ರಶ್ನೆಯನ್ನು ಒಳಗೊಂಡು ಎತ್ತಲಾದ ಏಳು

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ವಿಷಯಗಳು ಸುಪ್ರೀಂಕೋರ್ಟ್‌ನವರೆಗೂ ಹೋಗಿರುವಾಗ, ನ್ಯಾಯಾಲಯವು ಈ ಬಗ್ಗೆ ತೀರ್ಪು ನೀಡುವ ಮೊದಲು ಉಭಯ ಪಕ್ಷಗಳ ನಡುವೆ ಮಾತುಕತೆ ಸಂಧಾನ ನಡೆಸಲು ಕೇಳಿತು. ಅಲ್ಲಿ ಬಂದ ಅಭಿಪ್ರಾಯಗಳನ್ನು ತನ್ನ ಮುಂದೆ ಮಂಡಿಸಲು ಸರ್ಕಾರಕ್ಕೆ ಸೂಚನೆ ನೀಡಿತು. ಇದಕ್ಕಾಗಿ ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಹೆಚ್.ಕೆ.ಪಾಟೀಲರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಆದರೆ ಅದು ಕಾರ್ಯವೆಸಗದೇ ಇದ್ದುದರಿಂದ, ಈಗ ಪೌರಾಡಳಿತ ಸಚಿವ ಮೋರೆಯವರ ನೇತೃತ್ವದಲ್ಲಿ ಸಮಿತಿಯು ಪುನರ್ ರಚನೆಗೊಂಡಿತ್ತು. ಅದರಂತೆ ಏಳು ಬಾರಿ ಈ ಸಮಿತಿಯು ಸಭೆ ಸೇರಿ ಸಂಧಾನ ರೂಪಿಸಲು ಯತ್ನಿಸಿದೆಯಂತೆ. ಒಮ್ಮತ ಏರ್ಪಡದೇ ಇರುವುದರಿಂದ ಅಲ್ಲಿನ ಅಭಿಪ್ರಾಯಗಳನ್ನು ಯಥಾವತ್ತಾಗಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಮೋರೆಯವರು ಹೇಳಿದ್ದಾರೆ.

ಈ ಮೊದಲು ಇಂತಹ ಸಂಧಾನವನ್ನು ನಡೆಸಲು ಹುಬ್ಬಳ್ಳಿಯ ಮೂರು ಸಾವಿರ ಮಠದ ಸ್ವಾಮೀಜಿಯವರ ನೇತೃತ್ವದಲ್ಲಿ ಒಂದು ಪ್ರಯತ್ನವನ್ನು ಸರ್ಕಾರ ಮಾಡಿತ್ತು. ಅದು ಯಶಸ್ವಿಯಾಗಲಿಲ್ಲ. ಈ ಸ್ವಾಮೀಜಿಯವರು ಸಂಘ ಪರಿವಾರದ ಒಟ್ಟು ಚಟುವಟಿಕೆಗಳಿಗೆ ಪ್ರೋತ್ಸಾಹಕರು ಎಂಬ ದೂರುಗಳೂ ಕೇಳಿಬಂದಿದ್ದವು. ಅವರು ಸೂಚಿಸಿದ, ಸೂಚಿಸುವ ಪರಿಹಾರಗಳ ದಿಕ್ಕು ಎಂತಹದ್ದು ಎಂದು ಬಂದ ಸೂಚನೆಗಳಿಂದಲೇ ಗಣಿಸಬಹುದಾಗಿತ್ತು.

ಈಗಿನ ಪ್ರಶ್ನೆ ಎಂದರೆ ಸರ್ಕಾರವೇನೋ ತನ್ನ ಪಾಲಿನ ಕೆಲಸ ಮುಗಿಸಿದೆ. ಅಭಿಪ್ರಾಯವನ್ನು, ಪರಿಹಾರಾತ್ಮಕ ಸೂಚನೆಗಳನ್ನು ನ್ಯಾಯಾಲಯಕ್ಕೂ ತಿಳಿಸಬಹುದು. ಸಚಿವ ಮೋರೆಯವರ ಹೇಳಿಕೆ ಮೇಲೆಯೇ ಬಿಜೆಪಿ-ಸಂಘ ಪರಿವಾರದ ಸಂಘಟನೆಗಳು ಹರಿಹಾಯ್ದಿವೆ. ಉಭಯ ಬಣಗಳು ಒಂದು ಸಂಧಾನಕ್ಕೆ ಬರಲಾಗದೇ ಇರುವ ಸನ್ನಿವೇಶದಲ್ಲಿ ಉಚ್ಚ ನ್ಯಾಯಾಲಯ ಕೊಡುವ ತೀರ್ಪಿಗೆ ಎಲ್ಲರೂ ಬದ್ಧರಾಗಬೇಕು.

ಈ ವಿವಾದವನ್ನು ಹಿಂದೂ-ಮುಸ್ಲಿಂ ಜನಾಂಗಗಳ ನಡುವಿನ ಪ್ರಶ್ನೆ ಎಂಬಂತೆ ಬಿಂಬಿಸುವುದು ನಿಲ್ಲಬೇಕು. ಹೀಗೆ ಮಾಡಬಯಸುವ ಸಂಘ ಪರಿವಾರಕ್ಕೆ ನಿಶ್ಚಿತ ರಾಜಕೀಯ ಲಾಭ ಹೊಡೆವ ಲೆಕ್ಕಾಚಾರವಿದೆ. ಇಂದಿನ ಅತ್ಯಂತ ತುರ್ತು ಪ್ರಶ್ನೆ ಎಂದರೆ ಇಂತಹ ರಾಜಕೀಯ ಹುನ್ನಾರಗಳನ್ನು ಜನತೆ ಅರಿತು, ಅದನ್ನು ಎದುರಿಸುವುದು ಅಗತ್ಯವಿದೆ. ಕೋಮುವಿಭಜನೆ ತರಲುಬಯಸುವ ಹಿಂದುತ್ವದ ಫ್ಯಾಸಿಸ್ಟ್ ಮಾದರಿ ಪ್ರಭುತ್ವ ಸ್ಥಾಪಿಸುವ ಗುರಿ ಇರಿಸಿಕೊಂಡವರಿಗೆ ಇವಾವೂ ಸಮಸ್ಯೆಗೆ ಇತ್ಯರ್ಥ ಎನ್ನಿಸಿಸದೇ ಹೋಗುತ್ತದೆ.

ಆದ್ದರಿಂದ ಕೋಮುವಾದಿಗಳನ್ನು - ಮತೀಯ ಮೂಲಭೂತವಾದವನ್ನು- ರಾಜಕೀಯ ದುರ್ಲಾಭಕ್ಕಾಗಿ ಬಳಸುವುದನ್ನು ಎದುರಿಸಿ ಸೋಲಿಸಬೇಕು.

ಉಪಚುನಾವಣೆ: ಮತದಾರರು ಮುನಿದಿದ್ದಾರೆಯೇ? ಹಣಾಹಣಿ ಪ್ರಚಾರವಿದ್ದರೂ ಮತದಾನಕ್ಕೆ ಜನರೇಕೆ ಬರಲಿಲ್ಲ?

ಶಿವಮೊಗ್ಗ ಪಾರ್ಲಿಮೆಂಟ್ ಸ್ಥಾನ, ಚಾಮರಾಜಪೇಟೆಯ-ವಿಧಾನ ಸಭಾ ಸ್ಥಾನಕ್ಕಾಗಿ ನಡೆದ ಉಪ ಚುನಾವಣೆಯಲ್ಲಿ ಜೂನ್ 2 ರಂದು ಮತದಾನ ಮುಗಿದಿದೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ದಿಸಿದ ರಾಜಕೀಯ ಪಕ್ಷಗಳು ಗೆಲುವಿಗಾಗಿ ನಡೆಸಿದ್ದ ಹಣಾಹಣಿ, ಆಕ್ರಮಣಕಾರಿ ಪ್ರಚಾರ, ಹಣದ ವೆಚ್ಚ- ಮಿತಿ ಮೀರಿತ್ತು. ಶಿವಮೊಗ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ಪರವಾಗಿ ಮುಖ್ಯಮಂತ್ರಿ, ಒಳಗೊಂಡು ಇಡೀ ಸಚಿವರು, ನಾಯಕರು, ಜನತಾದಳ (ಜಾತ್ಯಾತೀತದ) ಮಾಜಿ ಪ್ರಧಾನಿ ದೇವೆಗೌಡರನ್ನು ಒಳಗೊಂಡು ಪದಾಧಿಕಾರಿಗಳು, ಸಚಿವರು, ಬಿಜೆಪಿ ನಾಯಕರು ಕುಖ್ಯಾತ ನರೇಂದ್ರಮೋದಿ, ಸಮಾಜವಾದಿ ಪಕ್ಷದ ಮುಲಾಯಂಸಿಂಗ್ ಯಾದವ್ ಮುಂತಾದವರು, ಹೀಗೆ ಕ್ಷೇತ್ರದಲ್ಲಿ ಬೀಡುಬಿಟ್ಟು ಮತದಾರರ ಮನಗೆಲ್ಲಲು ಅಹೋರಾತ್ರ ಶ್ರಮಿಸಿದ್ದಾರೆ. ಚಾಮರಾಜ ಪೇಟೆಯೂ ಸಹ ಇಂತಹದ್ದೇ ಪ್ರಚಾರದ ಬಿರುಸು ಕಂಡಿದೆ. ಇಷ್ಟೆಲ್ಲಾ ವರಸೆ ಗಳಿದ್ದರೂ ಮತದಾನ ಮಾತ್ರ ನೀರಸವಾಗಿರುವುದನ್ನು ಗಮನಿಸಬೇಕಾದ ಅಂಶ. ಶಿವಮೊಗ್ಗ ಲೋಕ ಸಭಾ ಕ್ಷೇತ್ರದಲ್ಲಿ ಶೇ 44.05 ರಷ್ಟು, ಚಾಮರಾಜಪೇಟೆ ಶೇ 58 ರಷ್ಟು ಮತದಾನ ಆದ ವರದಿ ಇದೆ.



ಮತದಾರರನ್ನು ಮನ ಮೋಲಿಸಲು ಇಷ್ಟೆಲ್ಲಾ ಯತ್ನಿಸಿದರೂ ಮತದಾರರು ಯಾಕೆ ಪೂರ್ಣವಾಗಿ ಮತದಾನಕ್ಕೆ ಬರಲಿಲ್ಲ, ಉತ್ಸಾಹವೇಕೆ ಕಾಣಲಿಲ್ಲ. ಈ ಪಕ್ಷಗಳು - ಅಭ್ಯರ್ಥಿಗಳ ಬಗ್ಗೆ, ರಾಜ-ಕಾರಣದ ಬಗ್ಗೆ ಭ್ರಮನಿರಸನವೇ? ಜೊತೆಗೆ ಮತದಾರನ ಕೋಪ-ಮುನಿಸು ಕೂಡ. ನಂತರ ವಿವರವಾದ ವಿಮರ್ಶೆ ಮಾಡೋಣ.

ಉತ್ತರ ಕರ್ನಾಟಕದಲ್ಲಿ ಶಕ್ತಿಕ್ರೋಡಿಕರಣದತ್ತ ಜೆಡಿ(ಎಸ್) ಯತ್ನ

ತನ್ನ ಶಕ್ತಿಯ ಕ್ರೋಢೀಕರಣಕ್ಕೆ ಜೆಡಿ(ಎಸ್) ಇಳಿದಿದೆ.ಆದರೆ ಕೋಮುವಾದ ಎದುರಿಸುವ ಮಾತು ಯಾಕೆ ಕೇಳಿಬರುತ್ತಿಲ್ಲ?

ಕರ್ನಾಟಕದ ಮೈತ್ರಿಕೂಟದ ಸರ್ಕಾರದ ಭಾಗೀದಾರ ಪಕ್ಷಗಳಾದ ಜೆಡಿಎಸ್ ಮತ್ತು ಕಾಂಗ್ರೆಸ್ ನ ನಡುವೆ ನಡೆಯುತ್ತಿದ್ದ ವಾಕ್ಸಮರದಿಂದ ಈ ಸರ್ಕಾರದ ಬಗ್ಗೆ ಜನತೆಯ ಆಗುತ್ತಿದ್ದ ಗೊಂದಲ, ಭ್ರಮನಿರಸ, ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸುವ ಗುರಿಯನ್ನು ಇಬ್ಬರೂ ಮರೆತಿರುವ ಬಗ್ಗೆ ಹಿಂದೆ ವಿವರವಾಗಿ ಪ್ರಸ್ತಾಪಿಸಲಾಗಿದೆ. ಇದರ ಜೊತೆಗೇ ಜೆಡಿ(ಎಸ್)ನ ನಾಯಕತ್ವ ವಿರೋಧಪಕ್ಷದ ಸ್ಥಾನವನ್ನು ಹಿಡಿಯುವ ಪ್ರಯತ್ನದ ಬಗ್ಗೆ ಹಾಗೂ ವಿವಿಧ ಜಿಲ್ಲೆಗಳಲ್ಲಿ ತನ್ನ ಶಕ್ತಿಯನ್ನು ಕ್ರೋಡಿಕರಿಸಲು ಇದೇ ಸಮಯದಲ್ಲಿ ಮುಂದಾಗಿತ್ತಿರುವ ಬಗ್ಗೆ ಗಮನಸೆಳೆಯಲಾಗಿತ್ತು.

ಉಪ ಚುನಾವಣೆಯ ಹಣಾಹಣಿಯ ನಡುವೆಯೂ ಈ ಪ್ರಕ್ರಿಯೆಯನ್ನು ಜೆಡಿ(ಎಸ್) ಮುಂದುವರೆಸಿದೆ. ಈ ವಾರದಲ್ಲಿ ಅದು ಹುಬ್ಬಳ್ಳಿ ನಗರದಲ್ಲಿ ಭಾರೀ ಸಮಾವೇಶ ನಡೆಸಿದೆ. ಪೂರ್ವಭಾವಿ ತಯಾರಿಯಾಗಿ ತಾಲೂಕುವಾರಾಗಿ ಜೆಡಿ(ಎಸ್)ನ ನಾಯಕರು, ಕುಮಾರಸ್ವಾಮಿ ಓಡಾಡಿದ್ದಾರೆ.

ಈ ಸಮಾವೇಶದ ಇನ್ನೊಂದು ವಿಶೇಷತೆಯೆಂದರೆ ಹೊರ ಹೋಗಿರುವ ಜನತಾ ಪರಿವಾರದಲ್ಲಿ ಕೆಲವರನ್ನಾದರೂ ಪುನಃ ಪಕ್ಷಕ್ಕೆ ಸೆಳೆಯುವ ಯತ್ನ, ಅದರಂತೆ ಈಗ ಇತರೆ ಪಕ್ಷಗಳಲ್ಲಿದ್ದ ಕೆಲವು ಪ್ರಮುಖರನ್ನು ಜೆಡಿ(ಎಸ್)ಗೆ ಸೇರಿಸಿಕೊಂಡಿದ್ದು. ಜೊತೆಗೆ ಜೆಡಿ(ಯು)ನ ಐವರು ಶಾಸಕರು ಜೆಡಿ(ಎಸ್) ಸೇರುವ ಸುದ್ದಿಯೂ ಬಂದಿದೆ. ಉತ್ತರ ಕರ್ನಾಟಕದಲ್ಲಿ ಪಕ್ಷ ಬಲಪಡಿಸಿ ಕೊಳ್ಳುವ ಯತ್ನವಿದೆ ಎಂಬುದು ನಿಜ ಆಗಿದೆ. ಈ ಪ್ರದೇಶದಲ್ಲಿ ಬೇರೂರುತ್ತಿರುವ ಕೋಮುವಾದಿ ಬಿಜೆಪಿಯ ವಿರುದ್ಧ ಹೋರಾಡುವ ರಾಜಕೀಯ ಗುರಿ ಸಾರ್ವಜನಿಕರೆದರು ತೆರೆದಿಡದೇ ಹೋಗಿರುವುದು ಸರಿಯಲ್ಲ.

ಬಾಬಾ ಬುಡನ್‌ಗಿರಿ: ಗುಹೆಯ ಪರಿಸರದಲ್ಲಿ ಏನು ನಡೆದಿದೆ?

ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯ ದರ್ಗಾ-ದತ್ತಪೀಠದ ಸುತ್ತಲೂ ಈಗ ಹೊಸದೊಂದು ವಿವಾದ. ಜಿಲ್ಲಾಡಳಿತ ಕೈಗೊಂಡಿರುವ ಕೆಲವು 'ಅಭಿವೃದ್ಧಿ ಕಾಮಗಾರಿ'ಗಳು ಶತಶತಮಾನಗಳ ಕಾಲ ಇದ್ದ ಪದ್ಧತಿ-ಪರಿಸರ ಸ್ಥಿತಿಗತಿಗೆ ಹಾನಿ ತರುತ್ತಿವೆಯೇ ಎಂಬುದು.

ಆ ಪ್ರದೇಶವನ್ನು ಪ್ರವಾಸಿಗರಿಗಾಗಿ ಅಭಿವೃದ್ಧಿಪಡಿಸಲೆಂದು ಗುಹೆಯ ಹತ್ತಿರದಲ್ಲಿ ಉದ್ಯಾನವನ ನಿರ್ಮಿಸುತ್ತಿದ್ದೇವೆ ಎನ್ನುತ್ತಾರೆ ಜಿಲ್ಲಾಡಳಿತ. ಇಲ್ಲಿ ತೋಡಿದ ಮಣ್ಣು ಅಲ್ಲಿರುವ ಗೋರಿಗಳನ್ನು ಮುಚ್ಚುತ್ತಿರುವುದಾಗಿ ಕೆಲವರಿಂದ ಆಕ್ಷೇಪಣೆ ಬಂದಿದೆ. ಜಿಲ್ಲಾಡಳಿತದ 'ಕಾಮಗಾರಿ'ಗಳು ಇಲ್ಲಿಗೇ ನಿಲ್ಲದೇ ಶಾಖಾದ್ರಿಯವರ ಕಛೇರಿಗೆ ಬೀಗ ಹಾಕಿದೆ. ಈ ಪರಿಸರದಲ್ಲಿ ಎಂದಿನಂತೆ ಮಾಂಸಾಹಾರ ಸಿದ್ಧಗೊಳಿಸುತ್ತಿದ್ದವರನ್ನು ಪೊಲೀಸ್ ಠಾಣೆಗೆ ಒಯ್ಯಲಾಗಿದೆ. ಕಾಣಿಕೆ ಡಬ್ಬ ವಶಪಡಿಸಿಕೊಂಡು ಆಡಳಿತಾಧಿಕಾರಿ ಸಿಬ್ಬಂದಿ ನೇಮಕವನ್ನು ಮಾಡಲಾಗಿದೆಯೆಂಬ ವರದಿಗಳು ಬಂದಿವೆ. ವಿಶೇಷವೆಂದರೆ ದತ್ತ ಜಯಂತಿಯ ನೆಪದಲ್ಲಿ ಇಲ್ಲದ ಆಚರಣೆಗಳನ್ನು ಸ್ಥಾಪಿಸುವ, ಕೋಮು ದ್ವೇಷ ಹುಟ್ಟಿಸುವ ಕಾರ್ಯದಲ್ಲಿ ನಿರತವಾಗಿ, ಆದರೆ ನ್ಯಾಯಾಲಯದ ನಿರ್ದೇಶನದಂತೆ ಯಥಾಸ್ಥಿತಿ ಕಾಪಾಡುವ ಬಗ್ಗೆ ಬಿಗಿ ನಿಲುವು-ಕ್ರಮ ತಳೆದ ಆಡಳಿತದ ಮೇಲೆ ತೀವ್ರ ಧಾಳಿಗೆ ಇಳಿದಿದ್ದ ಸಂಘ ಪರಿವಾರಿಗಳು, ಬಜರಂಗದಳ ಹಾಗೂ ಶಾಸಕ ಸುನೀಲ್ ಕುಮಾರ್ ಗುಂಪು ಈಗ ನಡೆಯುತ್ತಿರುವುದನ್ನು ಸ್ವಾಗತಿಸಿದೆ! ಅಲ್ಲಿನ ಪರಿಸರ-ಪರಂಪರೆ, ಸ್ಥಿತಿಗತಿ ಕಾಯುವ ಹೊಣೆ ಹೊತ್ತಿರುವ ಜಿಲ್ಲಾಡಳಿತ-ಸರ್ಕಾರ ಈಗ ಮೇಲೆ ತಿಳಿಸಲಾದಂತಹ ಗಂಭೀರವಾದ - ಕಾಮಗಾರಿಗಳನ್ನು ನಡೆಸುತ್ತಿದೆ!



ಗಿರಿಗೆ ಸಚಿವರ ಶಿವರಾಂ ಭೇಟಿ, ಹೊರಬರದ ವರದಿ?

ಇದಕ್ಕೆ ಸರ್ಕಾರದ ನಿರ್ದೇಶನವಿದೆಯೇ? ಇದ್ದಲ್ಲಿ ಈ ಕ್ರಮಗಳನ್ನು ಕೈಗೊಳ್ಳುವ ಮೊದಲು ಸಾರ್ವಜನಿಕವಾಗಿ ಯಾಕೆ ಬಹಿರಂಗ ಪಡಿಸಲಿಲ್ಲ. ಯಾಕೆ ಸಂಬಂಧಿಸಿದವರೊಂದಿಗೆ, ನಾಗರಿಕ ಸಂಘಟನೆಗಳೊಂದಿಗೆ ಸಮಾಲೋಚಿಸಲಿಲ್ಲ. ಪಾರದರ್ಶಕ ಸರ್ಕಾರದ ಮುಚ್ಚಿಟ್ಟ ಈ ಕಾರ್ಯಾಚರಣೆ ಅರ್ಥ ಏನು?

ಆದ್ದರಿಂದ ಸರ್ಕಾರ ಅದನ್ನು ತಾತ್ಕಾಲಿಕವಾಗಿ ನಿಲುಗಡೆ ಗೊಳಿಸಿ, ಎಲ್ಲಾ ವಿವರಗಳನ್ನು ಬಹಿರಂಗಪಡಿಸಬೇಕು. ನ್ಯಾಯಾಲಯದ ಆದೇಶಪಾಲಿಸಬೇಕು. ಪರಂಪರೆ, ಉಲ್ಲಂಘನೆ ಆಗಬಾರದು.

ಎಪಿಎಂಸಿ 'ಮಾದರಿ ಕಾನೂನು - 2003'ನ್ನು ವಿರೋಧಿಸಿ
ಜೂನ್ 7 ರಂದು ರಾಜ್ಯಾದ್ಯಂತ ಎಪಿಎಂಸಿಗಳ ಬಂದ್

ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗಳ ಮಾರುಕಟ್ಟೆಯ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ ನೆಪವನ್ನು ಹೇಳುತ್ತಾ, ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸುವ, ವೃತ್ತಿಪರತೆ, ಸ್ಪರ್ಧೆಯನ್ನು ಹೆಚ್ಚಿಸಿ ರೈತರನ್ನು ಉದ್ಧಾರ ಮಾಡುವ ಹೆಸರಿನಲ್ಲಿ 'ಕೃಷಿ ಉತ್ಪನ್ನಗಳ ಮಾರುಕಟ್ಟೆ ಮಾದರಿ ಕಾನೂನು - 2003'ರ ಮೂಲಕ ಇಡೀ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಖಾಸಗಿ ಕಂಪನಿ, ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಒಪ್ಪಿಸಲು ಹಾಗು "ಕಾಂಟ್ರಾಕ್ಟ್ ಬೇಸಾಯ" ಪದ್ಧತಿಯಿಂದ ರೈತರನ್ನು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರನ್ನಾಗಿ ಮಾಡಲು ಹೊರಟಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳನ್ನು ವಿರೋಧಿಸಿ, ಐಕ್ಯ ಚಳುವಳಿಯ ಪ್ರಥಮ ಹಂತದ ಚಳುವಳಿಯಾಗಿ ಜೂನ್ 7 ರಂದು ರಾಜ್ಯಾದ್ಯಂತ ಎಪಿಎಂಸಿ ಮಾರುಕಟ್ಟೆಗಳನ್ನು ಬಂದ್ ಮಾಡಿ, ಜಿಲ್ಲಾಧಿಕಾರಿಗಳ ಕಛೇರಿಗಳ ಎದುರು ಬೃಹತ್ ಪ್ರತಿಭಟನಾ ಧರಣೆಯನ್ನು ಸಂಘಟಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಎಪಿಎಂಸಿಗಳ ವರ್ತಕರ ಸಂಘಗಳು, ಯಾರ್ಡ್‌ಗಳ ಗುಮಾಸ್ತರ ಸಂಘಗಳು, ಹಮಾಲರ ಸಂಘಗಳ ಕೂಡಿ ರಚನೆಗೊಂಡಿರುವ 'ಎಪಿಎಂಸಿ ಮಾದರಿ ಕಾನೂನು - 2003 ವಿರೋಧಿ ಹೋರಾಟ ಸಮಿತಿ'ಯ ಆಶ್ರಯದಲ್ಲಿ ಸಂಘಟಿಸಲಾಗುತ್ತಿರುವ ಈ ಐಕ್ಯ ಚಳುವಳಿಯಲ್ಲಿ ರೈತರು, ವರ್ತಕರು, ಹಮಾಲರು ಮಾತ್ರವಲ್ಲದೆ 'ಆಹಾರ ಭದ್ರತೆ' 'ಕೃಷಿ ಅಭಿವೃದ್ಧಿ' ಮತ್ತು ದೇಶದ ಸ್ವಾತಂತ್ರ್ಯ, ಸ್ವಾವಲಂಬನೆಯನ್ನು ಬಯಸುವ ಎಲ್ಲಾ ದೇಶ ಪ್ರೇಮಿ ಶಕ್ತಿಗಳು, ಸಂಘಟನೆಗಳು ಭಾಗವಹಿಸಬೇಕೆಂದು ಹೋರಾಟ ಸಮಿತಿ ವಿನಂತಿಸಿದೆ.

ರೈತರು, ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆಯ ದಾರಿ ಹಿಡಿದಿರುವ ಸಂದರ್ಭದಲ್ಲಿ ರೈತರ ಪರವಾಗಿ ಮಧ್ಯೆ ಪ್ರವೇಶ ಮಾಡುವಂತಹ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸುವ ಮತ್ತು ಬಲಪಡಿಸುವ ಬದಲಿಗೆ ಕೃಷಿ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಲು ಮತ್ತು ಚುನಾಯಿತ ಸಮಿತಿಗಳನ್ನು ರದ್ದುಪಡಿಸಿ ಅಧಿಕಾರಿಶಾಹಿಗಳಿಂದ ಕೂಡಿದ ಸರ್ಕಾರ ನೇಮಿಸುವ ಸಮಿತಿಗಳ ಮೂಲಕ ಮಾರುಕಟ್ಟೆಯ ಮೇಲೆ ಇದ್ದ ಅಲ್ಪ ಸ್ವಲ್ಪ 'ಸಾಮಾಜಿಕ ನಿಯಂತ್ರಣ'ವನ್ನು ಬಲಹೀನಗೊಳಿಸಿ "ಮಾದರಿ ಕಾನೂನು 2003"ರನ್ವಯ "ಖಾಸಗಿ ಮಾರುಕಟ್ಟೆ" "ವಿಶೇಷ ಮಾರುಕಟ್ಟೆ"ಗಳನ್ನು ಸ್ಥಾಪಿಸಲು ಹಾಗು "ಕಾಂಟ್ರಾಕ್ಟ್ ಬೇಸಾಯ" ಪದ್ಧತಿಯನ್ನು ದೊಡ್ಡ ಪ್ರಮಾಣದಲ್ಲಿ ಜಾರಿಗೊಳಿಸಿ, ರೈತರು, ಹಮಾಲರು, ವರ್ತಕರನ್ನು ದಿವಾಳಿ ಮಾಡಲು ಈ ಹಿಂದಿನ ಬಿಜೆಪಿ ನಾಯಕತ್ವದ ಎನ್‌ಡಿಎ ಸರ್ಕಾರ ಈ ಮಾದರಿ ಕಾನೂನನ್ನು ರೂಪಿಸಿತ್ತು. ಈ ಕಾನೂನನ್ನು ಯಥಾವತ್ತಾಗಿ ಜಾರಿ ಮಾಡಲೇಬೇಕೆಂದು, ಇಲ್ಲವಾದಲ್ಲಿ ರಾಜ್ಯಗಳಿಗೆ ನೀಡಬೇಕಿರುವ 'ನಿಧಿ'ಗಳನ್ನು ನಿಲ್ಲಿಸಲಾಗುವುದೆಂದು ಬೆದರಿಕೆ ಹಾಕುತ್ತಿದೆ ಇವತ್ತಿನ ಕಾಂಗ್ರೆಸ್ ನಾಯಕತ್ವ ಯುಪಿಎ ಕೇಂದ್ರ ಸರ್ಕಾರ. ಈ ಸರ್ಕಾರಗಳ ಈ ಕ್ರಮಗಳನ್ನ ಹೋರಾಟ ಸಮಿತಿ ತೀವ್ರವಾಗಿ ಖಂಡಿಸಿದೆ. ಈ ಕಾನೂನು ವಾಪಸು ಪಡೆಯಬೇಕೆಂದು ಒತ್ತಾಯಿಸಿದೆ.

'ಕೃಷಿ' ರಾಜ್ಯಗಳ ವಿಷಯವಾಗಿದೆ. ಈ ಮಾದರಿ ಕಾನೂನು ಜನ ವಿರೋಧಿಯಾಗಿರುವ ಕಾರಣಗಳಿಂದ ಸಿಪಿಐ(ಎಂ) ನಾಯಕತ್ವದ ಎಡರಂಗದ ಪಶ್ಚಿಮ ಬಂಗಾಳ ಮತ್ತಿತರ ಕೆಲವು ರಾಜ್ಯಗಳು ಈ ಕಾನೂನನ್ನು ಜಾರಿ ಮಾಡುವುದಿಲ್ಲವೆಂದು ಘೋಷಿಸಿವೆ. ಆದರೆ ನಮ್ಮ ರಾಜ್ಯ ಸರ್ಕಾರ, ಜನರ ವಿರೋಧದ ನಡುವೆಯೂ ಈ ಕಾಯ್ದೆ ಜಾರಿ ಮಾಡಲು ತುದಿಗಾಲಿನ ಮೇಲೆ ನಿಂತಿದೆ. ರಾಜ್ಯ ಸರ್ಕಾರದ ಈ ನೀತಿಯ ಹೋರಾಟ ಸಮಿತಿ ಉಗ್ರ ವಾಗಿ ಖಂಡಿಸಿದೆ ಹಾಗೂ ತಕ್ಷಣ ಹೋರಾಟ ಸಮಿತಿಯ ಜೊತೆ ಮಾತುಕತೆ ನಡೆಸಿ ಜಾರಿ ಮಾಡು ವುದಿಲ್ಲವೆಂದು ಭರವಸೆ ನೀಡಬೇಕೆಂದು ಆಗ್ರಹಿಸಿದೆ.

ಈ ಮಾದರಿ ಕಾನೂನು ಖಾಸಗಿ ಕಂಪನಿಗಳು ನೇರವಾಗಿ ರೈತರಿಂದಲೇ ಕೃಷಿ ಉತ್ಪನ್ನಗಳನ್ನು ಖರೀದಿಸಬಹುದು ಹಾಗು ಮಾರಾಟ ಮಾಡಬಹು ದೆಂದು ಹೇಳುವುದರಿಂದ ಸರ್ಕಾರಿ ನಿಯಂತ್ರಿತ ಎಪಿಎಂಸಿಗಳು, ರೇಷ್ಮೆ ಮಾರುಕಟ್ಟೆಗಳು, ಮಾರುಕಟ್ಟೆಯಲ್ಲಿ ನಿರತವಾಗಿರುವ ಸಹಕಾರಿ ಸಂಸ್ಥೆಗಳು ಸರ್ವನಾಶವಾಗುತ್ತವೆ. ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ವರ್ತಕರು, ಹಮಾಲರು, ನೌಕರರು, ಬೀದಿಪಾಲಾಗುತ್ತಾರೆ.

ಅದೇ ರೀತಿಯಲ್ಲಿ ಆರಂಭದಲ್ಲಿ ಆಕರ್ಷಕವಾಗಿ ಕಾಣುವ ಈ ಖಾಸಗಿ ಮಾರುಕಟ್ಟೆಗಳು ಮುಂದಿನ ದಿನಗಳಲ್ಲಿ ಏಕಸಾಮ್ಯತೆಯನ್ನು ಸಾಧಿಸಿ, ತನಗೆ ಇಷ್ಟ ಬಂದಂತೆ ಮಾರುಕಟ್ಟೆಯನ್ನು ನಿಯಂತ್ರಿಸಿ, ಗ್ರಾಹಕ ರನ್ನು ದೊಡ್ಡ ಪ್ರಮಾಣದಲ್ಲಿ ಶೋಷಣೆ ಮಾಡುತ್ತವೆ.

ಈ ಮಾದರಿ ಕಾನೂನಿನ ಅತ್ಯಂತ ಗಂಭೀರ ಅಂಶ 'ಕಾಂಟ್ರಾಕ್ಟ್ ಬೇಸಾಯ'. ಈ ಪದ್ಧತಿಯಿಂದ ದೇಶದ ಅಗತ್ಯಗಳಿಗೆ ಅನುಗುಣವಾಗಿ ಕೃಷಿ ಉತ್ಪಾದನೆಯಾಗುವ ಬದಲಿಗೆ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಆ ಕಂಪನಿಗಳ ಒಡೆತನದ ಮುಂದುವರಿದ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ 'ಕೃಷಿ ಉತ್ಪಾದನಾ ಪದ್ಧತಿ'ಗಳು ಆರಂಭವಾಗುತ್ತವೆ. ಇದರಿಂದ ದೇಶದ 'ಆಹಾರ ಭದ್ರತೆ', 'ಕೃಷಿ ಅಭಿವೃದ್ಧಿ' ಅಪಾಯಕ್ಕೆ ಗುರಿಯಾಗು ತ್ತದೆ ಮಾತ್ರವಲ್ಲದೆ, ರೈತರನ್ನು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರನ್ನಾಗಿಸಿ ದೇಶದ ಸ್ವಾತಂತ್ರ್ಯ, ಸ್ವಾವಲಂಬನೆಗೆ ಧಕ್ಕೆ ಉಂಟಾಗುತ್ತದೆ.

ಈ ಹಿನ್ನೆಲೆಯಲ್ಲಿ ಜನವಿರೋಧಿ, ಎಪಿಎಂಸಿ ಮಾದರಿ ಕಾನೂನು - 2003ನ್ನು ಜಾರಿ ಮಾಡಬಾರ ದೆಂದು ಒತ್ತಾಯಿಸ ಬೇಕಾಗಿದೆ ಮತ್ತು ಈ ಉದ್ದೇಶದಿಂದ ನಡೆಯುತ್ತಿರುವ ವಿಶಾಲವಾದ ಈ ಚಳುವಳಿಯಲ್ಲಿ ರೈತರು, ವರ್ತಕರು, ಹಮಾಲರು, ಸಮಾಜದ ವಿವಿಧ ವಿಭಾಗಗಳ ಜನತೆ ಪಕ್ಷತೀತವಾಗಿ ಈ ಹೋರಾಟದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸ ಬೇಕಾಗಿದೆ.

ಕೋಮುವಾದಿಗಳು ಸೋತಿದ್ದಾರೆ ಆದರೆ ಆಕ್ರಮಣ ತಗ್ಗಿಲ್ಲ
ಪ್ರಗತಿಪರರ ಎಚ್ಚರದ ಮಾತುಗಳು

ಕರಾವಳಿಯ ಜಿಲ್ಲೆಗಳಲ್ಲಿ ಬಜರಂಗದಳ-ವಿಶ್ವ ಹಿಂದೂ ಪರಿಷತ್‌ನಂತಹ ಕೋಮುವಾದೀ ಶಕ್ತಿಗಳ ಪುಂಡಾಟಿಕೆಗಳು ಎಲ್ಲೆ ಮೀರಿ ನಡೆಯುತ್ತಿವೆ. ಧರ್ಮದ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ನಿರಂತರವಾಗಿ ನಾಗರೀಕ ನೀತಿ ನಿಯಮಗಳು ಉಲ್ಲಂಘನೆ ನಡೆದರೆ, ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ವೈಚಾರಿಕ ಧಾಳಿ ಮಾತ್ರವಲ್ಲ - ದೈಹಿಕವಾದ ಧಾಳಿಗಳು ನಿತ್ಯವೂ ನಡೆಯುತ್ತಲೇ ಇವೆ. ಇತ್ತೀಚಿಗಿನ ಆದಿ ಉಡುಪಿಯಲ್ಲಿ ಅಲ್ಪಸಂಖ್ಯಾತ ವ್ಯಾಪಾರಿಗಳಿಬ್ಬರ ಬೆತ್ತಲೆ ಮಾಡಿ ಹಲ್ಲೆ ನಡೆಸಿದ ಪ್ರಕರಣ, ಗೋವು ರಕ್ಷಣೆ ಹೆಸರಿನಲ್ಲಿ ಗೂಂಡಾಗಿರಿ, ಬೆಳ್ತಂಗಡಿಯ ನಿಡ್ಲೆಯಲ್ಲಿ ಬಜರಂಗದಳದವರಿಂದ ದಲಿತ ಯುವತಿಯ ಮೇಲೆ ಅತ್ಯಾಚಾರ... ಹೀಗೆ ಕರಾವಳಿ ಜಿಲ್ಲೆಗಳನ್ನು ಕೋಮುಗ್ರಸ್ತಗೊಳಿಸಿ ಗೂಂಡಾ ಸಂಸ್ಕೃತಿ ಮೆರೆಸುತ್ತಿರುವ ಕೋಮುವಾದಿ ಗಳ ವಿರುದ್ಧ ಪ್ರತಿಭಟನೆಗಳು- ಪ್ರತಿರೋಧವೂ ಬೆಳೆಯುತ್ತಿದೆ. ಇದನ್ನು ಇನ್ನೂ ವ್ಯಾಪಕಗೊಳಿಸುವ ಹಿನ್ನೆಲೆಯಲ್ಲಿ ಸಿಪಿಐ(ಎಂ) ಒಳಗೊಂಡು ವಿವಿದ ಜಾತ್ಯಾತೀತ ರಾಜಕೀಯ ಪಕ್ಷಗಳು, ಪ್ರಗತಿಪರ ಸಂಘಟನೆಗಳು, ಬುದ್ಧಿಜೀವಿ ಚಿಂತಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆ ಪ್ರಯತ್ನ ಇನ್ನೂ ವಿಶಾಲವಾಗಿ ಗಟ್ಟಿಗೊಳಿಸುವ ದಿಕ್ಕಿನಲ್ಲಿ ಉಡುಪಿಯಲ್ಲಿ ಜಾತ್ಯಾತೀತ ಪಕ್ಷಗಳು ಮತ್ತು ಸಂಘಟನೆಯ ಸಮಿತಿಯ ನೇತೃತ್ವದಲ್ಲಿ ಮೇ 21 ರಂದು ಶನಿವಾರ ಉಡುಪಿ ಪುರಭವನದಲ್ಲಿ "ಸಾಮರಸ್ಯಕ್ಕಾಗಿ ಸಮಾವೇಶ" ನಡೆಯಿತು.

ಸಮಾವೇಶದಲ್ಲಿ ವಿನಯಕುಮಾರ್ ಸೊರಕೆ, ಮಾಜಿ ಲೋಕಸಭಾ ಸದಸ್ಯರು, ಅಲ್ಫೋನ್ಸ್ ಡಿ'ಕೋಸ್ಟಾ, ಜಿಲ್ಲಾ ಅಲ್ಪಸಂಖ್ಯಾತ ವೇದಿಕೆಯ ಮಾಜಿ ಅಧ್ಯಕ್ಷರು, ಕೆ.ಜಯಪ್ರಕಾಶ್ ಹೆಗ್ಡೆ ಶಾಸಕರು, ಬ್ರಹ್ಮಾವರ, ಲೂವಿಸ್ ಲೋಬೋ, ಜಾತ್ಯಾತೀತ ಮುಖಂಡರು, ಟಿ.ಎಸ್.ಬುಡನ್ ಬಾಷಾ, ಚೇರ್‌ಮೆನ್, ಜಿಲ್ಲಾ ವಕ್ಫ್ ಸಲಹಾಸಮಿತಿ ಹಾಗೂ ಜಯನ್ ಮಲ್ಪೆ, ದಲಿತ ಸಂಘರ್ಷ ಸಮಿತಿ ಇವರು ಭಾಗವಹಿಸಿದ್ದರು.

ಸಿಪಿಐ(ಎಂ) ಶಾಸಕರಾದ ಕಾ. ಜಿ.ವಿ.ಶ್ರೀರಾಮರೆಡ್ಡಿ ಯವರು ಸಮಾವೇಶವನ್ನುದ್ದೇಶಿಸಿ ಮಾತನಾಡಿ, ಜಾತ್ಯಾತೀತ ಪಕ್ಷಗಳು ಹಾಗೂ ಸಂಘಟನೆಗಳು ಒಟ್ಟಾಗಿ ಸಮನ್ವಯ ಸಮಿತಿ ರಚಿಸಿಕೊಂಡು ಸೌಹಾರ್ದ ಕಾರ್ಯಕ್ರಮ ನಡೆಸುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. 2004 ರ ಲೋಕಸಭಾ ಚುನಾವಣೆಯಲ್ಲಿ ಜಾಗತಿಕ ಬಂಡವಾಳಶಾಹಿಯ ಗುಲಾಮ ರಂತಿರುವ ಭಾರತದ ಕೋಮುವಾದಿ ಶಕ್ತಿಗಳು ಪರಾಭವಗೊಂಡಿವೆ ನಿಜ. ಹಾಗೆಂದು ಅವು ತಮ್ಮ ಚಟುವಟಿಕೆಗಳನ್ನು ನಿಲ್ಲಿಸಿಲ್ಲ. ಕೋಮುವಾದಿ ಸಂಘಟನೆಗಳು ತಮ್ಮ ದ್ವೇಷ ಅಪಪ್ರಚಾರಗಳನ್ನು ತಡೆ ಇಲ್ಲದೆ ಮುಂದುವರಿಸಿವೆ. ದೇಶದ ಜನತೆಯನ್ನು ಕೋಮುವಾದಿ ನೆಲೆಯಲ್ಲಿ ವಿಭಜಿಸುವ ತಮ್ಮ ಕಾರ್ಯಕ್ರಮದಲ್ಲಿ ಅವು ಎಂತಹ ಹೀನಮಟ್ಟಕ್ಕೆ ಇಳಿಯಬಲ್ಲವು ಎಂಬುದಕ್ಕೆ ಕರ್ನಾಟಕದಲ್ಲಿ ಕೆಲವು ತಿಂಗಳ ಕೆಳಗೆ ನಡೆದ ಕುಖ್ಯಾತ 'ತಿರಂಗಾಯಾತ್ರೆ'ಯ ಒಂದು ಉದಾಹರಣೆಯೇ ಸಾಕು. ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡಿರುವ ಪ್ರಸಕ್ತ ಯು.ಪಿ.ಎ ಸರಕಾರದ ವಿರುದ್ಧ ಅವು ಲೋಕಸಭೆಯ ಒಳಗೆ ಮತ್ತು ಹೊರಗೆ ನಿರಂತರ ಸಮರ ಘೋಷಿಸಿವೆ. ಲೋಕಸಭೆಯ ಬಜೆಟ್ ಅಧಿವೇಶನವನ್ನು ಬಹಿಷ್ಕರಿಸಿ, ಅವು ಗ್ರಾಮೀಣ ಬಡಜನರ ಉದ್ಯೋಗ ಖಾತರಿ ಶಾಸನಕ್ಕೂ ಅಡ್ಡಗಾಲು ಹಾಕಿವೆ. ಪ್ರಜಾಪ್ರಭುತ್ವದ ನಿಯಮಗಳನ್ನೇ ಧಿಕ್ಕರಿಸುವ ಈ ಶಕ್ತಿಗಳ ಫ್ಯಾಸಿಸ್ಟ್ ಸ್ವರೂಪ ಈಗ ಜಗಜ್ಜಾಹೀರಾಗಿದೆ ಎಂದು ಹೇಳಿದರು. ಮುಂದುವರಿದು ಕೋಮುವಾದಿ ಸಂಘಟನೆಗಳು ದೇಶದ ಪ್ರಜೆಗಳನ್ನು ಪ್ರತಿನಿಧಿಸುವುದೂ ಇಲ್ಲ. ಅವರ ಕಷ್ಟ ಕೋಟಲೆಗಳಿಗೆ ಸ್ಪಂದಿಸುವುದೂ ಇಲ್ಲ. ಯಾವ ಕೋಮುವಾದಿ ಸಂಘಟನೆಯೂ ತನ್ನ ಕೋಮಿನ ಬಡವರು, ನಿರುದ್ಯೋಗಿಗಳ, ಸ್ತ್ರೀಯರು ಮತ್ತು ಇತರ ಶೋಷಿತ ಜನವರ್ಗಗಳ ನ್ಯಾಯಕ್ಕೋಸ್ಕರ ಎಂದೂ ಹೋರಾಟ ನಡೆಸಿದ್ದಿಲ್ಲ. ವಾಸ್ತವವಾಗಿ ಇಂತಹ ಹೋರಾಟಗಳ ಬಗ್ಗೆ ಎಲ್ಲಾ ಕೋಮುವಾದಿ ಸಂಘಟನೆಗಳೂ ಅಸಹನೆಯ ನಿಷೇಧಾತ್ಮಕ ಧೋರಣೆಯನ್ನೇ ಹೊಂದಿವೆ. ಭಾರತದ ಜನಕೋಟಿ, ಬಡಜನರ ಅನಕ್ಷರತೆ, ಅನಾರೋಗ್ಯ, ನಿರುದ್ಯೋಗ ಮುಂತಾದವುಗಳ ವಿರುದ್ಧ ಹೋರಾಟ ನಡೆಸಬೇಕಾಗಿದೆಯೇ ಹೊರತು ಯಾವುದೇ ಕೋಮಿನ ವಿರುದ್ಧ ಅಲ್ಲ. ಮತಧರ್ಮಗಳ ನಡುವೆ ಸಹಬಾಳ್ವೆ, ಹಸಿವು, ಅಸಮಾನತೆಗಳ ವಿರುದ್ಧ ಹೋರಾಟ- ಇದು ನಮ್ಮ ರಾಜಕೀಯದ ಮೂಲ ಆಶಯವಾಗಬೇಕಾಗಿದೆ ಎಂದು ಹೇಳುತ್ತಾ ಕೋಮುವಾದ, ಜಾತಿವಾದವನ್ನು ತಿರಸ್ಕರಿಸಲು ಕರೆ ನೀಡಿದರು.

ಕೋಮುವಾದದ ಆಕ್ರಮಣದ ವಿರುದ್ಧ ವಿಶಾಲವಾದ ಪ್ರತಿರೋಧ ಒಡ್ಡುವ ನಿಟ್ಟಿನಲ್ಲಿ ನಡೆದಿರುವ ಮಹತ್ವದ ಯತ್ನ ಉಡುಪಿಯಲ್ಲಿ



ವಿನಯಕುಮಾರ್ ಸೊರಕೆ, ಮಾಜಿ ಲೋಕಸಭಾ ಸದಸ್ಯರು, ಕೆ.ಜಯಪ್ರಕಾಶ್ ಹೆಗ್ಡೆ, ಶಾಸಕರು ಹಾಗೂ ಇತರ ಭಾಷಣಕಾರರು ತಮ್ಮ ಭಾಷಣದಲ್ಲಿ 6 ವರ್ಷಗಳ ಎನ್.ಡಿ.ಎ. ಆಳ್ವಿಕೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯ ಎಂದು ಹೇಳಿದರು. ಈ ಸರಕಾರದ ಆಳ್ವಿಕೆಯ ಅವಧಿಯಲ್ಲಿ ನಡೆದ ಗುಜರಾತ್‌ನ ನರಹತ್ಯೆಯಿಂದಾಗಿ ವಿಶ್ವದ ಎದುರು ಭಾರತ ನಾಚಿಕೆಯಲ್ಲಿ ತಲೆ ತಗ್ಗಿಸುವಂತಾಯಿತು ಎಂದು ವಿವರಿಸಿ, ಸೌಹಾರ್ದ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ನಡೆಸಿ ಜನಜಾಗೃತಿಗೊಳಿಸುತ್ತಾ ಜಾತ್ಯಾತೀತ ಪಕ್ಷಗಳಲ್ಲಿ ಮತ್ತು ಸಂಘಟನೆಗಳಲ್ಲಿ ಐಕ್ಯತೆಯನ್ನು ಬೆಳೆಸಬೇಕೆಂದರು.

ಎ.ಎಸ್. ಆಚಾರ್ಯರವರು ಸಭಾ ಕಾರ್ಯಕ್ರಮಗಳನ್ನು ರೂಪಿಸಿದರು. ಎಚ್.ನಿತ್ಯಾನಂದ ಶೆಟ್ಟಿ, ಉಡುಪಿ ತಾಲೂಕು ಪಂಚಾಯತ್ ಅಧ್ಯಕ್ಷರು, ಇವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಕೆ.ಶಂಕರ್ ಸ್ವಾಗತ ಭಾಷಣ ಮಾಡಿದರು. ಜಿ.ರಾಜಶೇಖರ್‌ರವರು ಧನ್ಯವಾದ ಅರ್ಪಿಸಿದರು.

ಕೊನೆಯಲ್ಲಿ ಜಿ.ಸೀತಾರಾಮ ಶೆಟ್ಟಿಯವರ ರಚನೆ ಮತ್ತು ನಿರ್ದೇಶನದ ಕೊಸಿಕಾ ಚೇರ್ಕಾಡಿ ಇವರಿಂದ ರಾಜ್ಯ ಪ್ರಶಸ್ತಿ ವಿಜೇತ ನಾಟಕ 'ನೆರೆಕೆರೆ' ನಾಟಕ ಅಭಿನಯಿಸಲ್ಪಟ್ಟಿತು.

ಬಾಬಾ ಬುಡನ್‌ಗಿರಿ

ಹೊಸ ವಿವಾದವೇನು?

ಬಾಬಾಬುಡನ್‌ಗಿರಿಯಲ್ಲಿ ಈಗ ಹೊಸ ವಿವಾದವೆದ್ದಿದೆ. ಆ ಪ್ರದೇಶದ ಅಭಿವೃದ್ಧಿ ಮಾಡುವ ಕಾರ್ಯದಿಂದಾಗಿ ಅಲ್ಲಿ ಉದ್ಭವಿಸಿರುವ ಹೊಸ ಸಮಸ್ಯೆಗಳೇನು? ಇದು ಸೌಹಾರ್ಧತೆಯ ತಾಣದ ವೈಶಿಷ್ಟ್ಯವನ್ನು ಹಾಳುಗೆಡಹುವುದೆ? ಅಲ್ಲಿಗೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗದ ಅವಲೋಕನ.

ಮುಂಗಾರು ಮಳೆ ತುಂತುರು, ಹೊರ ಚಾಚುತ್ತಿರುವ ಹಸಿರು ಚಿಗುರು, ಒಡಲು ತುಂಬಿಕೊಂಡು ಮೆಲ್ಲ ಮೆಲ್ಲನೇ ಗಿರಿಯ ಮೇಲೇರುವ ಮೋಡಗಳ ಸಾಲು ಸಾಲು, ಬಾಬಾ ಬುಡನ್ ಗಿರಿಯತ್ತ ಮುಖ ಮಾಡಿ ಹೊರಟಾಗಲೇ ಗಿರಿಗೆ 'ಹತ್ತಿರ' ವಾಗುತ್ತಿದ್ದಂತೆ ಹೊಸ ಕಾಲದ ಹೊಸ ಬಗೆಯ, ನಿಸರ್ಗದ ಲಗು ಬಗೆಯ ದರ್ಶನ, ಈ ಚಂದ್ರ ದ್ರೋಣ ಪರ್ವತದ ಬೈತಲೆಯಲ್ಲೇ ಸಾಗಿದರೆ 'ದತ್ತ ಪೀಠಕ್ಕೆ ದಾರಿ' ಎಂಬ ಲೋಕೋಪಯೋಗಿ ಇಲಾಖೆಯ ಮೈಲುಗಲ್ಲುಗಳ ಸ್ವಾಗತ ನಿರ್ದೇಶನ. ಹೊಸ ಬಣ್ಣ ಬಳಿದುಕೊಂಡು ಹೀಗೆ ಸ್ವಾಗತಿಸುವ ಬೋರ್ಡ್ ಕೆರೆದರೆ ಆಗ ಖಂಡಿತ ಕಾಣುವುದೇ 'ಬಾಬಾಬುಡನ್ ಸ್ವಾಮಿ ದತ್ತಾತ್ರೇಯ ಪೀಠ – ದರ್ಗಾಕ್ಕೆ ದಾರಿ' ಎಂದು ಈಗ ಸರ್ಕಾರದ ಬೋರ್ಡಿನಲ್ಲಿ ಬಾಬಾಬುಡನ್ ಸ್ವಾಮಿ ನಾಪತ್ತೆ ಅಥವಾ ಅಪಹರಣವಾಗಿರುವುದರಲ್ಲಿ ಸಂಘ ಪರಿವಾರ ಎತ್ತಿರುವ ವಿವಾದದ ಸುಳಿವು ಸಿಗದೇ ಹೋಗುವುದಿಲ್ಲ. ಹಿಂದೆ – ಮುಂದೆ ನೋಡಿದವರಿಗೆ ಅದೇ ದರ್ಗಾ ಪೀಠದ ಆವರಣದಲ್ಲೇ ಯಜ್ಞವೂ ನಡೆದುಹೋದದ್ದು ನೆನಪಾಗದೇ ಇರುವುದಿಲ್ಲ.



ಸಮಾಧಿಗಳು ಮತ್ತು ಸುರಿದ ಮಣ್ಣು

ಮನಸ್ಸು ಹಲವು ಯೋಚನೆಗಳ ಅಲೆ – ವಿಚಾರಗಳ ತಾಕಲಾಟಗಳಿಂದ ಕಾವೇರುತ್ತಿರುವಾಗಲೇ ಗಿರಿಯ ನೆತ್ತಿಯ ಮೇಲೆ, ದರ್ಗಾಪೀಠದ ಗುಹೆಯ ಹತ್ತಿರ ನೆಲಕ್ಕೆ ಕಾಲಿಡುತ್ತಿರುವಂತೆ ತಣ್ಣಗೆ ಎದೆ ಬಗೆವ ಚಳ–ಗಾಳ, ಬಗೆಯೆಲ್ಲವೂ ಹಾರುತ್ತಾ ಕಣ್ಣೆದುರ ಚಿತ್ರಣಗಳನ್ನು ಮುಸುಕುಗೊಳಿಸುವ, ಹೊಸ ಚೌಕಟ್ಟು ಹಾಕಿ ಅರ್ಥ ಬದಲಿಸುವ ಚಳ ತುಂಡು ಮೋಡಗಳ ವನಪು.

ಹೌದು! ಇಲ್ಲಿ ವಿಪರೀತ ಚಳ, ಗಾಳ, ಥಂಡಾ ಥಂಡಾ! ಆದರೆ ದರ್ಗಾ ಪೀಠದ ಸುತ್ತ ಮುತ್ತ ಬಿಸಿ ಬಿಸಿ, ಗರಂ ಗರಂ. ದತ್ತ ಜಯಂತಿಗಿನ್ನೂ ದೂರ, ಆದರೆ ಈಗಿನದು 'ಅಭಿವೃದ್ಧಿ' ಸುತ್ತಲಿನ ವಿವಾದ. ಅದೇ 'ಎಲ್ಲಾ ಕಾಯುವ' ಹೊಣೆ ಹೊತ್ತ ಜಿಲ್ಲಾಡಳಿತದಿಂದ.

ಪತ್ರಿಕೆಗಳು ಟಿವಿಗಳ ವರದಿಗಳಲ್ಲಿ, ನಾಯಕರ ಹೇಳಿಕೆ–ಪ್ರತಿಹೇಳಿಕೆಗಳಲ್ಲಿ, ಬುದ್ಧಿಜೀವಿಗಳ ಭೇಟಿಗಳಲ್ಲಿ, ಅಷ್ಟಾಗಿ ಮಾತನಾಡದ ಆಡಳಿತದಲ್ಲಿ ಅಷ್ಟಿಷ್ಟು ವಿವಾದದ ಕಾವು – ನೋವು ಚಿತ್ರದಿಂದ ಬಯಲಿಗೆ ಬಿದ್ದಾಗ ಅಲ್ಲೇನು ನಡೆದಿದೆ ಎಂದು ನೋಡಲು ಮುಂದಾದೆವು.

ಜೂನ್ ೧೮ ಬೆಳಗಿನ 9 ಗಂಟೆಗೆ ಗಿರಿ ತಲುಪಿದಾಗ ಸೂರ್ಯನ ಬೆಳಕಿತ್ತೇ ವಿನಹ ಬಿಸಿಲಲ್ಲ, ಬಿಸಿಯಲ್ಲ, ನಮ್ಮ ವಾಹನ ದರ್ಗಾ ಪೀಠದ ಆವರಣ ತಲುಪುವ ಮೊದಲೇ ಆರಂಭದಲ್ಲಿ ಗೋಚರಿಸಿದ್ದು ಕೆಂಪು ಅಕ್ಷರಗಳ ನೋಟೀಸ್ ಬೋರ್ಡ್. 'ಪೀಠದ 200 ಮೀ. ಪಾಸಾಲೆಯಲ್ಲಿ ಮಾಂಸದ ಅಡುಗೆ, ಮಧ್ಯಪಾನ ನಿಷಿದ್ಧ! ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸುವ ಜಿಲ್ಲಾಧಿಕಾರಿ ಗಳ – ಮುಜರಾಯಿ ಇಲಾಖೆ ಆದೇಶ. ಹಿಂದೆ ಭೇಟಿ ನೀಡಿರುವ ನಮಗೆ ಇದು ಆದೇಶಗಳ ಹೊಸ ಸೇರ್ಪಡೆ ಎಂಬುದು ಅನುಮಾನ ವಿರಲಿಲ್ಲ.

ಮಧ್ಯಪಾನ ನಿಷಿದ್ಧ. ಆದರೆ ಮಾಂಸಾಹಾರ ಅಡುಗೆ ಯಾಕೆಂದರೆ ಭಕ್ತಾದಿಗಳು ಇಲ್ಲಿನ ಸಂತರಿಗೆ ಹರಕೆ ಸಲ್ಲಿಕೆಯ ಒಂದು ವಿಧಾನ ಅನೂಚಾನವಾಗಿ ಬಂದ ಆಚರಣೆ... ದೈವ–ಭಕ್ತನ ಆಹಾರದಲ್ಲಿ ಭಿನ್ನ ಬಗೆಯಿಲ್ಲ.



ರಾಜ್ಯಸಮಿತಿಯ ನಿಯೋಗದಲ್ಲಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ.ಗುರುಶಾಂತ್, ವಿ.ಸುಕುಮಾರ್,

ನಾವು ಗುಹೆಯತ್ತ ಸಾಗುವ ಮೆಟ್ಟಿಲ ಮುಂದೆ ನಿಂತಿದ್ದವು. ಈ ಹಿಂದೆ ಇರದಿದ್ದ ಭಾರೀ ಕಂಬಿಗಳನ್ನು ನಿರ್ಮಿಸಿ ಆ ಕಡೆ ಹೋಗಲು ರಕ್ಷಣೆ ಕೋಟೆ ಇತ್ತು. ಮುಳ್ಳುತಂತಿಯೂ ಕೌಂಪೌಡಿನುದ್ದಕ್ಕೂ ಬಿಗಿದು ನಿಂತಿತ್ತು. ಇವು ದತ್ತ ಜಯಂತಿಯ ನೆಪದಲ್ಲಿ ಜರುಗಿದ್ದು ಉದ್ವಿಗ್ನತೆ, ಆತಂಕ ಬಿದರಿಕೆಗಳಿಗೆ ಬೆಳೆದು ನಿಂತ ಸಾಕ್ಷಿಗಳಾಗಿದ್ದವು.

ಅಲ್ಲಿನ ಪ್ರಶಾಂತ ಪರಿಸರದಲ್ಲಿಯೂ ತಳಮಳದ, ದ್ವೇಷದ, ಏನೇನೋ ಚಟುವಟಿಕೆಗಳು ಕಂಡವು. ಬಲಕ್ಕೆ ಮುಖ ತಿರುವಿದರೆ ರಸ್ತೆಯ ಆ ಬದಿಯಲ್ಲಿದ್ದ ಮನೆಗಳು ಉರುಳಿದ್ದವು. ನೂರಾರು ವರ್ಷಗಳು ಹಿಂದಿನ ಮನೆಗಳು, ಕಲ್ಲು ಮಣ್ಣಿನ (ಗೋಡೆಗಳ ದಪ್ಪ ಕನಿಷ್ಠ 2.5–3 ಅಡಿಗಳ ಅಗಲ) ಸಜ್ಜಾದ್–ಏ–ನಿಶಾದ್ ಆಗಿರುವ ಪೀಠಾಧಿಪತಿ ಶಾಖಾದ್ರಿಯ ನಿವಾಸ ಕಛೇರಿ ಇತ್ಯಾದಿಗಳಿದ್ದ ಮನೆಗಳು ಅವು. ನಮ್ಮೊಂದಿಗೆ ನೇರವಾಗಿ ಮಾತಿಗಾರಂಭಿಸಿದ ವ್ಯಕ್ತಿ ಹೇಳದ್ದು– ಹೇಳದೇ ಕೇಳದೇಒಡೆದಿದ್ದಾರೆ, ಶಾಖಾದ್ರಿ ಇಲ್ಲಿ ಇರಲಿಲ್ಲ. ಮೊದಲು ಬೀಗ ಹಾಕಿದರು, ನಂತರ ಅಲ್ಲಿನ ಸಾಮಾನುಗಳನ್ನು ಕೆಳಗಿನ ಬಿಲ್ಡಿಂಗ್‌ಗೆ ಸಾಗಿಸಿದರು, ನಂತರ ಒಡೆದರು" 'ಯಾಕೆ ಒಡೆದರು?' 'ಕಟ್ಟಡ ಹಳೆಯದಾಗಿದೆ, ಬಿರುಕು ಬಿಟ್ಟು, ಬೀಳುವಂತಿದೆ' ಹೊಸದು ಕಟ್ಟಬೇಕು ಎಂದು ಹೇಳದ್ದಾರೆ.



ಹೊಸ ಕಟ್ಟಡ ನಿರ್ಮಾಣಕ್ಕೆಂದು ಒಡೆದುಹಾಕಲಾದ ಹಳೆಯ ಮನೆಗಳು.

ಈ ಸಾಲಿನ ಕಟ್ಟಡಗಳಲ್ಲಿ ಶಾಖಾದ್ರಿಯ ಕಛೇರಿ ಹಾಗೂ ಬಳಕೆಯ ಜಾಗ. (ಬಹುತೇಕ ಪಾಪ ಚಿಕ್ಕಮಗಳೂರು – ಬೆಂಗಳೂರು) ಸೂಫಿ – ಸಂತರ ಸಮಾಲೋಚನೆಯ ದರ್ಬಾರ್ ಹಾಲ್' ಅಲ್ಲದೇ ಎಂದಿನ ಪದ್ಧತಿಯಂತೆ ಭಕ್ತಾದಿಗಳಿಗೆ ಗಂಜಿ ನೀಡುವ ಸ್ಥಳ (ಗಂಜಿ ಬೇಡವಾದರೆ ಅಕ್ಕಿ–ಬೇಳೆ ಪಡಿ ನೀಡಿಕೆ) ಮತ್ತು ಸಂಜೆ ಹೊತ್ತು ಗುಹೆಗೆ ಲೋಭಾನ ಹೋಗುವುದು ಈ ಕಟ್ಟಡದಿಂದಲೇ, ಮೇಲಿನ ಒಯ್ಯುವಾಗ ನಗಾರಿ ಬಾರಿಸುವುದು ಇಲ್ಲಿಂದಲೇ. ಆದರೀಗ...?

ನ್ಯಾಯಾಲಯದ ಆದೇಶ, ಸೌಹಾರ್ದ ಪರಂಪರೆಯ ಉಲ್ಲಂಘನೆ ಆಗಕೂಡದು

ಈ ಕಟ್ಟಡ ಕೆಡವಿರುವುದರಿಂದ ತಕ್ಷಣದಲ್ಲಿ ಮೇಲಿನ ಎಲ್ಲವೂ ಅಸ್ತವ್ಯಸ್ಥವಾಗಿದೆ. ಬಿದ್ದ ಕಲ್ಲು – ಮಣ್ಣಿ ಗುಡ್ಡೆ ದಾಟಿ ಲೋಭಾನ ಒಯ್ಯುವುದು ಬಿಟ್ಟರೆ ಉಳಿದವು ಇಲ್ಲವಾಗಿದೆ. ಇದಕ್ಕೆ ಪರ್ಯಾಯ ಕೆಲಸವೂ ಆಗಿಲ್ಲ. ಆಡಳಿತ ಯೋಚಿಸಿಲ್ಲ.

ಈ ಕೆಡವಿದ ಕಟ್ಟಡದ ಒಂದು ತುದಿಯಲ್ಲಿ ಹೊಸ ಬಿಲ್ಡಿಂಗ್ ನಿರ್ಮಿಸಲಾಗಿದೆ. ಈ ಸ್ವತಂತ್ರ ಕಟ್ಟಡ ಆಡಳಿತ ಕಛೇರಿಯಾಗಲಿದೆ ಎಂದರು ಅಲ್ಲಿದ್ದವರು ಅದರ ಪಕ್ಕ ಪೋಲೀಸ್ ಠಾಣೆ. ದರ್ಶನಕ್ಕೆ ಹೋಗಲೆಂದು ಕಂಪೌಂಡ್ ಜೊತೆ ನಿರ್ಮಿಸಿರುವ ಬ್ಯಾರಿಕೇಡ್‌ಗಳಲ್ಲಿ ಹಳೆಯ ಮನೆಗಳ ಭಾರೀ ತೊಲೆ ಕಂಬಗಳು ಹಾಕಿರುವುದು ಕಂಡಿತು.

ನಮ್ಮ ನಿಯೋಗ ಗುಹೆಯತ್ತಲಿನ ಮೆಟ್ಟಿಲು ಇಳಿದೆವು. ಎಡಬಲಗಳಲ್ಲಿ ಹಲವಾರು ಗೋರಿ ಅಥವಾ ಸಮಾಧಿಗಳು, ಬಾಬಾ ಬುಡನ್‌ರವರ ನಂತರದ ಅನೇಕ ತಲೆಮಾರುಗಳ ಶಾಖಾದ್ರಿಗಳ ಸಮಾಧಿಗಳವು. ಒಂದರ ಮೇಲೆ ಬರೆದಿದ್ದು ಅದರ ಬರಹ ಓದಿದ ಯುವಕನೊಬ್ಬ 1390 ಹಿಜರಿ ಎಂದಿದೆ ಎಂದ. ಇನ್ನೂ ಅದಕ್ಕೆ ಮೊದಲಿನ ಗೋರಿಗಳು ಇವೆ. ಇದರ ಎಡಬದಿಗೆ ಅದರಲ್ಲಿ ಕಾಫಿ ಬೀಜ ತಂದ ಬಾಬಾ ದತ್ತ ಎಂದು ಹೆಸರಾದ ಹಯಾತ್ ಖಲಂದರ್‌ರ ಸಮಾಧಿಯೂ ಸಹ...

ನಾವು ನಿಂತಿದ್ದು (ಬಲಬದಿ) ಗೋರಿಗಳ ಪ್ರದೇಶದಲ್ಲಿಯೇ ಈಗ ಹೊಸ ವಿವಾದ ಹೋಗುವುದು. ಇದರ ಕೊನೆ ತುದಿಯಲ್ಲಿರುವ ಗೋರಿಗಳನ್ನು ಮಣ್ಣಿನಿಂದ ಮುಚ್ಚಲಾಗಿದೆ ಎಂದು ಈ ಮೇಲಿನ ರಸ್ತೆ ಬದಿಗೆ ಕಂಪೌಂಡ್ ಈಚೆಗೆ ಮಣ್ಣಿನ ರಾಶಿಯನ್ನು ಸುರಿಯಲಾಗಿತ್ತು. ಹಾಗೆ ಸುರಿದ ಮಣ್ಣು ಒಂದೆರಡು ಸಮಾದಿಗಳ ಮೇಲೆ ಬಿದ್ದು ಮುಚ್ಚಿರಬಹುದೆಂದು ಕಂಡಿದೆ. (ಅಲ್ಲಿನ ಕಟ್ಟೆ ಹೊರಗೆ ಕಾಣಿಸುತ್ತದೆ). ಹಾಗೆ ನೋಡಿದರೆ ಉದ್ದೇಶಪೂರ್ವಕವಾಗಿ ಅವುಗಳನ್ನು ಮುಚ್ಚಿಬಿಡಬೇಕೆಂಬುದು ಕಾಣುವುದಿಲ್ಲ. ಆದರೆ ಮಣ್ಣು ಸುರಿಯುವಾಗ ಅಲ್ಲಿ ಎಚ್ಚರ–ಜಾಗ್ರತೆ ವಹಿಸಬೇಕಿತ್ತು. ಅದು ಕಾಣುತ್ತಿಲ್ಲ. ಇನ್ನೊಂದು ವಿವಾದವಿದ್ದದ್ದು ಗುಹೆಯ ಹೊರಭಾಗದ ಕೌಂಪೌಂಡ್ ಬಳಿಯ ಬಯಲಿನಲ್ಲಿ ನಡೆದಿರುವ ಕಾಮಗಾರಿ ಬಗ್ಗೆ. (ಗುಹೆಗೆ ಹೋಗುವಾಗ ಬಲಬದಿ ಹೊರಬರುವಾಗ ಎಡಬದಿ) ಒಂದೆರಡು ಟ್ರಾಕ್ಟರ್‌ಗಳು ಮಣ್ಣು ತಂದು ಆ ಜಾಗದಲ್ಲಿ ಸುರಿದಿದ್ದವು, ಸುರಿಯುತ್ತಾ ಇದ್ದವು. ಈ ಪ್ರದೇಶದಲ್ಲಿ 'ಸುಂದರವಾದ ಒಂದು ತೋಟವನ್ನು ನಿರ್ಮಿಸುವ ಉದ್ದೇಶವಿದೆಯಂತೆ. ಹಾಗೆ ನೋಡಿದರೆ ಗುಹೆಯ ಪರಿಸರವೇ ಸಹಜ ಸುಂದರವಾದದ್ದು. ಈ ತೋಟ ಅಲ್ಲಿ ಅನಗತ್ಯ – ಅಲಂಕಾರವಾಗಬಹುದು. ಇದು ಬೇರೇನಲ್ಲ ಎನಿಸುತ್ತದೆ. ಇವೆಲ್ಲಕ್ಕೂ ಮುಖ್ಯವಾದ ವಿಷಯವೆಂದರೆ ಆ ಪ್ರದೇಶದಲ್ಲಿ ಬೇರೆ ಬೇರೆ ಕಡೆಗಳಿಂದ ಬಂದ ಸುಫಿಗಳ ಫಕೀರರು ಕೂಡುವ ಜಾಗವದು ಎಂಬುದು. ಅದಕ್ಕೆ 'ಫಕೀರರ ಕಟ್ಟೆ' ಎಂದೂ ಕರೆಯುವುದಾಗಿ ತಿಳಿಯಿತು. ಇಲ್ಲಿ ಹೂವು ಅರಳಿದರೆ ಫಕೀಕರರಿಗೆ ಅದು ಮುಳ್ಳು ಅವರ ಬಳಕೆಯ ಜಾಗ ಇನ್ನಿಲ್ಲವಾಗುತ್ತದೆ. ಗುಹೆಯ ಬಳಿಗೆ ಹೋದಾಗ ಪಕ್ಕದ ಕಛೇರಿಯ ಬೀಗ ತೆರೆದು ಕರೆದೊಯ್ದರು. (ಅವರನ್ನು ಶಾಖಾದಿ, ಜನ ಎನ್ನುವುದಂತೆ) ಇಲ್ಲಿ 'ನಮಾಜ ಮಾಡುತ್ತಿದ್ದೆವು. ಈಗ ನಿಲ್ಲಿಸಲಾಗಿದೆ. ನಮಗೆ ನಮಾಜಿಗೆ ಸ್ಥಳವಿಲ್ಲ. ಇಲ್ಲಿ ನೋಡಿ ಶಾಖಾದ್ರಿಯವರ ಕಟ್ಟಡದಲ್ಲಿದ್ದ ಸಾಮಾನುಗಳು' ಎಂದು ತೋರಿಸಿದರು. ಈ ಜಾಗದಲ್ಲಿ ನಮಾಜ ಮಾಡುವವರನ್ನು ಕಳೆದ ವರ್ಷದ 'ದತ್ತಜಯಂತಿ' ಸಂದರ್ಭದಲ್ಲಿ ನಿಲ್ಲಿಸಲಾಗಿತ್ತು. ಕಾರಣ 1975ರ ಹಿಂದಿನ ಆಚರಣೆಯಲ್ಲಿ ಇದು ಇರಲಿಲ್ಲ. ನಂತರ ಆರಂಭಿಸಿದ್ದು. ಆದ್ದರಿಂದ ನಿಷ್ಪಕ್ಷಪಾತದ ಕ್ರಮದ ಭಾಗ ಎಂದು ಸ್ವಾಗತಿಸಲಾಗಿತ್ತು. ಇನ್ನು ಗುಹೆಯ ಒಳಗೆ ಬಾಬಾರು ತಪಸ್ಸು ಮಾಡಿರುವ ಸ್ಥಳದ (ಅಲ್ಲಿ ಪಾದುಕೆಗಳು ಇರುವುದು) ಪಕ್ಕದಲ್ಲಿ ನಾಲ್ಕು ಗೋರಿಗಳವೆ. ಅವು 'ಬಾಬಾದತ್ತ'ರ ಶಿಷ್ಯರುಗಳದ್ದೆಂದು ಹೇಳಲಾಗುತ್ತಿದೆ. ಹಿಂದೆಲ್ಲಾ ಈ ಗೋರಿಗಳ ಮೇಲೆ ಹಸಿರು ಬಟ್ಟೆ ಹೊದಿಸಲಾಗುತ್ತಿತ್ತು. ಈಗ ತೆಗೆಯಲಾಗಿದೆ. ಇದು ಕೂಡ 'ದತ್ತಜಯಂತಿ' ಸಂದರ್ಭದಲ್ಲಿ ಮೂರು ದಿನ ಹಸಿರು ವಸ್ತ್ರ ತೆಗೆದುಹಾಕಿ 'ಕೇಸರಿ ವಸ್ತ್ರ' ಹೊದಿಸಲು ಹಿಂದಿನ ಜಿಲ್ಲಾಡಳಿತ ಅವಕಾಶ ಮಾಡಿತ್ತು. ಅದನ್ನೇ ಈಗಲೂ ಮುಂದುವರಿಸಲು ಒತ್ತಾಯಿಸಿದ್ದರಿಂದ ಹಸಿರು ಬೇಡ–ಕೇಸರಿಯೂ ಬೇಡ ಎಂದು ಪೂರ್ಣವಾಗಿ ಬಟ್ಟೆ ಹಾಕುವುದನ್ನೇ ತೆಗೆಸಲಾಗಿದೆ. ಅಂದರೆ ಪರಂಪರಾಗತವಾಗಿ ಅನುಸರಿಸಿ ಕೊಂಡು ಬಂದಿದ್ದು ಹಸಿರು ಬಟ್ಟೆ ಹೊದಿಕೆಯನ್ನು ತೆಗೆಸುವಲ್ಲಿ ಸಂಘಪರಿವಾರ ಯಶಸ್ವಿ ಯಾದಂತಾಗಿದೆ.

ಇನ್ನು ಗುಹೆಯ ಅನತಿದೂರದಲ್ಲಿ ಪ್ರವಾಸಿಗರು ಉಳಿದುಕೊಳ್ಳಲು ಕಟ್ಟಡ ಕಟ್ಟಲಾಗಿದೆ. ಹೊಸದು ಕಟ್ಟಲಾಗುತ್ತಿದೆ.

ಈ ಪ್ರದೇಶದ ಇನ್ನೊಂದು ಮುಖ್ಯ ಸ್ಥಾನ 'ಮಾಣಿಕ್ಯಧಾರಾ' ಅಲ್ಲಿ ಭಕ್ತರು–ಸಾಮಾನ್ಯರು ಸ್ನಾನಮಾಡಿ 'ಪುನೀತ'ರಾಗುವ ಸ್ಥಳ. ನಿಸರ್ಗ ಸೌಂದರ್ಯದ ಅದ್ಭುತ ಪ್ರದೇಶ. ಈ ಪ್ರದೇಶದಲ್ಲಿ ಇಳಿಯಲು, ಹತ್ತಲು ಕಲ್ಲಿನ ಮೆಟ್ಟಿಲು ನಿರ್ಮಿಸಲಾಗಿದೆ. ನಿಸರ್ಗ ಸೌಂದರ್ಯ ವೀಕ್ಷಿಸಲು ಗೋಪುರ ಕಟ್ಟಲಾಗಿದೆ, ಗುಹೆಯ ಪ್ರದೇಶದಿಂದ ಅಲ್ಲಿಗೆ ಹೋಗಲು ಬರೀ ಮಣ್ಣಿನ ರಸ್ತೆಯೇ ಇತ್ತು. ಈಗ ಉತ್ತಮ ಡಾಂಬರು ರಸ್ತೆ ಆಗಿದೆ. ಇಲ್ಲಿ ನಡೆದಿರುವ ಕಾಮಗಾರಿ ಕೆಲಸಗಳನ್ನು ಎಲ್ಲರೂ ಮೆಚ್ಚುತ್ತಿದ್ದಾರೆ.

ಈ ಇಡೀ ಪ್ರದೇಶದ ಅಭಿವೃದ್ಧಿಯ ಕಾರ್ಯಗಳು ನಡೆಯಬೇಕು ಎಂಬುದಕ್ಕೆ ತಕರಾರು ಎತ್ತಬೇಕಾಗಿಲ್ಲ. ಆದರೆ ಹೇಗೆ? ಎಂತಹದ್ದು ಎಂಬುದಾಗಿದೆ. ಇಲ್ಲಿಗೆ ಬರುವ ಭಕ್ತಾದಿಗಳಿಗೆ ಉಳಿಯಲು ಸರಿಯಾದ ಜಾಗವಿಲ್ಲ. ಊಟ–ವ್ಯವಸ್ಥೆಯ ಅನುಕೂಲವಿಲ್ಲ. 'ಉರುಸ್'ನ ಸಂದರ್ಭದಲ್ಲಿಯೇ ಭಾರಿ ಸಾಹಸ. ಸಗಸ್ರ ಸಂಖ್ಯೆಯಲ್ಲಿ ಜನ ಬರುತ್ತಿರುವಾಗ ಕುಡಿಯುವ ನೀರಿಗೂ ಪರದಾಡಬೇಕಾದ ಸ್ಥಿತಿ

ಬಾಕೀ ಪುಟಕ್ಕೆ

ಕರಾವಳಿಯ ತೀರದುದ್ದಕ್ಕೂ ಒಂದಿಲ್ಲ ಒಂದು ನೆಪದಲ್ಲಿ ನಿತ್ಯವೂ ಕೋಮುದ್ವೇಷದ ಕಿಚ್ಚು ಹಚ್ಚುತ್ತಿರುವ ಸಂಘ ಪರಿವಾರ ಮಂಗಳೂರು ಪರಿಸರದಲ್ಲಿ ಮತ್ತೆ ಅಟ್ಟಹಾಸಕ್ಕೆ ಇಳಿದಿದೆ. ಇವರ ಆಟಾಟೋಪಗಳಿಗೆ ಜಿಲ್ಲಾಡಳಿತ ಕೈಜೋಡಿಸುವ ಮೂಲಕ ಅನಾಹುತಕಾರಿ ಕೃತ್ಯಗಳು ಇಮ್ಮಡಿಗೊಂಡಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಇತ್ತೀಚಿನ ಎರಡು ಪ್ರಮುಖ ಘಟನೆಗಳ ಸವಿವರವಾದ ವರದಿ ಇಲ್ಲಿದೆ.

ಭಜರಂಗದಳದ ಅಟ್ಟಹಾಸವೂ + ಆಡಳಿತದ ಹಸ್ತಲಾಘವವೂ = ದ. ಕನ್ನಡದಲ್ಲಿ ವಿನಾಶದ ದಳ್ಳುರಿ



ರೌಡಿಗೆ ರಾಜಮರ್ಯಾದೆ : ಗಲಭೆ ಸೃಷ್ಟಿಸಲೆಂದೇ ಹೊರಟ ಶವಯಾತ್ರೆ

ರೌಡಿ ಅನಂತು ಕೊಲೆ : ಮತ್ತು ಬಜರಂಗದಳದ ದಾಂದಲೆ

ಹಲವಾರು ರೀತಿಯ ಯಾತ್ರೆಗಳನ್ನು ಮಾಡಿ. ಶವಗಳ ಯಾತ್ರೆಗೂ ಕಾರಣೀಭೂತವಾಗುತ್ತಿದ್ದ ಸಂಘಪರಿವಾರ ಮತ್ತು ಆ ಮೂಲಕ ಕೋಮು ವಿಷವುಣಿಸುತ್ತಿದ್ದ, ವಿಕೃತ ಮನಸ್ಸಿನ ಜನರಿಗೆ ಶವಯಾತ್ರೆ ಎಂಬುದು ಕೂಡಾ ಕುಟಿಲ ರಾಜಕೀಯ ಮತ್ತು ಕೋಮು ವಿಷ ಜ್ವಾಲೆಯ ಲಾಭದ ಲೆಕ್ಕಾಚಾರವಲ್ಲದೆ ಮತ್ತೇನೂ ಆಗಲು ಸಾಧ್ಯವಿಲ್ಲ. ಅದು ದುಃಖಪೂರಿತ ಹೃದಯ ಹೊತ್ತ ಜನರ ಮೆರವಣಿಗೆಯಾಗಿರಬಹುದೆಂದು ಹೇಳುವ ಜಿಲ್ಲಾಡಳಿತ ತೋರಿಸಿದ್ದು ಬೇಜವಾಬ್ದಾರಿಯ ಪರಮಾವಧಿ.

ಮಂಗಳೂರಿನ ಆಗ್ನೇಯ ಭಾಗದಲ್ಲಿ ಸುಮಾರು ಹತ್ತಾರು ಗ್ರಾಮಗಳ ಮಧ್ಯೆ ಉಗ್ರಹಿಂದುತ್ವವಾದಿಯಾಗಿ, ಮೂರು ಕೊಲೆಗಳ ಸರದಾರನಾಗಿ, ಹಲವಾರು ಹಲ್ಲೆ, ಸುಳಿಗೆ ದಬ್ಬಾಳಿಕೆ, ಮುಗ್ಧ ಹೆಂಗಳೆಯರ ಕನವರಿಕೆಗೆ ಕಾರಣನಾದ ಪೊಳಲಿ ಅನಂತು ಮಾಧ್ಯಮ ಮತ್ತು ಎಲ್ಲರಿಂದಲೂ 'ರೌಡಿ' ಎಂದು ಗುರುತಿಸಿಕೊಂಡ ವ್ಯಕ್ತಿ ಮಂಗಳೂರು ತಾಲೂಕು ಪಂಚಾಯತ್ ಅಧ್ಯಕ್ಷ ಮತ್ತು ಕಾಂಗ್ರೆಸ್ಸಿನಲ್ಲಿ ಅಲ್ಪಸಂಖ್ಯಾತರ ಮಧ್ಯೆ ಪ್ರಭಾವೀ ವ್ಯಕ್ತಿಯಾಗಿದ್ದ ಅಬ್ದುಲ್ ಜಬ್ಬಾರ್‌ರವರನ್ನು ಹೆಂಡತಿ ಮತ್ತು ಮಗಳ ಕಣ್ಣಮುಂದೆ ತಾಲೂಕು ಪಂಚಾಯತ್ ಅಧ್ಯಕ್ಷರ ಕೊಠಡಿಯಲ್ಲೇ ಕೊಲೆ ಮಾಡಲು ಸ್ಕೆಚ್ ರೂಪಿಸಿದ ವ್ಯಕ್ತಿ, ಎಂಬ ಆರೋಪವಿದೆ. ಗುಜರಿ ವ್ಯಾಪಾರಿ ಹಮೀದ್ ಮತ್ತು ರಫೀಕ್‌ರವರುಗಳ ರಕ್ತವನ್ನು ಹೀರಿ 'ಮಹತ್ಸಾಧನೆ' ಎಂದು ತನ್ನ ಕ್ರಿಮಿನಲ್ ಬೆಂಬಲಿಗರಿಂದ ಶಹಬಾಸ್‌ಗಿರಿ ಪಡೆದಿದ್ದ ವ್ಯಕ್ತಿ ಎಂಬುದು ಹೆಗ್ಗಳಿಕೆಯಂತೆ! ಕೋರ್ಟಿಗೆ ಬರಬೇಕಾದರೆ ಭಜರಂಗದಳದ ಎಣ್ಣೆಯಲ್ಲಿ ಅದ್ದಿ ತೀಡಿದ ಒಂದಿಂಚು ಅಗಲ 4 ಇಂಚು ಉದ್ದದ ಕುಂಕುಮ ನಾಮದ ಈ ರೌಡಿ, ನೂರಾರು ಯುವ ಕ್ರಿಮಿನಲ್‌ಗಳಿಂದ ಸುತ್ತುವರಿಯುತ್ತಿದ್ದ ಇಂತಹ ಬೆಂಬಲಿಗರ ಪಡೆಯುಳ್ಳ ಈತ ದಿನನಿತ್ಯ ಕೋರ್ಟಿಗೆ ಅಂಡೆಸೆಯುವಾಗ ಹೆಚ್ಚು ಕಡಿಮೆ ಬೆಂಗಾವಲಿಗರಾಗಿ ಅವರೆಲ್ಲಾ ಇರುತ್ತಿದ್ದರು. ಆದರೆ 7ರ ಸಂಜೆ ಜೂನ್ ಕೋರ್ಟಿನ ನಿತ್ಯಕರ್ಮ ಮುಗಿಸಿ ಪೊಳಲಿ ದೇವಸ್ಥಾನದ ಕಡೆಗೆ ಹೋಗುವ ಬಸ್ಸಿಗಾಗಿ ಇನ್ನೊಂದು ಬಸ್ಸಿನಿಂದ ಇಳಿಯುತ್ತಿರುವಂತೆಯೇ ಆತನ ಮೇಲೆ ಆಕ್ರಮಣಗೈಯ್ಯಲಾಯಿತು. ಯಾವ ಮೂರು ಹತ್ಯೆಗಳಿಂದ ಕೊಬ್ಬಿ ಹೋದ ಈ ವ್ಯಕ್ತಿ ಅದೇ ರೀತಿ ಮಾರಕಾಯುಧಗಳಿಂದ ಕೊಲೆಯಾಗಿ ದುರಂತ ಕಾಣುತ್ತಿದ್ದಾಗ ಯಾರೊಬ್ಬರೂ ಸಹಾಯಕ್ಕೆ ಬರಲಿಲ್ಲ. ಕನಿಷ್ಟಪಕ್ಷ ಕೊಲೆಗೆ ಬಳಸಿದ ವಾಹನ ಮತ್ತು ಭಾಗವಹಿಸಿದವರ ಅಸ್ಪಷ್ಟ ಗುರುತನ್ನು ಹೇಳದಂತಾದರು. 38 ವರ್ಷದ ಈ ವ್ಯಕ್ತಿ ಎರಡು ಮಕ್ಕಳ ತಂದೆ. ಹಿಂದುಳಿದ ವರ್ಗಕ್ಕೆ ಸೇರಿದ ಈ ವ್ಯಕ್ತಿ ಉಗ್ರ ಹಿಂದುತ್ವದ ಅಮಲು ತಾನು ಉಂಡದ್ದು ಮಾತ್ರವಲ್ಲದೆ ನೂರಾರು ಜನರಿಗೆ ಕೈಯಾರೆ ತಿನ್ನಿಸಿ ಬೆಳೆಸಿದ. ಈ ವ್ಯಕ್ತಿಯ ಕೊಲೆ ಖಂಡಿತವಾಗಿಯೂ ಅಪಾಯಕಾರಿ ಸನ್ನಿವೇಶವನ್ನು ನಿರ್ಮಿಸಿ ಕೋಮುಗಲಭೆ ಬಳಸಬಹುದಾದ ಬಗ್ಗೆ ಸಾಮಾನ್ಯ ಜನರಿಗೂ ಯಾವುದೇ ಸಂಶಯವಿರಲಿಲ್ಲ.

ಆದರೆ ಜಿಲ್ಲೆಯ ಜನರ ಆಸ್ತಿ–ಜೀವರಕ್ಷಣೆ ಹೊತ್ತಿರುವ ಖಾಕಿದಾರಿ ಎಸ್.ಪಿ. ಮತ್ತು ಅವರ ಪಡೆಗೆ ಮಾತ್ರ ಗೊತ್ತಾಗ ಲಿಲ್ಲ. ದಿನನಿತ್ಯ ಕ್ರಿಮಿನಲ್ ಕೃತ್ಯಕ್ಕಾಗಿ ಪತ್ರಿಕೆಯಲ್ಲಿ ರಾರಾಜಿಸುವ ಬಳಗ ನಡೆಸುವ ಶವಯಾತ್ರೆ ಶಾಂತಿಯುತವಾಗಿರಬಹುದೆಂದು ತಿಳಿದುಕೊಂಡದ್ದು ಬಹುಕ್ರೂರ ವಿಕಟ. ಜೂನ್ 8ರಂದು ಈ ರೌಡಿಯ ಶವಯಾತ್ರೆ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಿಂದ ದೂರದ ಪೊಳಲಿಗೆ ಸರಿಸುಮಾರು 22 ಕಿ.ಮೀಗಳ ತನಕ ನಡೆಯಿತು. ದಾರಿಯುದ್ಧಕ್ಕೂ ಪೊಲೀಸರ ಸಮ್ಮುಖದಲ್ಲೇ ಅಲ್ಪಸಂಖ್ಯಾತರ ಮೇಲೆ ಧಾಳಿ, ಅಂಗಡಿಗೆ ಕಲ್ಲು, ವಾಹನ ಜಖಂ ಮನೆಗೆ ಧಾಳಿ, ಮಸೀದಿಗೆ ಕಲ್ಲು ತೂರಾಟ ವಸ್ತುಶಃ ಮಧ್ಯಾಹ್ನ 12ರಿಂದ ಸಂಜೆ 5ರತನಕ ಈ 22 ಕಿ.ಮೀ ಉದ್ದಗಲವೂ ಈ ಕ್ರಿಮಿನಲ್ ಪಡೆಯ ಹಾವಳಿ ಧಾಳಿ. ಇದರ ಉಸ್ತುವಾರಿ ಬಿಜೆಪಿಯ ಉಡುಪಿ ಸಂಸದರು, ಶಾಸಕರು ವಿ.ಎಚ್.ಪಿ ನಾಯಕರು, ಸಂಘಪರಿವಾರ ಇವರೆಲ್ಲರ ಸಮ್ಮುಖದಲ್ಲಿ ನಡೆದೇ ಇತ್ತು. ಇದನ್ನು ಚಿತ್ರೀಕರಿಸಿದ ಮಾಧ್ಯಮದ ಕ್ಯಾಮರಾಮೆನ್‌ಗಳ ಮೇಲೆ ಹಲ್ಲೆ, ರೀಲ್ ಕಸಿಯುವಿಕೆ ನಡೆಯಿತು. ಪೊಲೀಸ್ ಪರ ಕ್ಯಾಮರಾ ಮೆನ್‌ನನ್ನು ಸುತ್ತುವರಿದು ಕ್ಯಾಮರಾಕ್ಕಾಗಿ ಕಿತ್ತಾಟ ನಡೆದು, ಆತ ಪೊಲೀಸರ ಜೀಪಿನಲ್ಲಿ ಅವಿತುಕೊಂಡಾಗ ಅಲ್ಲಿಗೆ ಮುತ್ತಿಗೆ ಹಾಕಿ ವ್ಯಕ್ತಿಯನ್ನು ತಮ್ಮ ವಶಕ್ಕೆ ನೀಡಲು ಬೇಡಿಕೆ ಮಂಡಿಸಿದರು. ಆಗ ಎಸ್.ಪಿ.ಸೌಮೇಂದ್ರಸಿ ಮುಖರ್ಜಿ ಕೈಮುಗಿದು "ಅವ ನಮ್ಮವ...... ನಿಮ್ಮ ಶತ್ರು ಅಲ್ಲ" ಎಂಬ ಬೇಜವಾಬ್ದಾರಿಕೆ ಅಂಗಲಾಚುವಿಕೆ. ಸಂಘಪರಿವಾರದ ಅಸಹ್ಯ ಕೀಳುಮಟ್ಟದ ಮಾನಹಾನಿಕರ ಶಬ್ದಗಳಿಂದ ಎಚ್.ಪಿಗೆ ನಿಂದಿಸಿದರು. "ಪೊಲೀಸರೇ ಷಂಡರು ಎಂದೂ ಪೊಲೀಸ್ ವ್ಯಾನಿಗೆ ಬೆಂಕಿ ಹಾಕುತ್ತೇವೆ ಎಂದಾಗಲೂ ಪತ್ರಿಕೆಯೊಂದು ಬರೆದಂತೆ ಹೇಳಲಾಗದ ಬರೆಯಲಾಗದ ಪದಗಳಿಂದ ಎಸ್.ಪಿಗೆ ಅಪಮಾನಿಸುತ್ತಿದ್ದರೂ ಎಸ್.ಪಿ ಮಾತ್ರ ನಿಷ್ಕ್ರಿಯರಾಗಿಯೇ ಇದ್ದರು. ಇಂತಹ ಶವಯಾತ್ರೆ ಅಡ್ಡೂರು ಹಲ್ಲೆ ಗುಜರಾತ್ ಮಾದರಿ ತಳೆದಾಗ 4 ಜನರ ಮೇಲೆ ಮಾರಣಾಂತಿಕ ಹಲ್ಲೆ ಕೊನೆಗೂ ಓರ್ವ ಬಲಿಯಾದರು. ಕೊನೆಗೆ ಗಾಳಿಯಲ್ಲಿ ಗುಂಡು ಹಾರಿಸಿ ಪರಿಸ್ಥಿತಿ ಹತೋಟಿಗೆ ತಂದರು. ಸಭೆಯೊಂದರಲ್ಲಿ ಕಾರ್ಕಳದ ಶಾಸಕ ಸುನೀಲ್‌ಕುಮಾರ್ ಇಂತಹ ನೂರಾರು ರೌಡಿ ಅನಂತರನ್ನು ಹಿಂದು ಬಾಂಧವರು ಹುಟ್ಟಿಸಿ ಎಂಬ ಪುಕ್ಕಟೆ ಕರೆಯನ್ನು ಮೊಳಗಿಸಿದರು.

ಕಳೆದ ಶನಿವಾರ ಬಸ್ಸು ದರೋಡೆ, ನೆಲ್ಲಿಕಾರುವಿನಲ್ಲಿ ಡಿ.ವೈ.ಎಫ್.ಐ ಕಾರ್ಯಕರ್ತರ ಮೇಲೆ ಹಲ್ಲೆ–ಭಜರಂಗದಳ ಮಾರಾಮಾರಿ, ರೌಡಿ ಅನಂತನ ಹತ್ಯೆಯ ನಂತರದ ನಿರ್ಮಾಣಗೊಂಡ ಭಯಾನಕ ಸನ್ನಿವೇಶವನ್ನು ಜಿಲ್ಲಾಡಳಿತ ಸರಿಯಾಗಿ ಗ್ರಹಿಸಲಿಲ್ಲ ಅಥವಾ ಅಗತ್ಯವಾದ ಬಿಗಿ ಕ್ರಮ ಕೈಗೊಳ್ಳಲ್ಲದೇ ಉಡಾಫೆಯಾಗಿ ವರ್ತಿಸಿತು. ಶವಯಾತ್ರೆಯ ಮೆರವಣಿಗೆಗೆ ಅನುಮತಿ ನೀಡಿತು. ಇಂತಹ ಸ್ಥಿತಿಯಲ್ಲಿ ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆ ಪ್ರಾಮಾಣಿಕವಾಗಿ ಸ್ಪಂಧಿಸಿವೆ. ರಾಜ್ಯಸಮಿತಿಯಿಂದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ ಮತ್ತು ಪಂಪ್‌ವೆಲ್ ಘಟನೆ ಆದ ಬಳಿಕ ದ.ಕ ಜಿಲ್ಲಾ.ಮುಖಂಡತ್ವ, ಕೆ.ಆರ್.ಶ್ರೀಯಾನ್ ನೇತೃತ್ವದಲ್ಲಿ ಗಾಯಾಳುಗಳನ್ನು ಭೇಟಿಯಾಗಿದ್ದಾರೆ. ದಿನಾಂಕ 9.6.05 ರಂದು ಗಲಭೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಸಂದರ್ಶಿಸಿತು. ಅಂತಿಮವಾಗಿ ನಮ್ಮ ಪಕ್ಷದ ಶಾಸಕರಾದ ಸಂಗಾತಿ ಜಿ.ವಿ.ಶ್ರೀರಾಮರೆಡ್ಡಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಬಿ.ಮಾಧವ, ಕೆ.ಆರ್.ಶ್ರೀಯಾನ್‌ರವರುಗಳು ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಸಂಘಪರಿವಾರದ ಅಟ್ಟಹಾಸ ಮತ್ತು ಜಿಲ್ಲಾಡಳಿತದ ವೈಫಲ್ಯ ಶಾಮೀಲುತನ ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಯಿತು.

ವರದಿ : ಕೃಷ್ಣಪ್ಪ ಕೊಂಚಾಡಿ

ಶಾಂತಿ ಸಾಮಾಜಿಕ ನ್ಯಾಯ ಮತ್ತು ಕೋಮುಸೌಹಾರ್ದತೆಯನ್ನು ಬಯಸುವ ಶಕ್ತಿಗಳಿಗೆ, ವ್ಯಕ್ತಿಗಳಿಗೆ ವಿಶ್ವಾಸ–ಧೈರ್ಯವನ್ನು ತುಂಬಿದೆ. ಯಾವ ರೀತಿ ಉಡುಪಿ ಬೆತ್ತಲೆ ಪ್ರಕರಣಕ್ಕೆ ಪ್ರತಿರೋಧದ ಸರಮಾಲೆಯನ್ನು ಸೃಷ್ಟಿಸಲು ಸಿಪಿಐ(ಎಂ)ಗೆ ಸಾಧ್ಯವಾಯಿತೋ ಅದೇ ರೀತಿಯಲ್ಲಿ ಈ ಘಟನೆಗೂ ಸ್ಪಂಧಿಸಲಾಗಿದೆ.

ಅಡಿಷನಲ್ ಡಿಜಿಪಿ ಸುಭಾಷ್ ಭರಣಿಯವರು ಭೇಟಿ ನೀಡಿ ಎಸ್.ಪಿಯನ್ನು ತೀವ್ರ ಟೀಕೆ ಮಾಡುತ್ತಾ ಸಾರ್ವಜನಿಕ ಪರೇಡ್ ಮಾಡುತ್ತೇವೆಂದು ಬಹಿರಂಗವಾಗಿ ಘೋಷಿಸಿದ್ದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ಪೊಲೀಸ್ ಇಲಾಖೆಗೆ ಸ್ಪಷ್ಟ ಸಂದೇಶ ರವಾನಿಸಿದಂತಾಗಿದೆಯೇ? ಇದರಿಂದ ಆಡಳಿತ ಕೊಂಚವಾದರೂ ನಿಷ್ಪಕ್ಷಪಾತ ಕ್ರಿಯಾಶೀಲವಾದೀತೆ? ಇತ್ತ ಜಿಲ್ಲಾಡಳಿತ ಉಸ್ತುವಾರಿ ಸಚಿವರೊಂದಿಗೆ ಸೇರಿಕೊಂಡು ಮಾಮೂಲಿನಂತೆ ಶಾಂತಿ ಸಭೆ ನಡಿಸಿದೆ, ಬಿಜೆಪಿ ಮತ್ತು ಸಂಘ ಪರಿವಾರ ಬಹಿಷ್ಕರಿಸಿ ಪ್ರತ್ಯೇಕ ಪತ್ರಿಕಾಗೋಷ್ಠಿ ನಡೆಸಿದೆ. ಕೊನೆಕ್ಷಣದಲ್ಲಿ ಪ್ರಾರಂಭವಾಗಿರುವ ಕೆಲವರ ಬಂಧನವನ್ನು, ಗೊಂಡಾ ಕಾಯ್ದೆ ಬಳಕೆಯನ್ನು ವಿರೋಧಿಸಿರುತ್ತಾರೆ.



ಪಂಪ್‌ವೆಲ್ ಬಳಿ ಭಜರಂಗದಳದವರ ಚೂರಿ ಇರಿತಕ್ಕೆ ಈಡಾದ ವರದಿಗಾರ

ಶವಯಾತ್ರೆ ಸೃಷ್ಟಿಸಿದ ಶವಗಳು :

೨ರಂದು ಮಂಗಳೂರು ಪರಿಸರದಲ್ಲಿ ನಡೆದ ಗಲಭೆಗಳು ಯೋಜಿತವಾದವುಗಳು ಎಂದು ಸ್ಪಷ್ಟವಾಗಿ ಕಾಣುತ್ತದೆ. ಪಂಪ್‌ವೆಲ್ ಘಟನೆಯು ಬಜರಂಗದಳದ ವಿರುದ್ಧ ಸಾರ್ವಜನಿಕರ ಆಕ್ರೋಶ ತಿರುಗುತ್ತಿರುವುದನ್ನು, ಮರೆಸಲು ಪೊಳಲಿ ಅನಂತುವಿನ ಕೊಲೆ ನೆಪವಾಯಿತು.

ಹೀಗಾಗಿ ೨ರಂದು ಮಂಗಳೂರು ಬಂದ್‌ಗೆ ಕರೆ ನೀಡಲಾಯಿತು. ಅಂದೇ, ಅದೇ ಸಂದರ್ಭದಲ್ಲಿಯೇ ವೆನ್‌ಲಾಕ್ ಆಸ್ಪತ್ರೆಯಿಂದ ಶವಯಾತ್ರೆ ಹೊರಟಿತು.

ಈ 'ಯಾತ್ರೆ'ಯಲ್ಲಿದ್ದ ತಂಡಗಳು ಹಂಪನ ಕಟ್ಟದ ಹಲವಾರು ಅಂಗಡಿಗಳಿಗೆ ಕಲ್ಲು ತೂರಿ ಹಾನಿ ಮಾಡಿದರು. ಹೀಗೆ ಆರಂಭಗೊಂಡದ್ದು ದಾರಿಯುದ್ದಕ್ಕೂ ಆಕ್ರಮಣ, ಹಲ್ಲೆ, ಆಸ್ತಿ ನಾಶ ಮಾಡುತ್ತಲೇ ಹೋಯಿತು. ಇದರ ಅರಿವಿಲ್ಲದೆ ಎದುರಿಗೆ ಬರುತ್ತಿದ್ದ ಅಮಾಯಕರ ವಾಹನಗಳು ಪುಡಿಯಾದವು. ಮೈಯ ಮೂಳೆ ಮುರಿದವು. ಒಂದೆಡೆ ಕಾರಿನ ಡ್ರೈವರ್ ಅಲ್ಪಸಂಖ್ಯಾತರನ್ನು ಅಡ್ಡಗಟ್ಟಿ ಡ್ರೈವರ್‌ಗೆ ಹೊರಗೆಳೆದು ತದುಕಲಾಯಿತು. ಕಾರು ಪುಡಿಯಾಯಿತು.

ಸ್ಕೂಟರ್ ಮೇಲೆ ಬರುತ್ತಿದ್ದಾತನನ್ನು (ಆತ ಮುಸ್ಲಿಂ) ಎಳೆದು ಕೆಡವಿ ಹೊಡೆದರು. ಹೊಡೆತ ತಾಳದೇ ಆತ ನದಿಗೆ ಹಾರಿದ. ಕೂಡಲೇ ಕಲ್ಲುಗಳ ಪ್ರಹಾರ ನಡೆದೇ ಇತ್ತು. ಹೊಸ ಟಿ.ವಿ ಕೊಂಡೊಯ್ಯುತ್ತಿದ್ದವನ ಟಿ.ವಿ ಪುಡಿ ಪುಡಿ! ವಾವಂಜೂರು, ಅಡ್ಡೂರು, ಕಡೆಗಳಂತ ಅಲ್ಪಸಂಖ್ಯಾತರ ಅಂಗಡಿ, ಮನೆಗಳ ಮೇಲೆ ಧಾಳಿ ನಡೆದವು. ಮನೆಹೊಕ್ಕ ಮಕ್ಕಳು, ಮಹಿಳೆಯರಿಗೆ ಹೊಡೆತ ಬಿದ್ದವು. ವಸ್ತುಗಳು ಪುಡಿಪುಡಿ. ಇಂತಹ ಸಂದರ್ಭದಲ್ಲಿ ಗಲಭೆಗಳಲ್ಲಿ ಬಡಿದಾಟ ಆಗಿ ಒಂದು ಹೆಣ ಬಿದ್ದದ್ದು, ಕೆಲವರು ಆಸ್ಪತ್ರೆ ಸೇರಿದ್ದ, ಇದರಲ್ಲಿ ಪೋಲೀಸರು ಏಟು ತಿಂದರು. ಇದನ್ನು ಚಿತ್ರೀಕರಿಸಿದ ಮಾಧ್ಯಮಗಳು ಕ್ಯಾಮರಾ ಪುಡಿಯಾದವು. ಒದೆಗಳು ಬಿದ್ದವು. ಪೋಲೀಸರ ವಿಡಿಯೋ ಕ್ಯಾಸೆಟ್ ಕೊಡದಿದ್ದಲ್ಲಿ ಪೋಲೀಸ್ ವ್ಯಾನಿಗೆ ಬೆಂಕಿ ಹಚ್ಚುವುದಾಗಿ ಬೆದರಿಸಿದರು. ಲಾಠಿಚಾರ್ಜು ಮಾಡಬೇಕಾಗುತ್ತದೆ ಎಂದ ಪೋಲೀಸರಿಗೆ ನಮ್ಮಲ್ಲಿ ರಾಡುಗಳಿವೆ ಎಂದು ತೋರಿಸಿದರು. ಕೊನೆಗೆ ಪೋಲೀಸರು ದೃಢವಾಗಿ ವರ್ತಿಸದೇ ಬಜರಂಗದಳದ ಬೇಡಿಕೆಯಂತೆ ಕ್ಯಾಸೆಟ್‌ನ್ನು ಪೋಲೀಸರು ಕೊಟ್ಟುಬಿಟ್ಟರು. ಗಲಭೆಖೋರರ ಮೇಲೆ ಲಾಠಿ ಎತ್ತುತ್ತಿದ್ದ ಕೆಲವು ಪೋಲೀಸ್ ಅಧಿಕಾರಿಗಳ ಲಾಠಿಗಳನ್ನು ಅಶರೀರವಾಣಿ ಕೆಳಗೆ ಇಳಸುವಂತೆ ಹೇಳಿತು. ಲಾಠಿ ಎತ್ತಿದವರನ್ನು ಹುಡುಕಿ ಬಜರಂಗದವರು ಬಡಿದು ಕ್ರಮ ತೆಗೆದುಕೊಂಡರು.

ಈ ಎಲ್ಲಾ ಸಂಗತಿಗಳನ್ನು ಮಾಧ್ಯಮಗೋಷ್ಠಿಯಲ್ಲಿ ಎಳೆಎಳೆಯಾಗಿ ಬಿಡಿಸಿಡಲಾಯಿತು. ಬಜರಂಗದಳದ ಹಾವಳಿ ಆಕ್ರಮಣ ನಿತ್ಯ ನಡೆದಿರುವಾಗ ಈ ದ್ವೇಷದ ವಾತಾವರಣವನ್ನು ಪೋಲೀಸ್ ಇಲಾಖೆ ಅಧಿಕಾರಿಗಳು ಯಾಕೆ ಗಮನಿಸಲಿಲ್ಲ. ಶವಯಾತ್ರೆಗೆ ಯಾಕೆ ಪರವಾನಗಿ ನೀಡಲಾಯಿತು? ಅದು 22 ಕಿ.ಮಿ, ಈತನೇನು ರಾಷ್ಟ್ರಮಟ್ಟದ ನಾಯಕನೇ, ಮಹಾನ್ ಮೇಧಾವಿಯೇ? ಅದೂ ರೌಡಿ ಎಂದು ಗೊತ್ತಿದ್ದು.

ಇಷ್ಟಾದರೂ ಪೋಲೀಸರ ಬಲ ತೀರ ಕಡಿಮೆ ಇತ್ತು. ಅನೇಕ ಕಡೆ ಗಲಭೆಗಳು ಪೋಲೀಸರ ಕಣ್ಣಮುಂದೆ, ಅವರು ವಿರಾಮ ತೆಗೆದುಕೊಳ್ಳುತ್ತಾ ಸಾಗುತ್ತಿದ್ದಾಗಲೇ ನಡೆದವು. ಅಂದರೆ ಜಿಲ್ಲಾಡಳಿತ ಎಸ್.ಪಿ, ಡಿ.ಸಿ ಪೂರ್ಣವಾಗಿ ವಿಫಲರಾಗಿದ್ದಾರೆ.

ಮೈತ್ರಿಕೂಟದ ಸರ್ಕಾರ: ತಪ್ಪಿಸಿಕೊಂಡ ನೂರಾರು ಅವಕಾಶಗಳು

ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ರಚನೆಗೊಂಡ ಧರಂಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಂತೂ-ಇಂತೂ ವರ್ಷ ಪೂರೈಸಿದೆ. ರೈತ-ಕಾರ್ಮಿಕರ ಸಮಸ್ಯೆಗಳ ಪರಿಹಾರ, ನಿರುದ್ಯೋಗ, ಭ್ರಷ್ಟಾಚಾರ ತಡೆಗಟ್ಟುವಿಕೆ ಮಮತ್ತು ಕೋಮುವಾದಿಗಳ ಅಟ್ಟಹಾಸ ಮಟ್ಟ ಹಾಕುವುದು ಇಂತಹ ನೂರಾರು ಅವಕಾಶಗಳನ್ನು ಈ ದೋಸ್ತಿ ಸರ್ಕಾರ ಕಳೆದುಕೊಂಡಿದೆ

ಮೇ 28, ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಮೈತ್ರಿಕೂಟದ ಸರ್ಕಾರ 365 ದಿನಗಳನ್ನು ಪೂರೈಸಿದ ದಿನ. ಮುಖ್ಯಮಂತ್ರಿ ಧರಂಸಿಂಗ್ ಮತ್ತು ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಧ್ಯಮಗಳ ಎದುರು ಒಂದು ವರುಷದ ಸಾಧನೆಗಳ ಬುತ್ತಿ ಬಿಚ್ಚಿಟ್ಟರು! ಅದೂ ಪ್ರತ್ಯೇಕ ಪ್ರತ್ಯೇಕವಾಗಿ. ಇನ್ನೂ ವಿಶೇಷವೆಂದರೆ ಈ ದೋಸ್ತಿ ಸರ್ಕಾರದ ಭಾಗಿದಾರ ಪಕ್ಷಗಳ ನಾಯಕರು ಶಿವಮೊಗ್ಗದಲ್ಲಿ ಚುನಾವಣಾ ಹಣಾಹಣಿಯ ನಡುವೆ ಬಿಡುವು ಮಾಡಿಕೊಂಡು ಮಾತನಾಡಿದರು. ಶಿವಮೊಗ್ಗ ಲೋಕಸಭಾ ಕ್ಷೇತ್ರ ಬಿಜೆಪಿಯ ಕೈಯಲ್ಲಿದ್ದುದ್ದನ್ನು ಕಸಿಯಲು ಆ ಸೆಣಸಾಟ. ಒಂದಾಗಿ ಅಲ್ಲ, ಬೇರೆಯಾಗಿ. ಕೋಮುವಾದಿ ಗಳನ್ನು ಅಧಿಕಾರದಿಂದ ದೂರವಿಡಲೆಂದೇ ಈ ಮೈತ್ರಿ ಏರ್ಪಟ್ಟಿದೆ ಎಂಬ ನಾಯಕರ ಮಾತುಗಳನ್ನು ಮತದಾರರಿನ್ನೂ ಮರೆತಿಲ್ಲ.

ಹೊಸ ಪ್ರಯೋಗ

ನಿಜ, ಕರ್ನಾಟಕದ ಪಾಲಿಗೆ ಇದು ಅನಿವಾರ್ಯ, ಹೊಸ ಪ್ರಯೋಗ. ಎಸ್.ಎಂ.ಕೃಷ್ಣರ ಸರ್ಕಾರದ ಜನವಿರೋಧಿ, ಭ್ರಷ್ಟ ದುರಾಡಳಿತದ ವಿರುದ್ಧ ಸಾರ್ವತ್ರಿಕ ಚುನಾವಣೆಯಲ್ಲಿ ಈ ಜನರ ಆಕ್ರೋಶ ಕಟ್ಟೆಯೊಡೆದಿತ್ತು. ಕೃಷ್ಣರ ಸರ್ಕಾರವನ್ನು ಜನ ತಿರಸ್ಕರಿಸಿದ್ದರು. ಆದರೆ ಯಾವ ಒಂದು ಪಕ್ಷವೂ ಸರ್ಕಾರ ರಚಿಸುವ ಸ್ಥಿತಿಯಲ್ಲಿ ಇರಲೇಇಲ್ಲ. ಇದರೊಟ್ಟಿಗೆ ಕೋಮುವಾದಿ ಬಿಜೆಪಿ ತನ್ನ ಸ್ಥಾನ ಬಲ ಹೆಚ್ಚಿಸಿಕೊಂಡಿತಾದರೂ ಜನತೆ ಅಧಿಕಾರಕ್ಕೆಬರುವುದನ್ನು ತಡೆದರು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕೋಮುವಾದಿಗಳ ಕೈಗೆ ಕರ್ನಾಟಕವನ್ನು ಒಪ್ಪಿಸಲಾಗದ ಒಂದು ವಿಶಿಷ್ಟ ರಾಜಕೀಯ ಸನ್ನಿವೇಶದಲ್ಲಿ ಸೆಕ್ಯುಲರ್ ಪಕ್ಷಗಳಾದ ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳ ಪರಸ್ಪರ ಹೋರಾಡಿದ್ದರೂ ಒಟ್ಟಿಗೆ ಬರುವುದು ಅನಿವಾರ್ಯವಾಗಿತ್ತು. ಈ ಘನೋದ್ದೇಶ ಸಾರಿ ಸಮ್ಮಿಶ್ರ ಸರ್ಕಾರ ರಚನೆಗೊಂಡಿತು. ಮುಖ್ಯಮಂತ್ರಿ ಯಾರಾಗಬೇಕೆಂಬ ಮಥನದಲ್ಲಿ ಕಾಂಗ್ರೆಸ್‌ನ ಧರಂಸಿಂಗ್ ಅಧಿಕಾರ ವಹಿಸಿಕೊಂಡರು. ಹಾಗೆಯೇ ಸಣ್ಣದಾದ ಮಂತ್ರಿಮಂಡಲವೂ ಕೂಡ. ಇದು ವಿಸ್ತರಣೆಯಾದುದೇ ಬೀದಿ ರಂಪಾಟ ಆದ ಬಳಿಕವೇ. ಯಾಕೆಂದರೆ ಖಾತೆ ಹಂಚಿಕೆ, ಗುಂಪುವಾರು ಪ್ರಾತಿನಿಧ್ಯಗಳೇ ಪ್ರಧಾನವಿರುವ ಇಂತಹ ಬೂರ್ಷ್ವಾ ಪಕ್ಷಗಳಲ್ಲಿ ತಳ್ಳಾಟ- ತಿಕ್ಕಾಟ- ಕಿತ್ತಾಟ ಸಹಜವೇ. ಈಗಲೂ ಕಾಂಗ್ರೆಸ್ ಪಾಲಿನ ಇಬ್ಬರು ಸಚಿವರ ಸ್ಥಾನ ತುಂಬಲಾಗದೇ ಹಾಗೇ ಉಳಿದಿದೆ! ಅಧಿಕಾರ ಹಂಚಿಕೆಯ ಕಿತ್ತಾಟದಲ್ಲಿ ಕೇಳಿಬಂದ ಮಾತೆಂದರೆ 'ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಸಮ್ಮುಖದಲ್ಲಿ ಆದ ಒಪ್ಪಂದದಂತೆ..' ಆಗಬೇಕು ಎಂಬುದು. ಅದೇನು ಒಪ್ಪಂದವಾಗಿದೆಯೋ ದೇವೇಗೌಡರು ಮತ್ತು ಸೋನಿಯಾಗಾಂಧಿ ಯವರೇ ಹೇಳಬೇಕು. ಅದು ಜನರೆದುರು ಬರುವುದು ಬಹುಶಃ ಇನ್ನೊಂದು ಗಂಭೀರ ಬಿಕ್ಕಟ್ಟಿನ ಸಂದರ್ಭದಲ್ಲೇ ಇರಬಹುದು.

ಉಳಿದ ನಿರೀಕ್ಷೆಗಳು

ಈ ಮೈತ್ರಿ ಕೂಟದ ಸರ್ಕಾರವನ್ನು ಜನತೆ ಸ್ವಾಗತಿಸಿದ್ದಾರೆ. ಹಿಂದಿನ ಕೇಂದ್ರದ ಬಿಜೆಪಿ ಸರ್ಕಾರ, ರಾಜ್ಯದ ಹೈಟೆಕ್‌ನ ಕೃಷ್ಣರ ಸರ್ಕಾರಗಳ ನೀತಿಗಳಿಂದ ತತ್ತರಿಸಿದ ತಮ್ಮ ಬವಣೆಗಳಿಗೆ ಕಿಂಚಿತ್ತಾದರೂ ಸಾಂತ್ವನ, ಪರಿಹಾರ ಸಿಗಬಹುದು ಎಂದು ಕಾತರದಿಂದ ಕಾದಿದ್ದಾರೆ. ಜನತೆಯ ನಿರೀಕ್ಷೆಗೆ ಸ್ಪಂದಿಸುವ ಹಲವಾರು ಅವಕಾಶಗಳು ಬಂದಿವೆ. ಆದರೆ ಸರ್ಕಾರ ನಿರೀಕ್ಷೆಯ ಅಂಚಿನಲ್ಲಿ ಆರಂಭದಲ್ಲಿ ಹಾಗೂ ಬಜೆಟ್ ಸಂದರ್ಭದಲ್ಲಿ ಒಂದೆರೆಡು ನೀರ ಹನಿಗಳನ್ನು ಸಿಂಪಡಿಸಿದಂತೆ ಮಾಡಿದ್ದು ಬಿಟ್ಟರೆ ಉಳಿದಂತೆ ನಿರೀಕ್ಷೆಗಳೇ ಜನರ ಪಾಲಿಗೆ.

ಮೂಲಭೂತವಾಗಿ ಕೃಷಿ - ಕೈಗಾರಿಕಾ ಬಿಕ್ಕಟ್ಟಿನ ಪರಿಹಾರ, ನಿರುದ್ಯೋಗ ನಿವಾರಣೆಗೆ, ಕೋಮುಸೌಹಾರ್ದತೆಯಂತಹ ಮಾಡಬೇಕಾದ್ದನ್ನು ಮಾಡದೇ. ಬಿಟ್ಟು ನಿಸರ್ಗ ಸಹಜವಾಗಿ ಮಳೆಬಂದುದು, ಬೆಳೆಯಾದುದು, ಎಸ್‌ಟಿಎಫ್ ವೀರಪ್ಪನ್ ಹತ್ಯೆ ಮಾಡಿದಂತಹ ಘಟನೆಗಳನ್ನು ತಮ್ಮ ಕಾಲುಗುಣ-ಕೈಗುಣದಿಂದಲೇ ಎಂದು ಕಥೆ ಕಟ್ಟಿ ನಾಡ ತುಂಬ ಹೇಳಿ ಓಡಾಡಿದ್ದು ನಾಚಿಕೆಗೇಡಿನ ಪ್ರಸಂಗ. 2004 ರ ಮಧ್ಯಾವಧಿಯಲ್ಲಿ ಒಂದು ಬಾರಿ ಮಾತ್ರ 2005 ರಲ್ಲಿ ಬಜೆಟ್‌ನ ಮಂಡನೆಯಲ್ಲಿ ಜನತೆಗೆ ಸಾಕಷ್ಟು ಪರಿಹಾರ ಒದಗಿಸಬಹುದಿತ್ತು. ಜನಪರ, ಬಡವರ, ಗ್ರಾಮೀಣ ಪರ ಎಂಬ ಮಾತುಗಳು ಮಾಧ್ಯಮಗಳ ಅಕ್ಷರಗಳಾಗಿ ಹೋದವೇ ಹೊರತು ಕಾರ್ಯರೂಪಿ ಸಂಕಲ್ಪವಾಗಲಿಲ್ಲ.

ಇಲ್ಲದ ಸಂಕಲ್ಪ

ಹಾಗೆ ನೋಡಿದರೆ ಆರಂಭದಿಂದಲೂ ಈ ಸರ್ಕಾರ ಹೊಸ ಜಾಡು ಹಿಡಿಯಲಿಲ್ಲ. ಮೈತ್ರಿ ಕೂಟದ ಸರ್ಕಾರ ರಚನೆಯಾದ ಮರುದಿನಗಳಲ್ಲೇ ಮೊದಲ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ ನೂತನ ಸರ್ಕಾರದ ರಾಜಕೀಯ ಸಂಕಲ್ಪವಾಗಿರದೇ ಹಿಂದಿನ ಸರ್ಕಾರದ ಅಧಿಕಾರಶಾಹಿಯು ಹಳಸಿದ



ಮಾತುಗಳಾಗಿದ್ದವು. ಹೊಸ ಸನ್ನಿವೇಶಕ್ಕೆ ಅಗತ್ಯವಾದ ಕಣ್ಣೋಟವಿರಲಿಲ್ಲ. ಬಜೆಟ್ ಸಮಯದಲ್ಲಾದರೂ ಹೊಸತು ಬರಬಹುದು ಎಂಬ ನಿರೀಕ್ಷೆಯೂ ಪೂರ್ಣಫಲಿಸಲಿಲ್ಲ. ಹಣಕಾಸಿನ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಪಡಿತರ ಪದ್ಧತಿಯ ಮೂಲಕ ಮೂರು ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ, ಶೇ 6 ಬಡ್ಡಿದರದಲ್ಲಿ ರೈತರಿಗೆ ಸಾಲನೀಡಿಕೆಯಂತಹ ಒಂದೆರೆಡು ನಿರ್ಧಾರಗಳನ್ನು ಬಿಟ್ಟರೆ ಉಳಿದಂತೆ ಉದಾರೀಕರಣ, ಜಾಗತೀಕರಣದ, ವಿಶ್ವಬ್ಯಾಂಕ್ - ಐಎಂಎಫ್ ನಂತಹ ವಿದೇಶಿ ಹಣಕಾಸು ಸಂಸ್ಥೆಗಳ ನಿರ್ದೇಶನಗಳ ಜಾರಿಯೇ ಪ್ರಧಾನ ಅಂತಃಸತ್ವವಾಗಿತ್ತು.

ಮಧ್ಯಾವಧಿ ಹಣಕಾಸು ವಿಧೇಯು ಸಂದರ್ಭದಲ್ಲಂತೂ ಇದು ಮರಣ ಮೃದಂಗದಂತೆ ತೋರಿತು. ಸರ್ಕಾರದ ಇಲಾಖೆಗಳ ಮುಚ್ಚುವ ಹಾಗೂ ರಾಮಸ್ವಾಮಿ ವರದಿ ಜಾರಿಗೆ ಬದ್ಧತೆ, ಶಿಕ್ಷಣ-ಸಾಮಾಜಿಕ ಕಲ್ಯಾಣ, ಸಾರಿಗೆ, ವಿದ್ಯುತ್ ನಂತಹ ಸಾಮಾಜಿಕವಲಯಕ್ಕೆ ನೀಡಲಾಗುತ್ತಿದ್ದ ಪ್ರತಿ ಸಹಾಯಧನದಲ್ಲಿ ಶೇ 15 ರಷ್ಟು ಕಡಿತ, ಸಾರ್ವಜನಿಕ ಕೈಗಾರಿಕೆಗಳ ಪರಭಾರೆ, ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀಕರಣ ಪ್ರಕ್ರಿಯೆ ಮುಂದುವರಿಕೆ, ಬಂಡವಾಳಗಾರರಿಗೆ ರಿಯಾಯಿತಿಗಳು, ಮೂಲ ಸಂರಚನಾ ಹೊಂದಾಣಿಕೆ, ಸರ್ಕಾರದ ನಿಜವಾದ ಇಚ್ಛಾಶಕ್ತಿ ಏನೆಂದು ತಿಳಿಯಪಡಿಸಿತು.

ಕೃಷ್ಣರ ಸರ್ಕಾರದಂತೆ ಐಟಿ, ಬಿಟಿಗಳ ಪರವಲ್ಲ ಎಂದು ಆರಂಭದಲ್ಲಿ ಆರ್ಭಟಿಸಿದರೂ (ಜೆಡಿಎಸ್ ಒತ್ತಡ) ನಂತರ ಅದು ನೆಲಕಚ್ಚಿ ಅವರಿಗೆ ಹಸಿರು ಹಾಸಿನ ಹುಲ್ಲಾಗಿಬಿಟ್ಟಿತು.

ಮಾಲೀಕರೊಂದಿಗೆ

ರೈತಾಪಿ ಹಾಗೂ ಕಾರ್ಮಿಕವರ್ಗದ ಮೂಲಭೂತ ಸಮಸ್ಯೆಗಳ ಪರಿಹಾರದತ್ತ ಹೆಜ್ಜೆ ಇಡಲಿಲ್ಲ ಈ ಸರ್ಕಾರ. ಗಾರ್ಮೆಂಟ್, ಅಂಗನವಾಡಿ, ಬಿಸಿಯೂಟ, ಪಂಚಾಯತ್ ನೌಕರರು, ಗ್ರಾಮೀಣ ಕೃಪಾಂಕ ಮುಂತಾದ ಅಸಂಘಟಿತ ಕಾರ್ಮಿಕರ ಪ್ರಬಲ ಹೋರಾಟ-ಬೇಡಿಕೆಗಳನ್ನು ಮಂಡಿಸಿದಾಗ ಇತ್ಯರ್ಥಕ್ಕೆ ಗಮನವನ್ನೇ ಕೊಡಲಿಲ್ಲ.

ಸಂಘಟಿತ ವಲಯದ ಕಾರ್ಖಾನೆಗಳ ಕಾರ್ಮಿಕರು ಮುಷ್ಕರ ನಿರತರಾದಾಗ ಮಾಲೀಕರ ಪರ ವಹಿಸಿದ ಸರ್ಕಾರ ಪೊಲೀಸರ ಮಧ್ಯಪ್ರವೇಶ ನಡೆದವು. ಬೆಂಗಳೂರು ಮೆಟಲ್ ಕ್ಲೋಸರ್ಸ್, ನಂಜನಗೂಡಿನ ಜವಳಿ ಕಾರ್ಖಾನೆ ಕಾರ್ಮಿಕರ ಹೋರಾಟದಲ್ಲಿ ಪೋಲೀಸರು, ಮಾಲಿಕರೊಂದಿಗೆ ನಗ್ನವಾಗಿ ಕೈಜೋಡಿಸಿ ದಬ್ಬಾಳಿಕೆ ನಡೆಸಿದರು.

ಕೋಮುವಾದಿಗಳ ಹೆಚ್ಚಿದ ಆಕ್ರಮಣ

ವಿಧಾನಸಭೆಯಲ್ಲಿ ಹಾಗೂ ಪಾರ್ಲಿಮೆಂಟ್ ಸ್ಥಾನದಲ್ಲಿ ಗಳಿಸಿದ ಬಲದಿಂದ ಹೆಚ್ಚಿನ ದಾಳಿಗೆ ಮುಂದಾಯಿತು. ಒಂದೆಡೆ ಅಭಿವೃದ್ಧಿಯಂತಹ ಜನರ ಪ್ರಶ್ನೆಗಳನ್ನು ಎತ್ತಿ ಅತಾರ್ಕಿಕವಾಗಿ ಮಂಡಿಸಿ ಸರ್ಕಾರದ ವಿರುದ್ಧ ಅತೃಪ್ತಿಯನ್ನು ಬಳಸಲು ಸಕ್ರಿಯವಾಗಿ ತೊಡಗಿದರೆ, ಇನ್ನೊಂದೆಡೆ ರಾಜ್ಯದ ಹಲವಾರು ಕಡೆ ಆಯ್ದ ಪ್ರದೇಶಗಳಲ್ಲಿ ಇಲ್ಲದ ವಿವಾದಗಳನ್ನೆತ್ತಿ ಕೋಮುಗಲಭೆಗಳನ್ನೆಬ್ಬಿಸಿತು. ವಿಶೇಷವಾಗಿ ಕರಾವಳಿಯ ಉತ್ತರ ಕನ್ನಡ, ಉಡುಪಿ, ದ.ಕನ್ನಡ, ಕೊಡಗು ಜಿಲ್ಲೆಗಳಲ್ಲಿ ವಿಶೇಷವಾಗಿ ನಿತ್ಯವೂ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರವು ಧಾಳಿ ನಡೆಸಿ ಗಲಭೆ ಎಬ್ಬಿಸಿತು. ಬಾಬಾ ಬುಡನ್‌ಗಿರಿಯನ್ನು ಇನ್ನೊಂದು ಅಯೋಧ್ಯೆ ಮಾಡುವ ಬೆದರಿಕೆ, ದತ್ತ ಜಯಂತಿ ನೆಪದಲ್ಲಿ ಕೋಮುದ್ವೇಷ ಹೊತ್ತಿಸುವ, ವಿಸ್ತೃತ ಪ್ರಚಾರ ಹಾಗೂ ಕೃತ್ಯಗಳು ರಾಜ್ಯದಲ್ಲಿ ದೇಶದಲ್ಲಿ ಬಿಜೆಪಿ ಹಿಂದುತ್ವದ ಫ್ಯಾಸಿಸ್ಟ್ ಮಾದರಿ ಕೈಬಿಟ್ಟಿಲ್ಲ ಎಂಬುದನ್ನು ತೋರಿಸುತ್ತದೆ. ಹಾಗೆಯೇ ದ.ಕರ್ನಾಟಕದ ಮೈಸೂರು, ಮಂಡ್ಯ, ಹಾಸನದಂತಹ ಕಡೆಗಳಲ್ಲಿಯೂ ತನ್ನ ನೆಲೆ ನಿರ್ಮಿಸಲು ಬಿಜೆಪಿ - ಸಂಘ ಪರಿವಾರ ಸತತವಾಗಿ ತೊಡಗಿದೆ.

ಜನ ಕೋಮುವಾದಿಗಳ ವಿರುದ್ಧ ಆದರೆ...

ಇಷ್ಟೆಲ್ಲಾ ಅರ್ಭಟವಿದ್ದರೂ ಕೋಮುವಾದಿ ಗಳನ್ನು ಜನತೆ ಅಷ್ಟಾಗಿ ಪುರಸ್ಕರಿಸುತ್ತಿಲ್ಲ. ಬೀದರ್‌ನ ಲೋಕಸಭಾ ಚುನಾವಣೆಗಳು, ಇತ್ತೀಚಿನ ಉಪಚುನಾವಣೆಗಳಲ್ಲಿ ಜನತೆ ಈ ಅವಕಾಶ ಬಳಸಿ ಬಿಜೆಪಿಯನ್ನು ಸೋಲಿಸಿದ್ದಾರೆ.

ಹಿಂದಿನ ಕೃಷ್ಣರ ಸರ್ಕಾರ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿ ರಾಜಿಯಿಂದ ವರ್ತಿಸಿತ್ತು. ಈಗಿನ ಧರಂಸಿಂಗ್ ರ ಸರ್ಕಾರ ಭಿನ್ನವಾಗಿರುವ ಇಚ್ಛೆ ತೋರಿಸಿದೆ. ರಾಜ್ಯದಲ್ಲಿ ಕೋಮುಗಲಭೆಗಳಾದಾಗ ಆಡಳಿತವು ದೃಢವಾಗಿ ಕಾರ್ಯವೆಸಗಲು ನಿರ್ದೇಶಿಸಿ, ನೋಡಿಕೊಂಡಿದೆ. ಬಾಬಾಬುಡನ್‌ಗಿರಿ ವಿವಾದದಲ್ಲಿ ನ್ಯಾಯಾಲಯದ ತೀರ್ಪಿನಂತೆ ಯಥಾಸ್ಥಿತಿ

ಪುಟ 12 ಕ್ಕೆ

ಎಸ್‌ಎಫ್‌ಐ ಅಧ್ಯಯನ ಶಿಬಿರ

ಸಮಾಜದ ವಾಸ್ತವತೆ ಅರಿವ ಯತ್ನ

ಶೈಕ್ಷಣಿಕ ವರ್ಷ ಆರಂಭವಾಯಿತೆಂದರೆ ಸಮಸ್ಯೆಗಳ ಸುರಿಮಳೆ. ಶಾಲಾ-ಕಾಲೇಜ್‌ಗಳ ಪ್ರವೇಶಾವಕಾಶ, ಶುಲ್ಕ-ಡೊನೇಶನ್ ಸುಲಿಗೆ, ಪಠ್ಯ ಪುಸ್ತಕಗಳಿಗಾಗಿ ಪರದಾಟ, ಆದಾಯ-ಜಾತಿ ಪ್ರಮಾಣ ಪತ್ರ ಪಡೆಯಲೂ ಅಧಿಕಾರಶಾಹಿಗಳೊಂದಿಗೆ ಜಟಾಪಟಿ.

ಶಿಕ್ಷಣ ಸಂಸ್ಥೆಗಳಲ್ಲಿ ಬೆಂಚ್-ಬೋರ್ಡ್, ಪ್ರಯೋಗಾಲಯ, ಶಿಕ್ಷಣದ ಕೊರತೆ,-ಸೌಕರ್ಯಗಳ ಅಭಾವ, ಹಾಸ್ಟೆಲ್ ಆರಂಭಕ್ಕೆ ವಿಳಂಬ...... ಶಿಕ್ಷಣ ಸಂಸ್ಥೆಗಳ ಮುಚ್ಚುವಿಕೆ ...., ವಿದ್ಯಾರ್ಥಿಗಳು ಬೀದಿ ಪಾಲು... ಹೀಗೆ ಸಮಸ್ಯೆಗಳು ಒಂದೇ ಎರಡೇ... ನಿತ್ಯವೂ ಆಡಳಿತ ಮಂಡಳಿಗಳೊಂದಿಗೆ, ಸರ್ಕಾರದೊಂದಿಗೆ ನಿತ್ಯ ಕದನ, ಶಿಕ್ಷಣದ ಹಕ್ಕು-ಅವಕಾಶಗಳಿಗಾಗಿ ಸತತ ಹೋರಾಟದಲ್ಲಿ ಮುಂಚೂಣಿಯಲ್ಲಿ ಕಾಣುವುದೇ ಭಾರತ ವಿದ್ಯಾರ್ಥಿ ಫೆಡರೇಷನ್(SFI) ಯಾವುದೇ ಪ್ರಶ್ನೆ ಇರಲಿ, ಡೋನೇಶನ್ನೇ ಇರಲಿ ವಿದ್ಯಾರ್ಥಿ ಸಮುದಾಯದ ಮೇಲೆ ದಾಳಿಗಳೇ ಇರಲಿ, ಎಲ್ಲವುದಕ್ಕೂ ಹೋರಾಡುವುದು ಅತಿಮುಖ್ಯ. ಇದಕ್ಕೆ ಸೈದ್ಧಾಂತಿಕ ಸಂಘಟನಾ ಸ್ಪಷ್ಟತೆ, ಅದರ ಸಿದ್ಧತೆ ಅತೀ ಅಗತ್ಯ.

ಇದಕ್ಕಾಗಿ ಸತತ ಸನ್ನದ್ಧಗೊಳ್ಳಲು ಪ್ರತಿವರುಷವೂ ತಪ್ಪದೇ ರಾಜ್ಯ ಮಟ್ಟದ ಕಾರ್ಯಕರ್ತರ ಶಿಬಿರ ನಡೆಸುತ್ತಾ ಬಂದಿರುವುದು ಎಸ್.ಎಫ್.ಐ.ನ ಹೆಗ್ಗಳಿಕೆ.

ಈ ವರುಷವೂ ಇದೇ ಮೇ27 ರಿಂದ ಜೂನ್ 2 ರವರೆಗೆ ಹಾಸನದ ಕಂದಲಿ ಗ್ರಾಮದ ನಿಸರ್ಗದಲ್ಲಿ ಎಸ್.ಎಫ್.ಐ ನ ಶಿಬಿರ. ಇಲ್ಲಿ ಸದಾ ಹರಿವ ಯಗಚಿ ಹೊಳೆಯ ಚಲನಶೀಲ ತಿಳಿ ನೀರಿನಂತೆ ವಿಚಾರಗಳು, ಚಿಂತನ-ಮಂಥನ ರಾಜ್ಯದ ಬಹುತೇಕ ಎಲ್ಲಾ ಪ್ರಮುಖ ಜಿಲ್ಲೆಗಳಿಂದ 150ಕ್ಕೂ ಅಧಿಕ ಕಾರ್ಯಕರ್ತರ ಉತ್ಸಾಹದ ಭಾಗವಹಿಸುವಿಕೆ, ತೆರೆದ ಕಣ್ಣಿನ ಗ್ರಹಿಕೆ. ಶಿಬಿರದಲ್ಲಿನ ಉಪನ್ಯಾಸಗಳೂ ವಿಶಿಷ್ಟವೇ ಆಗಿದ್ದವು. ತತ್ವಶಾಸ್ತ್ರ ಕುರಿತು ನಿತ್ಯಾನಂದಸ್ವಾಮಿ, ಸಮಾಜದ ವಿಕಾಸದ ಬಗ್ಗೆ ಕೆ.ಪ್ರಕಾಶ್, ಶೈಕ್ಷಣಿಕ ಪಠ್ಯಗಳು ಜನಪರ ದೃಷ್ಟಿಕೋನದ ಬಗ್ಗೆ ಜಿ.ಎನ್.ನಾಗರಾಜ, ಪ್ರಸಕ್ತ ರಾಜಕೀಯ ಪರಿಸ್ಥಿತಿ ಕುರಿತು ಜಿ.ವಿ.ಶ್ರೀರಾಮರೆಡ್ಡಿ, ಭಾರತದ ವಿದ್ಯಾರ್ಥಿ ಚಳುವಳಿಯ ಇತಿಹಾಸದ ಹಾಗೂ ಎಸ್. ಎಫ್. ಐ. ಧ್ಯೇಯೋದ್ದೇಶದ ಬಗ್ಗೆ ಅರುಣಕುಮಾರ್, ಜಾತಿ- ಅಸ್ಪೃಶ್ಯತೆ-ನಿರ್ಮೂಲನೆ ಕುರಿತು ಎಸ್.ವೈ.ಗುರುಶಾಂತ್, 'ಭಾರತದ ಬದಲಾವಣೆಯ ಹಾದಿ' ಕುರಿತು ಪ್ರಸನ್ನಕುಮಾರ್, ವಿವಿಧ ವಾದಗಳ-ಬಗ್ಗೆ ಜಿ.ಸಿ.ಬಯ್ಯರೆಡ್ಡಿ, ಸಂಘಟನೆ ಕುರಿತು ರಾಜಶೇಖರ ಮೂರ್ತಿ ಉಪನ್ಯಾಸ ನೀಡಿದರು. ಅಲ್ಲದೇ ನಿತ್ಯವೂ ಪ್ರಾಯೋಗಿಕವಾದ ಪಾಠ ಮತ್ತು ಕ್ರಿಯೆಗಳು, ಸ್ಲೈಡ್ ಶೋಗಳು(ಅಹಮದ್, ರವಿಕುಮಾರ ರಿಂದ)ಸಾಂಸ್ಕೃತಿಕ ತರಬೇತಿ ಮುಂತಾಗಿ ನಡೆದವು.

ಉದ್ಘಾಟನೆಯಲ್ಲದೇ ನಡುವೆ ಒಂದು ವಿಚಾರ ಸಂಕಿರಣವೂ ಜರುಗಿತು. ಈ ಶಿಬಿರದಲ್ಲಿ ಎಲ್ಲರೂ ಅತ್ಯಂತ ಲವಲವಿಕೆಯಿಂದ ಭಾಗವಹಿಸಿ ಅನೇಕ ವಿಷಯಗಳನ್ನು ಗುಂಪು ಚರ್ಚೆ, ಪ್ರಶ್ನೆ ಉತ್ತರಗಳ ಮೂಲಕ ವಿದ್ಯಾರ್ಥಿಗಳು ಅರಿತರು. ವಿಶ್ಲೇಷಣೆ ಮತ್ತು ವಾಸ್ತವ ಅನುಭವಗಳ ನಡುವೆ ಅರಿವು ಸ್ಪಷ್ಟಗೊಳ್ಳುತ್ತಾ, ಗಟ್ಟಿಗೊಳ್ಳುತ್ತಾ, ಅರಳುವುದನ್ನೂ



ಅಲ್ಲಿ ಕಾಣಬಹುದಾಗಿತ್ತು. ಇವೆಲ್ಲವುಗಳ ಬಳಿಕ ಈ ಕೂಡಲೇ ಶೈಕ್ಷಣಿಕ ವರುಷದಲ್ಲಿ ನಡೆಸಬೇಕಾದ ಚಳುವಳಿ, ಚಟುವಟಿಕೆಗಳ ವಾರ್ಷಿಕ ಯೋಜನೆ ಕಣ್ಣೋಟ ಪಡೆದು ಹೊಸ ಉತ್ಸಾಹ, ಸಂಕಲ್ಪದೊಂದಿಗೆ ಪುನಃ ಶೈಕ್ಷಣಿಕ ಸಮುದಾಯದತ್ತ ಹಿಂತಿರುಗಿದರು. SFI ಹಾಸನ ಜಿಲ್ಲಾ ಸಮಿತಿ ಹಾಗೂ ಹಿತೈಷಿಗಳು ತನು-ಮನ ಧನ ಅರ್ಪಿಸಿ ಹಗಲು-ರಾತ್ರಿ ಶ್ರಮಿಸಿ ಶಿಬಿರ ಯಶಸ್ವಿಗೊಳಿಸಿದ್ದು ಸಹ ಮಾದರಿಯಾಗಿತ್ತು.

ತೀವ್ರತರನಾದ ಅಧ್ಯಯನಶೀಲತೆ ಹಾಗೂ ಚೈತನ್ಯಶೀಲ ಹೋರಾಟಗಳು ಅತ್ಯಗತ್ಯ - ನಿತ್ಯಾನಂದಸ್ವಾಮಿ

ವರ್ಗ ಸಮಾಜದ ಶೋಷಣೆ ಅರಿಯಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)ನ ಅಧ್ಯಯನ ಶಿಬಿರಗಳು ವಿದ್ಯಾರ್ಥಿಗಳಿಗೆ ಅಗತ್ಯವಾಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅಭಿಪ್ರಾಯಪಟ್ಟರು.

ಸಮಕಾಲೀನ ಸಮಾಜವು ಜಗತ್ತಿನಾದ್ಯಂತ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿಯ ಆಕ್ರಮಣ ಹಾಗೂ ಆಳಗೊಳ್ಳುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟಿಗೆ ಸಾಕ್ಷಿಯಾಗಿದೆ. ಆ ಕಾರಣಕ್ಕಾಗಿಯೇ ನಮ್ಮ ದೇಶದಲ್ಲಿ ಜಾಗತೀಕರಣ ಪ್ರೇರಿತ ನೀತಿಗಳು ಶಿಕ್ಷಣವೂ ಸೇರಿದಂತೆ ಹಲವು ಕ್ಷೇತ್ರಗಳನ್ನು ತನ್ನ ಬಿಗಿ ಹಿಡಿತದಲ್ಲಿ ಇರಿಸಿಕೊಂಡಿದ್ದು ಎಲ್ಲಾ ರೀತಿಯ ಅಸಮಾನತೆ ವೇಗವಾಗಿ ಬೆಳೆಯುತ್ತಿದೆ. ಇಂತಹ ಬೆಳವಣಿಗೆ ಗಳ ಹಿನ್ನೆಲೆ ಮತ್ತು ಭವಿಷ್ಯದ ಬಗೆಗೆ ಯೋಚಿಸ ಬೇಕಾದದ್ದು ವಿದ್ಯಾರ್ಥಿಗಳ ಕರ್ತವ್ಯವಾಗಿದೆ ಎಂದರು.

ಮುಂದುವರೆದು ಅವರು ಸಮಾಜ, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಓದುವುದನ್ನು ಬಿಟ್ಟು ಬೇರೇನೂ ಮಾಡಬಾರದು ಎಂದು ನಿರೀಕ್ಷಿಸುತ್ತಾರೆ. ಆದರೆ ವಿದ್ಯಾರ್ಥಿಗಳಿಗೆ ಓದಲು ಪೂರಕವಾದ ವಾತಾವರಣ ಹಾಗೂ ಮೂಲಭೂತ ಸೌಕರ್ಯದ ಕೊರತೆ, ಅತಿಹೆಚ್ಚು ಶುಲ್ಕದ ಹೊರೆ, ಅವೈಜ್ಞಾನಿಕ ಶಿಕ್ಷಣ ಪದ್ಧತಿ ವಿದ್ಯಾರ್ಥಿಗಳನ್ನು ಹೋರಾಟದ ಕಣಕ್ಕೆ ದುಮುಕುವಂತೆ ಮಾಡಿದೆ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ಭವಿಷ್ಯ ಹಾಗೂ ಸಮಾಜದ ದುಡಿಯುವ ವರ್ಗದ ಹಿತಾಸಕ್ತಿಗಾಗಿ ತೀವ್ರವಾದ ಅಧ್ಯಯನಶೀಲರಾಗುವುದಷ್ಟೇ ಅಲ್ಲದೇ ಚೈತನ್ಯಶೀಲ ಹೋರಾಟಗಾರರೂ ಆಗಬೇಕಾಗುತ್ತದೆ ಎಂದು ಕರೆ ನೀಡಿದರು.

"ಶಿಕ್ಷಣದ ವ್ಯಾಪಾರೀಕರಣ" ಸಂವಿಧಾನದ ಆಶಯಕ್ಕೆ ಪೆಟ್ಟು - ವಿಚಾರಸಂಕಿರಣದಲ್ಲಿ ಪ್ರೊ. ಕೆ.ರಾಮದಾಸ್

ದೇಶದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಸುಧಾರಣೆ ಮೂಲ ಶಿಕ್ಷಣದ ಅಗತ್ಯ. ಆರೋಗ್ಯ, ಉದ್ಯೋಗ, ಸಾಮಾಜಿಕ ಕ್ಷೇಮದ ಬಗ್ಗೆ ಸಮಾನ ಆದ್ಯತೆ ನೀಡಿದಂತೆ ಶಿಕ್ಷಣಕ್ಕೂ ಅವಕಾಶ ನೀಡಬೇಕಾಗಿದೆ. ಸಾಮಾಜಿಕ ನ್ಯಾಯ ಸಿದ್ಧಾಂತಕ್ಕೆ ಸಂವಿಧಾನದ ಆಶಯವನ್ನು ಎತ್ತಿಹಿಡಿಯಬೇಕಾದ ಅನಿವಾರ್ಯತೆ ಇದೆ. ಆದರೆ ಇಂದು ಶಿಕ್ಷಣದ ವ್ಯಾಪಾರೀಕರಣದಿಂದ ಸಂವಿಧಾನದ ಆಶಯಕ್ಕೆ ಪೆಟ್ಟು ಬಿದ್ದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಹುನ್ನಾರ ನಡೆಸಿವೆ ಎಂದು ವಿಚಾರವಾದಿಗಳಾದ ಪ್ರೊ.ಕೆ.ರಾಮದಾಸ್ ಟೀಕಿಸಿದರು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯಸಮಿತಿಯು ಹಾಸನದಲ್ಲಿ ರಾಜ್ಯಮಟ್ಟದ ಅಧ್ಯಯನ ಶಿಬಿರದ ಅಂಗವಾಗಿ ಏರ್ಪಡಿಸಿದ "ಶಿಕ್ಷಣದ ವ್ಯಾಪಾರೀಕರಣ" ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ದೇಶದಲ್ಲಿ ಜಾತಿ ಸಂಘಟನೆ ಮಠಮಾನ್ಯಗಳು, ದೇವಾಲಯಗಳ ಜಾಲ ವ್ಯಾಪಕವಾಗಿ ವಿಸ್ತಾರಗೊಂಡಿವೆ. ಮಠಾದೀಶರು, ರಾಜಕಾರಣಿಗಳು, ಬಂಡವಾಳಶಾಹಿಗಳು ಶಿಕ್ಷಣದ ಲಗಾಮು ಹಿಡಿದು ನಿಯಂತ್ರಿಸುತ್ತಿದ್ದಾರೆ. ಶಿಕ್ಷಣದ ವ್ಯಾಪಾರೀಕರಣದ ಮೂಲಕ ಸಮಾಜದ ಅಂತಃಸತ್ವವನ್ನು ಹಾಳುಮಾಡಿ ಮನುಷ್ಯನನ್ನು ಮಾರಾಟದ ಸರಕ್ಕಾಗಿ ರೂಪಿಸುವ ವ್ಯವಸ್ಥಿತ ಸಂಚು ನಡೆದಿದೆ ಎಂದರು.

ಸಾಮ್ರಾಜ್ಯಶಾಹಿ ಬಹುರಾಷ್ಟ್ರೀಯ ಸಂಸ್ಥೆಗಳು ದೇಶದಲ್ಲಿ ನೆಲೆಯೂರಿ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಅಗತ್ಯವಾದ ಪರಿಸರ ಒದಗಿಸಲು ಸರ್ಕಾರವೇ ಅವಕಾಶ ಮಾಡಿಕೊಡುತ್ತಿದೆ. ಶಿಕ್ಷಣ ವ್ಯವಸ್ಥೆ ಶ್ರೀಮಂತರ ಪರವಾಗಿದ್ದರೆ ಮಧ್ಯಮವರ್ಗ ತನ್ನನ್ನೇ ಮಾರಾಟ ಮಾಡಿಕೊಂಡಿದೆ. ಸಮಾಜದ ಮೂಲವಾಗಿರುವ ದಲಿತರು, ದುರ್ಬಲ ವರ್ಗದವರೂ ಸಹ ಇಂಗ್ಲಿಷ್ ವ್ಯಾಮೋಹಕ್ಕೆ ಸಿಕ್ಕು ಪರದಾಡುತ್ತಿದ್ದಾರೆ ಎಂದರು.

ಶಿಕ್ಷಣ ವ್ಯವಸ್ಥೆ ಕುರಿತು ಸರ್ಕಾರ ನೀತಿ ರೂಪಣೆ ಮಾಡಬೇಕು. ಆದರೆ ಖಾಸಗಿ ಸಂಸ್ಥೆಗಳನ್ನು ಪಾಲನೆ



ಮಾಡುವ ನೀತಿಯನ್ನು ಅಳವಡಿಸಲು ಸರ್ಕಾರವೇ ಮುಂದಾಗಿರುವುದು ವಿಪರ್ಯಾಸ. ಸರ್ಕಾರ ಜಾರಿಗೊಳಿಸಿದ ಆದೇಶವನ್ನು ಖಾಸಗಿ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವ ಸಂಸ್ಥೆಗಳಿಗೆ ಬೀಗ ಹಾಕಬೇಕು. ಕಾನೂನು ಪಾಲನೆ ಮಾಡದ ಸರ್ಕಾರ ಅಧಿಕಾರದಲ್ಲಿ ಇದ್ದರೂ ಯಾವುದೇ ಪ್ರಯೋಜನವಿಲ್ಲ ಎಂದರು.

ಬಹುಜನರ ಹಿತಕಾಪಾಡಿ ಶಿಕ್ಷಣ ವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ರಾಷ್ಟ್ರೀಕರಣಗೊಳಿಸಿದ ಮಾದರಿಯಲ್ಲಿಯೇ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಕರಣಗೊಳಿಸಲು ಕೇಂದ್ರಸರ್ಕಾರ ಚಿಂತನೆ ನಡೆಸುವ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ವೃತ್ತಿಶಿಕ್ಷಣದ ಬಿಕ್ಕಟ್ಟು ಮತ್ತು ಪರಿಹಾರ ಕುರಿತು ಡಾ.ಸವ್ಯಸಾಚಿ ಚಟರ್ಜಿ, ಉನ್ನತ ಶಿಕ್ಷಣ ಕುರಿತು ಎಸ್‌ಎಫ್‌ಐ ರಾಷ್ಟ್ರೀಯ ಉಪಾಧ್ಯಕ್ಷರಾದ ಆರ್.ಅರುಣ್‌ಕುಮಾರ್ ಮಾತನಾಡಿದರು. ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ, ಡಿವೈಎಫ್‌ಐ ಜಿಲ್ಲಾಧ್ಯಕ್ಷ ಧರ್ಮೇಶ್ ವೇದಿಕೆಯಲ್ಲಿದ್ದರು. ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಎಚ್.ಆರ್.ನವೀನ್‌ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕೆ.ಬಿ.ಮಂಜುನಾಥ್ ಸ್ವಾಗತಿಸಿದರು. ಕಾಂತರಾಜು ವಂದಿಸಿದರು. ಬಿ.ಎಸ್.ಲಿಂಗರಾಜು ಕಾರ್ಯಕ್ರಮವನ್ನು ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಅಸ್ಸಾಂನ ಗೌಹಾತಿಯಲ್ಲಿ ನಡೆದ ಎಸ್‌ಎಫ್‌ಐನ ವಿಶೇಷ ಅಖಿಲಭಾರತ ಸಮ್ಮೇಳನದಲ್ಲಿ ಸಮಕಾಲೀನಗೊಳಿಸಲಾದ ಎಸ್.ಎಫ್.ಐನ ಸಂವಿಧಾನ ಮತ್ತು ಕಾರ್ಯಕ್ರಮದ ಕನ್ನಡ ಆವೃತ್ತಿಯನ್ನು ಎಸ್‌ಎಫ್‌ಐನ ಸಂಸ್ಥಾಪಕ ಮುಖಂಡರಾದ ಜಿ.ವಿ.ಶ್ರೀರಾಮ ರೆಡ್ಡಿಯವರು ಬಿಡುಗಡೆ ಮಾಡಿದರು.

ವ್ಯಾಪಾರೀಕರಣ ಬಹುಸಂಖ್ಯಾತರಿಗೆ ಶಿಕ್ಷಣದ ನಿರಾಕರಣೆ - ಶಾಸಕ ಜಿ.ವಿ.ಶ್ರೀರಾಮರೆಡ್ಡಿ

ಸಮಾಜದ ಮೆದುಳಿನಂತಿರುವ ಶಿಕ್ಷಣ ವ್ಯವಸ್ಥೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ರೋಗಗ್ರಸ್ಥಗೊಳಿಸುತ್ತಿವೆ. ಇದರಿಂದಾಗಿ ಸಮಾಜದ ಸುಧಾರಣೆ ಸುಲಭಸಾಧ್ಯವಿಲ್ಲ. ಸಮಾಜದ ಮೆದುಳನ್ನು ಕಿತ್ತು ಅಸಹಾಯಕ ಸ್ಥಿತಿಯನ್ನು ನಿರ್ಮಿಸುವ ವ್ಯವಸ್ಥೆ ನಡೆದಿದೆ. ಸಾರ್ವತ್ರಿಕ ಶಿಕ್ಷಣದ ಹೆಸರಿನಲ್ಲಿ ಮೂಲಸೌಲಭ್ಯ ಒದಗಿಸದೇ ನಿರ್ಲಕ್ಷ್ಯಧೋರಣೆ ಅನುಸರಿಸುತ್ತಿವೆ. ಇದು ಗಂಭೀರ ಶೈಕ್ಷಣಿಕ ಸಮಸ್ಯೆಗೆ ಹಾದಿ ಮಾಡಿಕೊಟ್ಟಿದೆ ಎಂದು ಆರೋಪಿಸಿದರು. ಸಮಾಜದ ಮೂಲಸ್ವರೂಪ ಅರಿತು ಶಿಕ್ಷಣ ನೀಡುವ ವ್ಯವಸ್ಥೆ ಬೇಕು ಎಂಬ ವಾದ ಮೊದಲಿನಿಂದಲೂ ಚರ್ಚೆಯಲ್ಲಿದೆ. ಆದರೆ ಆಳುವ ವರ್ಗ ಖಾಸಗಿ ವ್ಯಕ್ತಿಗಳ ಬಿಗಿಹಿಡಿತದಲ್ಲಿ ಸಿಕ್ಕು ನೀತಿ ನಿರೂಪಣೆಯಲ್ಲಿ ಎಡವುತ್ತಿದೆ. ಶಿಕ್ಷಣ ಮತ್ತು ನಿರುದ್ಯೋಗದ ನಡುವಣ ಅಂತರ ಹೆಚ್ಚಾಗಿ ದುಡಿಯುವ ಶಕ್ತಿ ವ್ಯರ್ಥವಾಗಿ ಮೂಲೆ ಸೇರುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯದಲ್ಲಿ 15 ಸಾವಿರ ಪ್ರೌಢಶಾಲೆ ಶಿಕ್ಷಕರ ಹುದ್ದೆ ಖಾಲಿ ಇದೆ. ಆದರೆ ಸುಮಾರು 50 ಸಾವಿರ ನಿರುದ್ಯೋಗಿ ಬಿಎಡ್ ಪದವೀಧರರು ಉದ್ಯೋಗದ ನಿರೀಕ್ಷೆಯಲ್ಲಿದ್ದಾರೆ. ವಸ್ತುಸ್ಥಿತಿ ಹೀಗಿದ್ದರೂ ಸರ್ಕಾರ ಪ್ರಸಕ್ತ ಸಾಲಿನಲ್ಲಿ 300 ಹೊಸ ಬಿಎಡ್ ಕಾಲೇಜು ಸ್ಥಾಪನೆಗೆ ಅನುಮತಿ ನೀಡಿರುವುದು ವಿಪರ್ಯಾಸ ಎಂದು ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಅಭಿಪ್ರಾಯಪಟ್ಟರು.

ಭಾರತ ವಿದ್ಯಾರ್ಥಿ ಫೆಡರೇಷನ್ ಮೇ 29ರಂದು ಹಾಸನದಲ್ಲಿ ಏರ್ಪಡಿಸಿದ್ದ "ಶಿಕ್ಷಣದ ವ್ಯಾಪಾರೀಕರಣ" ಎಂಬ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಅವರು ಪ್ರಾಥಮಿಕ ಶಿಕ್ಷಣದ ಕುರಿತು ಮಾತನಾಡಿದರು. ಖಾಸಗೀಕರಣ ಮತ್ತು ವ್ಯಾಪಾರೀಕರಣ ಒಂದೇ ನಾಣ್ಯದ ಎರಡು ಮುಖಗಳಂತಿವೆ. ಬಹು ಸಂಖ್ಯಾತರಿಗೆ ಶಿಕ್ಷಣ ನಿರಾಕರಿಸುವುದೇ ವ್ಯಾಪಾರೀಕರಣದ ಮೂಲ ಉದ್ದೇಶವಾಗಿದೆ. ದೇಶದ ಒಟ್ಟು ಉತ್ಪಾದನೆಯ ಅರ್ಧಭಾಗವನ್ನು ಸಾರ್ವತ್ರಿಕ ಶಿಕ್ಷಣಕ್ಕೆ ವೆಚ್ಚ ಮಾಡಬೇಕಾಗಿತ್ತು. ಆಳುವ ವರ್ಗದವರು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಶಿಕ್ಷಣ ದಂಧೆಯಲ್ಲಿ ತೊಡಗಿದ್ದರಿಂದ ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.

ಶಿಕ್ಷಣದ ಬಗ್ಗೆ ಇಷ್ಟೆಲ್ಲಾ ಮಾಡನಾಡುವ ಸರ್ಕಾರ ತನ್ನ ಆದೀನ ಶಾಲೆಗಳಲ್ಲಿ ಕಂಪ್ಯೂಟರ್ ತರಬೇತಿಗಾಗಿ ಸುಸಜ್ಜಿತ ವ್ಯವಸ್ಥೆ ರೂಪಿಸಿಲ್ಲ. ಇಂಥ ಕನಿಷ್ಠ ವ್ಯವಸ್ಥೆಯನ್ನು ಒದಗಿಸಲು ಸಾಧ್ಯವಾಗದ ಸರ್ಕಾರಕ್ಕೆ ಸಮುದಾಯಿಕ ಶಿಕ್ಷಣದ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ ಎಂದರು.

ವರದಿ : ನವೀನ್, ಯಶವಂತ್

ಫ್ರೆಂಚ್ ಜನಮತದ 'ಕ್ರಾಂತಿ'
ಯುರೋ-ಜಾಗತೀಕರಣದ ಸಂವಿಧಾನ 'ಬೇಡ'

ಶರತ್‌ಚಂದ್ರ

ಫ್ರೆಂಚರು ಯುರೋಪಿನ ಬಂಡವಾಳಶಾಹಿ ಆಳುವ ವರ್ಗ ರೂಪಿಸಿದ ಪ್ರತಿಗಾಮಿ ಸಂವಿಧಾನ 'ಬೇಡ'ವೆಂದಿದ್ದಾರೆ ಜನಮತ ಸಂಗ್ರಹದಲ್ಲಿ. ಇದರಿಂದ ಆಳುವವರ್ಗಗಳ ಪ್ರತಿಗಾಮಿ ಆಳ್ವಿಕೆ ಶಾಶ್ವತವಾಗಿ ಗಟ್ಟಿಗೊಳಿಸುವ ಸಂವಿಧಾನ ಮಣ್ಣುಪಾಲಾಗಿದೆ. ಯುರೋಪಿನ ಸಾಮಾನ್ಯ ಜನತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಸಕಾರಾತ್ಮಕ ಬದಲಾವಣೆ ಇದು. ಫ್ರೆಂಚ್ 'ಬೇಡ' ಮತದ ಹಿಂದೆ ನಡೆದ ಎಡ-ಬಲಗಳ ನಡುವಿನ ತೀವ್ರ ರಾಜಕೀಯ ಪ್ರಚಾರ-ಸೆಣಸಾಟ ಮತ್ತು ಎಡ-ಶಕ್ತಿಗಳ ಪ್ರಚಂಡ ವಿಜಯ ಇನ್ನಷ್ಟು ಗಮನಾರ್ಹವಾದದ್ದು. ಸೋತಿರುವ ಆಳುವವರ್ಗಗಳು ಹೇಳುವಂತೆ ಇದು ಐಕ್ಯ ಯುರೋಪಿನ ತಿರಸ್ಕಾರ ಅಲ್ಲ. ಯುರೋಪಿನ ದುಡಿಯುವ ವರ್ಗಗಳ ರಾಜಕೀಯ - ಸಾಮಾಜಿಕ (ಹಲವು ದಶಕಗಳ ಹೋರಾಟದಿಂದ ಗಳಿಸಿದ) ಸ್ಥಾನಮಾನ ಮತ್ತು ಪ್ರಜಾಪ್ರಭುತ್ವ ನಾಶ ಮಾಡುವ ಆಳುವವರ್ಗಗಳ ಸಂವಿಧಾನದ ಹುನ್ನಾರಕ್ಕೆ 'ಬೇಡ' ಅಂದಿದ್ದು. ಸಮಾನತೆ, ಸಮೃದ್ಧಿ ಇರುವ ಸಮಾಜವಾದಿ ಯುರೋಪಿಗಾಗಿ ಹೋರಾಟದ ನಾಂದಿ ಹಾಡಿದ್ದಾರೆ ಫ್ರೆಂಚ್ ಜನತೆ.

ಫ್ರೆಂಚ್ ಜನತೆ 'ಬೇಡ'ವೆಂದಿದ್ದಾರೆ. ಫ್ರೆಂಚ್ ಆಳುವವರ್ಗಗಳು ಪಕ್ಷಗಳ ಅಭೂತಪೂರ್ವ ಒತ್ತಡ, ಪ್ರಚಾರ-ಯಾವುದನ್ನೂ ಲೆಕ್ಕಿಸಲಿಲ್ಲ. ಮಾಧ್ಯಮ 'ಪಂಡಿತ'ರು ವಿದೇಶಿ ನಾಯಕರು ಫ್ರೆಂಚರು 'ಬೇಡ' ಎಂದರೆ ಯುರೋಪಿನ ಮೇಲೆ ಆಕಾಶ ಕಳಚಿ ಬೀಳುತ್ತದೆ, 'ಬೇಡ' ಎಂದರೆ ನಾಜಿವಾದಕ್ಕೆ ಕುಮ್ಮಕ್ಕು ಕೊಟ್ಟಂತೆ, ಮಧ್ಯಮ ಯುಗೀನ ಯುರೋಪಿಗೆ ಮರಳಿದಂತೆ ಎಂದೆಲ್ಲಾ 'ಬ್ಲಾಕ್‌ಮೇಲ್' ಮಾಡಿದರು. ಆದರೂ ಮೇ 31 ರಂದು ಫ್ರೆಂಚರು ಇದ್ಯಾವುದನ್ನು ಲೆಕ್ಕಿಸದೆ ತಮ್ಮ ಮತ ಚಲಾಯಿಸಿದ್ದಾರೆ. ಶೇಕಡಾ 70 ಜನ ಮತ ಚಲಾಯಿಸಿ, ಆಯ್ಕೆಗೆ ವಿಶ್ವಾಸಾರ್ಹತೆ ಒದಗಿಸಿದ್ದಾರೆ. 'ಬೇಡ' ಸಹ ಗಟ್ಟಿಯಾಗಿ ನಿರ್ಣಾಯಕವಾಗಿ ಹೇಳಿದ್ದಾರೆ. 'ಬೇಡ'ಕ್ಕೆ ಶೇಕಡಾ 55 ಮತ ಬಿದ್ದರೆ 'ಬೇಕು' ಶೇಕಡಾ 45 ಮತ ಗಳಿಸಿದೆ.

ಸಂವಿಧಾನ ಬೇಕೆ, ಬೇಡವೇ?


ಇದೇನು 'ಬೇಡ','ಬೇಕು' ಎಂದಿರಾ? ಯುರೋಪಿಯನ್ ಒಕ್ಕೂಟ ಈಗಾಗಲೇ ರಚಿತವಾಗಿದ್ದು (ಹತ್ತು ದೇಶಗಳ ಸಾಮಾನ್ಯ ಮಾರುಕಟ್ಟೆ ಆರು ದೇಶಗಳ ರಾಜಕೀಯ ಒಕ್ಕೂಟದಿಂದ ಆರಂಭವಾಗಿ 15 ದೇಶಗಳ ಒಕ್ಕೂಟವಾಗಿತ್ತು) ಅದಕ್ಕೆ ಈಗ ಸ್ಪಷ್ಟ ರಾಜಕೀಯ ಸಂಘಟನಾ ರೂಪ ಕೊಡಲಾಗುತ್ತಿದೆ. ಅಲ್ಲದೆ ಇನ್ನೂ ಹತ್ತಕ್ಕೂ ಹೆಚ್ಚು ಪೂರ್ವಯುರೋಪು ಮತ್ತು ಮಾಜಿ ಸೋವಿಯತ್ ಕೂಟದದೇಶಗಳನ್ನು ಸೇರಿಸಿ ವಿಸ್ತರಿಸುವ ಯೋಜನೆ ಇದೆ. ಇದಕ್ಕಾಗಿ ಒಂದು ಹೊಸ ಸಂವಿಧಾನ ರಚಿಸಲಾಗಿದೆ. ಈ ಸಂವಿಧಾನವನ್ನು ಎಲ್ಲಾ 25 ದೇಶಗಳು ಅಂಗೀಕರಿಸಬೇಕು. ಇದನ್ನು ಪಾರ್ಲಿಮೆಂಟರಿ ಬಹುಮತದಿಂದ ಅಥವಾ ಜನಮತ ಸಂಗ್ರಹದಿಂದ ಮಾಡಹುದು. ಆ ದೇಶಗಳ ಸರ್ಕಾರಕ್ಕೆ ಬಿಟ್ಟಿದ್ದು. ಹತ್ತು ದೇಶಗಳು ಜನಮತ ಸಂಗ್ರಹದಿಂದ ಮಾಡುವುದಾಗಿ ನಿರ್ಧರಿಸಿದ್ದವು. ಸ್ಪೈನ್, ಫ್ರಾನ್ಸ್, ಬ್ರಿಟನ್, ನೆದರ್‌ಲ್ಯಾಂಡ್, ಡೆನ್ಮಾರ್ಕ್ ಇತ್ಯಾದಿ. ಇವುಗಳಲ್ಲಿ ಸ್ಪೈನ್‌ನಲ್ಲಿ ಆಗಲೇ ಜನಮತ ಸಂಗ್ರಹ ನಡೆದಿದ್ದು 'ಬೇಕು'ಗೆ ಬಹುಮತ ಸಿಕ್ಕಿದೆ. ಆದರೆ ಮತದಾನ ನಡೆದಿದ್ದು ಕೇವಲ ಶೇಕಡಾ 42. ಶೇಕಡಾ 77 'ಬೇಕು' ಮತ ಗಳಿಸಿದೆ. ಜರ್ಮನ್ ಪಾರ್ಲಿಮೆಂಟು ಆಗಲೇ ಸಂವಿಧಾನವನ್ನು ಅಂಗೀಕರಿಸಿದೆ. ಜರ್ಮನಿಯ ಜತೆ ಯುರೋಪಿಯನ್ ಒಕ್ಕೂಟದ ಸ್ಥಾಪಕ ಸದಸ್ಯಗಾರ ಫ್ರಾನ್ಸ್‌ನ 'ಬೇಕು' ಈ ಸಂವಿಧಾನಕ್ಕೆ ಅತ್ಯಂತ ಮಹತ್ವದ ಹೆಜ್ಜೆಯಾಗಿತ್ತು. ಫ್ರೆಂಚರು 'ಬೇಡ' ಎಂದರೆ ಡಚ್ಚರು, ಬ್ರಿಟಿಷರು, ಡೆನ್ಮಾರ್ಕ್‌ರು ಸಹ 'ಬೇಡ' ಎನ್ನುತ್ತಾರೆ. ಫ್ರೆಂಚರು 'ಬೇಕು' ಎಂದರೆ ಆ ಮೇಲಿನ ಎಲ್ಲಾ ಜನಮತ ಸಂಗ್ರಹದಲ್ಲಿ 'ಬೇಕು' ಮತಕ್ಕೆ ಕುಮ್ಮಕ್ಕು ಸಿಗುತ್ತದೆ ಎಂಬ ಫ್ರೆಂಚ್ ಅಧ್ಯಕ್ಷರು ಮತ್ತು ಆಳುವ ಪಕ್ಷಗಳ ಲೆಕ್ಕಾಚಾರ ತಲೆಕೆಳಗಾಗಿದೆ.



ಯುರೋಪಿಯನ್ ಒಕ್ಕೂಟಕ್ಕೆ ಸೇರಬೇಕೆ ಬೇಡವೇ ಎಂಬ ಬಗ್ಗೆ ಇದೇ ರೀತಿ (ಫ್ರಾನ್ಸ್ ಸೇರಿದಂತೆ) ಹಲವು ದೇಶಗಳಲ್ಲಿ ಜನಮತ ಸಂಗ್ರಹ ನಡೆದು ಜನ 'ಬೇಕು' ಎಂದಿದ್ದರು. ಹಾಗಾದರೆ ಈಗ ಯಾಕೆ ಈ 'ಬೇಡ'. ಇದಕ್ಕೆ ಕಾರಣ ಈಗ ಯುರೋಪಿಯನ್ ಒಕ್ಕೂಟ ನಡೆದುಕೊಳ್ಳುವ ರೀತಿ ಮತ್ತು ಸಂವಿಧಾನದ ಸ್ವರೂಪ. ಚುನಾಯಿತ ಪಾರ್ಲಿಮೆಂಟು ಇದ್ದರೂ, ಹೆಚ್ಚಿನ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಬ್ರಸೆಲ್ಸ್ (ಬೆಲ್ಜಿಯಂ)ನಲ್ಲಿ ಕುಳಿತಿರುವ ಅಧಿಕಾರಶಾಹಿ. ಈ ಅಧಿಕಾರಶಾಹಿಯನ್ನು ನೇಮಿಸುವುದು, ನಿಯಂತ್ರಿಸುವುದು ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳು. ಯುರೋಪ ಸರ್ಕಾರಕ್ಕೆ ಪ್ರತಿಯೊಂದು ದೇಶದ ಆರ್ಥಿಕ ನೀತಿಗೆ ಕಡಿವಾಣ ಹಾಕುವ ಅಧಿಕಾರ ಇದೆ. ಆದರೆ ಆ ನೀತಿಗಳು ಜನರನ್ನು ರೊಚ್ಚಿಗೆಬ್ಬಿಸಿದರೆ ಅದನ್ನು ಎದುರಿಸಬೇಕಾದದ್ದು ಅಲ್ಲಿನ ಸರ್ಕಾರ. ಯಾವುದೇ ರೀತಿಯ ಸರ್ಕಾರ (ಎಡ ಅಥವಾ ಬಲ) ಬರಲಿ, ಅದರ ಆರ್ಥಿಕನೀತಿಗಳು ಬದಲಾಗುವಂತಿಲ್ಲ. ಅದು ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆ ಅನುಗುಣವಾಗಿರಬೇಕು. ಈ ರೀತಿಯ ಧೋರಣೆ ಕಂಡುಬಂದಿದೆ. ಈಗ ಜನರ ಮುಂದೆ ಅಂಗೀಕಾರಕ್ಕೆ ಇಟ್ಟಿರುವ ಸಂವಿಧಾನ ಸಹ ಅದನ್ನೇ ಶಾಶ್ವತವಾಗಿಸಲು ಗಟ್ಟಿಗೊಳಿಸಲು ಹೊರಟಿದ್ದು.

ಉಳ್ಳವರಿಗೆ ಸಂವಿಧಾನ

ಸಂವಿಧಾನ ರೂಪಿಸಿದ ರೀತಿ ಸಹ ಜನಕ್ಕೆ ಕಸಿವಿಸಿ ತಂದಿತ್ತು. ಎಲ್ಲಾ ದೇಶಗಳ, ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಸುವ ಮಂಡಳಿಯೊಂದು ಸಂವಿಧಾನ ರೂಪಿಸಬೇಕಾಗಿತ್ತು. ಬದಲಾಗಿ ಕೆಲವೇ ದೇಶಗಳ, ಕೆಲವು ವಲಯಗಳು ತಾವಾಗಿ ರೂಪಿಸಿದ ಸಂವಿಧಾನ 'ಬೇಕು' ಅಥವಾ 'ಬೇಡ' ಎನ್ನುವ ಹಕ್ಕು ಮಾತ್ರ ಇತ್ತು. ಅದರಲ್ಲೂ 'ಬೇಕು' ಅಂತಲೇ ಹೇಳಬೇಕು ಎಂಬ ಒತ್ತಾಯ ಸಹ ಇತ್ತು. ಗುತ್ತೇದಾರಿ ಬಂಡವಾಳಶಾಹಿ ಮಾಧ್ಯಮಗಳ ಒತ್ತಡ ಸತತವಾಗಿ ಇತ್ತು. ಇದು ಬಿಟ್ಟರೆ ಬೇರೆ ದಾರಿ ಇಲ್ಲ. ಬದಲಿ ಎಂದರೆ ಯುರೋಪನ್ನು ಒಡೆಯುವುದು. ನಾಜೀವಾದ-ಉದ್ರೇಕಕಾರಿ ರಾಷ್ಟ್ರೀಯವಾದ - ಎಂಬ ಬ್ಲಾಕ್‌ಮೇಲ್ - ಸಂವಿಧಾನ ಯುರೋಪಿನ ದೇಶಗಳ (ಅದರಲ್ಲೂ ಫ್ರಾನ್ಸ್, ಹಾಲೆಂಡ್, ಬ್ರಿಟನ್‌ನಂತಹ ಮುಂದುವರೆದ ದೇಶಗಳು) ದುಡಿಯುವ ಜನತೆ ದಶಕಗಳ ಹೋರಾಟಗಳ ಮೂಲಕ ಸಾಮಾಜಿಕ-ಆರ್ಥಿಕ-ರಾಜಕೀಯ ಹಕ್ಕು - ಸವಲತ್ತುಗಳನ್ನು ಕಿತ್ತುಕೊಳ್ಳುವ ಹುನ್ನಾರ ತೋರಿದೆ. ಯುರೋಪಿನ ಕನಿಷ್ಟ ಸಾಮಾನ್ಯ ಮಟ್ಟಕ್ಕೆ ಅದನ್ನು ಇಳಿಸುವ ಪ್ರಯತ್ನ ಇದೆ. ಬಂಡವಾಳಕ್ಕೆ ಯುರೋಪಿನಲ್ಲಿ ಎಲ್ಲಾ ಬೇಕಾದರೂ (ಅತ್ಯಂತ ಕಡಿಮೆ ವೇತನ - ಸವಲತ್ತು ಇರುವ) ಹೋಗಲು ಸ್ವಾತಂತ್ರ್ಯ. ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸುವ ಮೇಲೆ ಒತ್ತು, ಸಾಮಾಜಿಕ ಕಲ್ಯಾಣ ಯೋಜನೆ ವೆಚ್ಚದ ಮೇಲೆ ಐಎಂಎಫ್-ಮುಂತಾದ ನಿರ್ಬಂಧಗಳು. ರಾಜಕೀಯ ಸಾರ್ವಭೌಮತ್ವ ಕೊಡುತ್ತಲೇ ಆರ್ಥಿಕ ಸಾರ್ವಭೌಮತ್ವ ಕಿತ್ತುಕೊಳ್ಳುವ ಹುನ್ನಾರ. ಯಾವುದೇ ದೇಶದಲ್ಲಿ ಎಡ-ಶಕ್ತಿಗಳು ಅಧಿಕಾರಕ್ಕೆ ಬಂದರೂ, ಯಾವುದೇ ಮೂಲಭೂತ ಬದಲಾವಣೆ ಮಾಡದಂತೆ ನಿರ್ಬಂಧ, ಅಲ್ಲದೆ ಯುರೋಪಿಯನ್ ಒಕ್ಕೂಟವನ್ನು ಶಾಶ್ವತವಾಗಿ ಸಾಮ್ರಾಜ್ಯಶಾಹಿ ಮಿಲಿಟರಿ ಕೂಟ 'ನಾಟೋ'ಗೆ ಕಟ್ಟಿಹಾಕುವ ಹುನ್ನಾರವೂ ಸಂವಿದಾನದಲ್ಲಿ ಇದೆ. ಫ್ರೆಂಚ್ ಮತದಾರರು 'ಬೇಡ' ಎಂದಿದ್ದು ಈ ಪ್ರತಿಗಾಮಿ ಸಂವಿಧಾನಕ್ಕೆ.



ಫ್ರಾನ್ಸ್ ಅಧ್ಯಕ್ಷ ಜಾಕ್ವೆಸ್ ಚಿರಾಕ್ ಮತ ಚಲಾಯಿಸುತ್ತಿರುವುದು

ಎಡ ಶಕ್ತಿಗಳಿಗೆ ಪ್ರಚಂಡ ಜಯ

ಫ್ರೆಂಚ್ ಜನಮತ ಸಂಗ್ರಹ ಫ್ರಾನ್ಸ್ ಮಾತ್ರವಲ್ಲ, ಇಡೀ ಯುರೋಪನ್ನು ಒಂದು ತೀವ್ರ ರಾಜಕೀಯ ಚರ್ಚೆ-ಸೆಣಸಾಟದಲ್ಲಿ ತೊಡಗಿಸಿತು. ಫ್ರಾನ್ಸ್‌ನಲ್ಲಿ ಈಗ ಆಳುತ್ತಿರುವ ಅಧ್ಯಕ್ಷರ ಬಲಪಂಥೀಯ ಪಕ್ಷಗಳು ಸಂವಿಧಾನ ಪರ 'ಬೇಕು' ಪ್ರಚಾರ ಮಾಡಿದರು. ಫ್ರಾನ್ಸ್‌ನ ಸೋಶಲಿಸ್ಟ್ ಪಕ್ಷ ಮತ್ತು ಗ್ರೀನ್ ಪಕ್ಷದ ಅಧಿಕೃತ ನೀತಿ 'ಬೇಕು'ಗೆ ಪರವಾಗಿತ್ತು. ಆದರೆ ಈ ಎರಡು ಪಕ್ಷಗಳಲ್ಲಿ ತೀವ್ರ ಆಂತರಿಕ ಚರ್ಚೆಗೆ ಕಾರಣವಾದ ಈ ಜನಮತ ಸಂಗ್ರಹ. ಆಂತರಿಕ ಚರ್ಚೆ ಎಷ್ಟು ತೀವ್ರವಾಗಿತ್ತೆಂದರೆ ಸೋಶಲಿಸ್ಟ್ ಪಕ್ಷದ ಅಧಿಕೃತ ನೀತಿ 'ಬೇಕು' ವಿರುದ್ಧ ಪ್ರಚಾರ ಮಾಡಿದವರನ್ನು ಪಕ್ಷದಿಂದ ಉಚ್ಚಾಟಿಸಲಾಗುವುದು ಎಂಬ ಪಕ್ಷದ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕಾಯಿತು. ಸಂವಿಧಾನದ 'ಬೇಡ' ಎಂಬ ಬಗ್ಗೆ ಮುಖ್ಯ ಪ್ರಚಾರ ಪ್ರಕ್ಷೋಭೆ ನಡೆಸಿದ್ದು ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಎಡ-ಶಕ್ತಿಗಳು. ಚರ್ಚೆ ತೀವ್ರಗೊಳ್ಳುತ್ತಿದ್ದಂತೆ, ಸೋಶಲಿಸ್ಟ್ ಪಕ್ಷದ ವಿಭಾಗಗಳು ಈ ಪ್ರಚಾರಕ್ಕೆ ಸೇರಿದವು. ಎಡ ಶಕ್ತಿಗಳು ಈ ಚಳುವಳಿಯ ಗಮನಾರ್ಹ ಐಕ್ಯತೆ ಪ್ರದರ್ಶಿಸಿ, ಇದನ್ನು ಗಂಭೀರ ರಾಜಕೀಯ ಚರ್ಚೆಯನ್ನಾಗಿ ಪರಿವರ್ತಿಸುವಂತೆ

ಪುಟ 10 ಕ್ಕೆ

ಡಚ್ಚರೂ 'ಬೇಡ' ಎಂದರು

ಫ್ರಾನ್ಸ್‌ನ 'ಬೇಡ' ಈಗಾಗಲೇ ಯುರೋಪಿನಲ್ಲೆಲ್ಲಾ ಧ್ವನಿಸುತ್ತಿದೆ. ಡಚ್ಚರು ಇನ್ನೂ ದೊಡ್ಡದಾಗಿ 'ಬೇಡ' ಎಂದಿದ್ದಾರೆ. ಎರಡು-ಮೂರು ದಿನಗಳ ನಂತರ ಚರ್ಚೆ ಜನಮತ ಸಂಗ್ರಹದಲ್ಲಿ ಶೇಕಡಾ 65(ಮೂರನೇ ಎರಡು ಬಹುಮತ) 'ಬೇಡ' ಎಂದಿದ್ದಾರೆ. ಶೇಕಡಾ 60 ಕ್ಕೂ ಹೆಚ್ಚು ಮತದಾನವಾಗಿದ್ದು, ಫ್ರಾನ್ಸ್‌ನ ಮತದಾನದ ನಂತರ ಇದು ನಿರೀಕ್ಷಿತ ಫಲಿತಾಂಶವಾಗಿತ್ತು. ನೆದರಲ್ಯಾಂಡ್ಸ್ 'ಯುರೋಪ್' ಒಕ್ಕೂಟದ ಇನ್ನೊಂದು ಸ್ಥಾಪಕ ಸದಸ್ಯ ಎಂದು ಇಲ್ಲಿ ನೆನಪಿಸಿಕೊಳ್ಳಬೇಕು.

'ಮಹಾನ್ ಭರವಸೆಗಳ ಸಮಯ'

"........ 'ಬೇಡ' ತೀರ್ಪು ಮತ್ತು ವಿಜಯ ಗಮನಾರ್ಹ ಜನರನ್ನು ಅಣಿನೆರೆಸಿದ ಎಡಶಕ್ತಿಗಳ ರಾಜಕೀಯ ಪುನರ್ನವೀಕರಣ. ಸೌಹಾರ್ದತೆ ಆಧಾರಿತ ಎಲ್ಲರಿಗೂ ಸಮೃದ್ಧಿ ತರುವ ಜಂಗಲ್ ಕಾನೂನು ವಿರೋಧಿಸುವ, ಕನಿಷ್ಟ ವೇತನ-ಸವಲತ್ತಿಗಾಗಿ ಪರಸ್ಪರ ಕಾರ್ಮಿಕರನ್ನು ಕಾದಾಟಕ್ಕಿಳಿಯುವಂತೆ ಮಾಡದ - ಒಂದು ಹೊಸ 'ಸಾಮಾಜಿಕ ಯುರೋಪ್' ಗೆ ಕರೆ ಕೊಡುತ್ತದೆ ಈ ಫ್ರೆಂಚ್ ಜನತೆಯ ತೀರ್ಪು. ಮಾಲಕರು ಅತ್ಯಂತ ಕನಿಷ್ಟ ವೇತನದ ಯುರೋಪ್ ಪ್ರದೇಶಗಳಲ್ಲಿ ಹೋಗಿ, ಬಂಡವಾಳಕ್ಕೆ ಅತ್ಯಂತ ಹೆಚ್ಚಿನ ಲಾಭ ಗಳಿಸುವ 'ಸಾಮಾಜಿಕ ತಿಪ್ಪೆ'ಯ ನೀತಿ 'ಬೇಡ' ಎಂದಿದೆ ಈ ತೀರ್ಪು.....

... ನೆನ್ನೆ ರಾತ್ರಿ (ಮೇ 29, 2005) ಯುರೋಪಿನ ತುಂಬಾ ರಾಜಕೀಯ ಪ್ರತಿಷ್ಠಿತರು ಮತ್ತು ಅವರ ಸಲಹಾಗಾರರು ಅಪ್ರತಿಭರಾಗಿದ್ದಾರೆ. ಆದರೆ ಇಡೀ ಯುರೋಪಿನ ಜನತೆ ಫ್ರಾನ್ಸ್‌ನತ್ತ ನೋಡುತ್ತಿದ್ದಾರೆ. ಫ್ರಾನ್ಸ್‌ನ 'ಬೇಡ' ಸುಂಟರಗಾಳಿ ಇಡೀ ಯುರೋಪು ಆವರಿಸುತ್ತಿದೆ. ಹೊಸ ಚೈತನ್ಯ ಮೂಡುತ್ತಿದೆ. ಯುರೋಪು ಒಕ್ಕೂಟದ ತುಂಬಾ ಒಂದು ಹೊಸ ಭರವಸೆ ಹುಟ್ಟಿದೆ, ಹರಡುತ್ತಿದೆ......

.... ಫ್ರೆಂಚ್ ಕಮ್ಯುನಿಸ್ಟ್ ಮಹಾ ಕಾರ್ಯದರ್ಶಿ 'ಇನ್ನೊಂದು ಯುರೋಪಿ'ಗೆ ಜನಪ್ರಿಯ ಅಸೆಂಬ್ಲಿಗಳನ್ನು ಸಂಘಟಿಸಬೇಕು ಎಂದು ಕರೆ ಕೊಟ್ಟಿದ್ದಾರೆ.....

... ನಮ್ಮ ಮುಂದೆ ಸವಾಲುಗಳು ಇವೆ. 'ಇನ್ನೊಂದು ಯುರೋಪು'!... ಜನಪ್ರಿಯ ಎಡ ಬರಲಿದೆ. ಈ ಗಮನಾರ್ಹ ವಿಜಯ ತೆರೆದಿರುವ ಸಾಧ್ಯತೆಗಳ ಆಧಾರದ ಮೇಲೆ ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ....

- ಪಿಯರೇ ಲಾರೆಂಟ್ 'ಲಾ ಹ್ಯೂಮನೈಟ್'
(ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ) ಅಗ್ರಲೇಖನದಲ್ಲಿ

ಕೋಮುಮುಷ್ಟೀಕ, ಕ್ರಿಮಿನಲ್ ಹಾಗೂ ದರೋಡೆ ಪ್ರವೃತ್ತಿ - ವೃತ್ತಿಗಳು ಸೇರಿದರೆ ಏನಾದೀತು? ಈಚೆಗೆ ಮಂಗಳೂರಿನ ಘಟನೆಗಳೇ ಸಾಕ್ಷಿ.

ಗುಜರಾತ್, ಭಾಗಲ್ಪುರ, ಭಿವಂಡಿ, ಓರಿಸ್ಸಾದ ಕಿಯೋಂಜರ್ (ಗ್ರಹಾಂಸ್ಟೈನ್, ಫಿಲಿಫ್ ಮತ್ತು ತಿಮೋತಿಯರುಗಳ ಸಜೀವ ದಹನವಾಗುವಾಗ ಕೇಕೇ ಹಾಕಿ ಕುಣಿದು ಕುಪ್ಪಳಿಸಿದ ಸಂಘಪರಿವಾರದ ಕ್ರಿಮಿನಲ್ ಮನಸ್ಸುಗಳು ದ.ಕ ಜಿಲ್ಲೆಯ ಮಂಗಳೂರಿನ ಪ್ರಮುಖ ವೃತ್ತ 'ಪಂಪ್‌ವೆಲ್'ನಲ್ಲಿ ದಿನಾಂಕ 4.06.04ರ ರಾತ್ರಿ 10.30ರಂದು ದರೋಡೆ ವೃತ್ತಿಯವರನ್ನು ನಾಚಿಸುವ ರೀತಿಯಲ್ಲಿ ಮೈಸೂರು ಪ್ರವಾಸಿಗರ ಬಸ್ಸು ತಡೆದು ನಡೆಸಿದ ಕೃತ್ಯ ಈ ಪರಿವಾರದ ಅಪರಾಧ ಪ್ರವೃತ್ತಿಯ ಜನಿವಾರಕ್ಕೆ ಹೆಣೆದ ಮತ್ತೊಂದು ವಿಕೃತಿ.

ಭಜರಂಗದಳ ಭೂಗತ ದೊರೆಗಳ ಕೃತ್ಯವನ್ನು ಹಿಂದುಧರ್ಮ ರಕ್ಷಣೆ, ಹೆಂಗಳೆಯರ ಮಾನಪ್ರಾಣ ರಕ್ಷಣೆ, ಗೋಸಂರಕ್ಷಣೆ ಎಂಬ ಅನ್ವರ್ಥನಾಮದಲ್ಲಿ ದಿನನಿತ್ಯ ನಡೆಸುತ್ತಿರುವುದು ಅವಿಭಜಿತ ದ.ಕ ಜಿಲ್ಲೆಯ ದಿನಚರಿಯಾಗಿದೆ.

ಅಲ್ಪಸಂಖ್ಯಾತರ ಮೇಲೆ ವಿನಾಕಾರಣ ಹಲ್ಲೆ, ದಾಳಿ, ಬೆತ್ತಲೆ ಮಾಡಿ ಚಿತ್ರಹಿಂಸೆ, ಅಮಾಯಕ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ದಲಿತ ಹೆಣ್ಣುಮಕ್ಕಳ ಅತ್ಯಾಚಾರ, ವಿವಾಹಿತ ಮಹಿಳೆಯ ಅತ್ಯಾಚಾರ, ಕಳ್ಳನೋಟು ಚಲಾವಣೆ, ಶಾಲಾ ಕಾಲೇಜಿನ ಕಾರ್ಯಕ್ರಮಕ್ಕೆ ದಾಳಿ ನಡೆಸಿ "ಸಭ್ಯತೆಯ" ನೆಪದಲ್ಲಿ ದಾಂಧಲೆ, ಗಲಾಟೆ-ಬೀಚ್ ವಿಹಾರಾರ್ಥಿಗಳ ದೋಚುವಿಕೆ : ಅಲ್ಪಸಂಖ್ಯಾತ ಪುರುಷ "ಹಿಂದೂ" ಮಹಿಳೆಯೊಡನೆ ಮಾತಾಡಿದರು ಎಂಬ ಕಾರಣಕ್ಕೆ ಆ ಹೆಣ್ಣುಮಕ್ಕಳ ಮಾನಹರಾಜು ಮಾಡಿ, ಆತ್ಮಹತ್ಯೆಗೆ ಪ್ರೇರೇಪಿಸುವ ಈ ಕ್ರಿಮಿನಲ್ ಕೃತ್ಯದ ಸರಮಾಲೆಯೇ ಇದೆ. ಕಾನೂನನ್ನು ಕೈಗೆತ್ತಿಕೊಂಡು ಸಮಾಜ ಬಾಹಿರ ಶಾಂತಿಭಂಜಕ, ಭಯೋತ್ಪಾದಕ ಛಿದ್ರಕಾರಿ ಅನೈತಿಕ ದಂಧೆಗಳಲ್ಲಿ ಮುಳುಗಿ ಎದ್ದು ಹೊರಳಾಡುತ್ತಿರುವ ಈ ಭಜರಂಗದಳದ ಕಾರ್ಯಕರ್ತರು ಪುತ್ತೂರಿನಲ್ಲಿ ವೇಶ್ಯಾವಾಟಿಕೆ ಕೇಂದ್ರವನ್ನು ನಡೆಸುತ್ತಿರುವ ಖದೀಮರು ಎಂದು ನೋಂದಾಯಿಸಲಾದ ಕೇಸ್ ವಿವರಗಳನ್ನು ನೀಡುತ್ತದೆ.

ಮಂಗಳೂರಿನಲ್ಲಿ ಭಜರಂಗದಳದ ಆಕ್ರಮಣ ಪ್ರವಾಸಿಗರ ಮೇಲೆ ಧಾಳಿ

ಘಟನೆಯ ಹಿನ್ನಲೆ :

ಮಂಗಳೂರಿನ ಕೆ.ಎಸ್.ರಾವ್ ರಸ್ತೆಯಲ್ಲಿರುವ ಸ್ವಾಲಿ ಪ್ಯಾಲೇಸ್, ಗೋಲ್ಡ್ ಪ್ಯಾಲೇಸ್‌ನ ನೌಕರ, ಮಾಲಕರು ಸಮುದಾಯ ತಮ್ಮ ಕುಟುಂಬಸಮೇತರಾಗಿ ಮೈಸೂರು ಪ್ರವಾಸಕ್ಕೆಂದು ಅಂದು ನಗರವನ್ನು ರಾತ್ರಿ 10.15ರ ಸುಮಾರಿಗೆ ಬಿಟ್ಟರು. ಬಕಪಕ್ಷಿಯಂತೆ ಕುಟಿಲ ಕಾರಸ್ಥಾನ ನಡೆಸುತ್ತಿದ್ದ ಭಜರಂಗದಳದ 50-60 ಜನರ ಮಂದಿಯ ತಂಡ ಕೇವಲ 15 ನಿಮಿಷಗಳಲ್ಲಿ ಪಂಪ್‌ವೆಲ್ ಸರ್ಕಲ್ ಬಳಿ ತಡೆಯಿತು. ಮೊದಲಿಗೆ ಬಸ್ಸು ಚಾಲಕನ ಮೇಲೆ ಎರಗಿದರು. ಆ ಕ್ಷಣದಲ್ಲೇ ಸಂಪೂರ್ಣವಾಗಿ ಬಸ್ಸನ್ನು ಸುತ್ತುವರಿದು ಮುಸ್ಲಿಂ, ವಿವಾಹಿತ ಹಿಂದೂ ಮಹಿಳೆ- ಅವಿವಾಹಿತರು, ಮಕ್ಕಳು, ದಂಪತಿಗಳು ಚೂರಿಯಿಂದ ಯದ್ವಾತದ್ವಾ ತಿವಿದರು. ಮಕ್ಕಳನ್ನು ಕಿಟಕಿಯಿಂದ ಕೈಕಾಲು ಮುದ್ದೆಮಾಡಿ ಕಡ್ಡಿ ಮುರಿದಂತೆ ಬಿಸಾಡಿದರು. ಮಹಿಳೆಯರ ಹೊಟ್ಟೆ ಸೊಂಟ ಮತ್ತು ತೊಡೆಗಳಿಗೆ ಮದ ಏರಿದ ಆನೆ ಒದ್ದುವಂತೆ ಕಾಲಿನಿಂದ ಒದೆದರು. ಕೆಲವರನ್ನು ಬಸ್ಸಿನಿಂದ ಹೊರಕ್ಕೆ ಎಳೆದು ರಸ್ತೆಯಲ್ಲಿ ಕಾಲಿನಿಂದ ಫುಟ್‌ಬಾಲಿಗೆ ತುಳಿಯುವಂತೆ ಈಚೆಯಿಂದ ಆಚೆ ಆಚೆಯಿಂದ ಈಚೆ ಒದ್ದಾಡಿದರು. ಮತ್ತೆ ಕೆಲವರು ಮಹಿಳೆಯರ ತಲೆಕೂದಲು ಹಿಡಿದು ಡಾಮರು ರಸ್ತೆಗೆ ಬಡಿದ ಮಹಾ ಕ್ರೂರಿಗಳು ಇವರು. ದೇವಸ್ಥಾನ ಮತ್ತು ಇಂತಹ ಪ್ರವಾಸಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಸಂಪ್ರದಾಯದಂತೆ ಲಕ್ಷಾಂತರ ಬೆಲೆಯ ಚಿನ್ನಾಭರಣಗಳೊಂದಿಗೆ ಪ್ರವಾಸ ಹೊರಟಿದ್ದರು. ಮಹಿಳೆಯರ ಮಾಂಗಲ್ಯ ಸರ, ನೆಕ್ಲೇಸ್, ಉಂಗುರಗಳನ್ನು ಎಳೆದು ಅಪಹರಿಸಿದರು. ಕಿವಿಯಲ್ಲಿ ಬೆಂಡೋಲೆಗಳನ್ನು ಎಳೆದ ರಭಸಕ್ಕೆ ಹಲವರ ಕಿವಿ ಹರಿದಿದೆ. ಚಿತ್ರೀಕರಣಕ್ಕೆ ಬಂದ ಸ್ಥಳೀಯ ಟಿ.ವಿ.ಚಾನೆಲ್ 'ಕುಡ್ಲ'ದ ಛಾಯಾಗ್ರಾಹಕನಿಗೆ ದಕ್ಕಿದ್ದು ಮಾರಣಾಂತಿಕ ಚೂರಿ ಇರಿತ, ಕ್ಯಾಮರ, ಹಣ ಮತ್ತು ಇತರ ಎಲ್ಲಾ ಉಪಕರಣಗಳು ದಕಾಯಿತಿಯಾಯಿತು. ಒಂದು ಲಕ್ಷ 90 ಸಾವಿರ ರೂಪಾಯಿ(ಅಂದಾಜು) ಮಾಲಕರಿಂದಲೇ ಎಗರಿಸಿದ್ದಾರೆ. ಹತ್ತು-ಹದಿನೈದು ನಿಮಿಷಗಳ ಈ ದಾಂದಲೆಯಲ್ಲಿ ಹರಿದದ್ದು ರಕ್ತದ ಕೋಡಿ. ಹದಿನೈದು ಮಂದಿಗೆ ಗಂಭೀರ ಸ್ವರೂಪದ ಚೂರಿಯ ಆಳವಾದ ಗಾಯ. ಹಿಂದೂ ಧರ್ಮ ರಕ್ಷಕರ ಈ ಪೂರ್ವಯೋಜಿತ ಕೃತ್ಯ, ಇಂತಹ ಆಕ್ರಮಣ ನಡೆಸುತ್ತಿದ್ದಾಗ ಅವರು ಕೂಗುತ್ತಿದ್ದದ್ದು 'ನಿಮಗೆ ಹಿಂದೂ ಹುಡಿಗೇರು ಬೇಕಾ' ಎಂದು. ಪ್ರವಾಸಕ್ಕೆ ಹೊರಟ ಕುಟುಂಬಸ್ಥರು ನೌಕರರನ್ನು.........ಮಜಾಮಾಡಲು ಹೋಗುತ್ತಿದ್ದಾರೆ. ಹಿಂದೂ ಧರ್ಮಕ್ಕೆ ಅವಮಾನ ಎಂದೆಲ್ಲಾ ಕೂಗಿ ತಮ್ಮ ಹೀನಕೃತ್ಯವನ್ನು ಸಮರ್ಥಿಸಲು ಯತ್ನಿಸಿದ್ದು ಖಂಡನೀಯ. ದಾರಾಸಿಂಗರ ಶನಿಸಂತಾನ ಮತ್ತೊಂದು ಕಿಯೊಂಜರ್ ಘಟನೆ ಮಾಡುವ ಹಂತಕ್ಕೆ ತಲುಪುವಾಗ ಪೋಲೀಸರ ಆಗಮನದಿಂದ ಆ ಅಮಾಯಕ 40 ಮಂದಿಯ ಪ್ರಾಣ ಉಳಿದಿದೆ. ಸುದ್ದಿ ಕೇಳಿ ಟಿ.ವಿ.ಛಾನೆಲ್ ಛಾಯಾಗ್ರಾಹಕ ತಲುಪಲು ನಾಲ್ಕೈದು ನಿಮಿಷ ತಗಲಿದರೆ ಇತ್ತ ಪೋಲೀಸರು ತಲುಪಿದ್ದು ಎಲ್ಲಾ ಮುಗಿದು ಹೋದ ಬಳಿಕ ಮಾಮೂಲಿಯಂತೆ 45 ನಿಮಿಷಗಳ ನಂತರ ಮಹಜರು ನಡೆಸಲು ಹೇಗಿದೆ ಪೋಲೀಸರ ಮತ್ತು ಈ ಕ್ರಿಮಿನಲ್ ಅಪರಾಧಿಗಳ ಪರಸ್ಪರ ಅವಿನಾಭಾವ ಸಂಬಂಧ?


ಹೆಸರಿಲ್ಲದ ಉದಯವಾಣಿ ಬಸ್ಸು

ಅನಂತರ ನಡೆದ ಅಪರಾಧಿಗಳ ಬಂಧನದ ನಾಟಕ ಮತ್ತು ವಿಕಟ ಕ್ರೂರ ವ್ಯಂಗ್ಯವಾಗಿದೆ. ಖಳನಾಯಕರು ದಿನಾಂಕ 7ರ ತನಕವೂ ಬಂಧನವಾಗಿಲ್ಲ. ನೈಜ ಅಪರಾಧಿಗಳ ಬದಲು ಯೋಜನಾಬದ್ಧವಾಗಿ ಕೆಲವು ನಿರಪರಾಧಿಗಳನ್ನು ಫಿಕ್ಸ್ ಮಾಡುವಲ್ಲಿ ಮುಂದಾದರು. ಆಗ ನಿರಪರಾಧಿಗಳ ಬಂಧನವಾಗುತ್ತಿದೆ ಎಂಬ ಹುಯಿಲು ಕೇಳಿ ಬರಲು ಪೋಲಿಸರು ತೆಪ್ಪಗೆ ಆಗಿದ್ದಾರೆ. ಇತ್ತ ಅಂದೇ ರಾತ್ರೋ ರಾತ್ರಿ ಪೋಲೀಸ್ ಠಾಣೆಗೆ ಎರಗಿದ ಬಿ.ಜೆ.ಪಿ ಶಾಸಕರೋರ್ವರು ಕೆಲವು ಆಪ್ತ ಕ್ರಿಮಿನಲ್ ಭಜರಂಗಿಗಳನ್ನು ಬಂಧನದಿಂದ ಎಳೆದುಕೊಂಡು ಹೋಗಿದ್ದಾರೆ. ಇಂತಹ ಕೃತ್ಯಗಳಲ್ಲಿ ಅಪರಾಧವನ್ನು ಕಾಣದ ಎಲ್ಲವೂ ಮಾಮೂಲಿ ಎಂಬಂತೆ ಜಿಲ್ಲಾ ಎಸ್.ಪಿ ಸೌಮೇಂಧು ಮುಖರ್ಜಿ ಸೌಮ್ಯವಾಗಿದ್ದಾರೆ. ಈ ಮೊದಲಿನ ಎಸ್.ಪಿ.ಸೀಮಂತ್‌ಸಿಂಗ್‌ರವರು ರೆಕ್ಕೆ ಮುರಿದಿದ್ದರು. ಆದರೆ ಕೊಂಚವಾದರೂ ಇಂತಹವರ ಈಗ ಬಲಿಷ್ಠವಾಗಿ ರೌದ್ರಾವತಾರ ತಾಳುತ್ತಿದೆ. ಜಿಲ್ಲೆಯ ಪೋಲೀಸರು ಭಜರಂಗಿಗಳ ಪೋಲೀಸರಾಗಿದ್ದಾರೆ. ಠಾಣೆಗಳು ಅವರ ಕ್ರಿಮಿನಲ್ ಅಡ್ಡೆಯ ಪಂಚಾಯತಿ ಕಟ್ಟೆಯಂತಾಗಿದೆ.

ವರದಿ - ಕೃಷ್ಣಪ್ಪ ಕೊಂಚಾಡಿ.

ಉದಯವಾಣಿ ದೈನಿಕದ ಮಾನ ಹರಾಜು

ಇಲ್ಲಿರುವ ಘಟನೆಗೆ ಸಂಬಂಧಿಸಿ ದಾಂಧಲೆಗೆ ಒಳಗಾದ ಬಸ್ಸಿನ ಚಿತ್ರಕ್ಕೆ ಸಂಬಂಧಿಸಿ ಉದಯವಾಣಿ ದೈನಿಕ ಯಾವ ರೀತಿ ಸತ್ಯದ ಮೇಲೆ ಅತ್ಯಾಚಾರ ನಡೆಸುವ ವಿಕೃತಿಯ ದ್ಯೋತಕವಾಗಿದೆ. ನೈಜ್ಯ ಘಟನೆಯನ್ನು ಮರೆಮಾಚಿ ವಿಕೃತ ವರದಿ ನೀಡಿದೆ. ಅದೂ ಸಾಲದು ಎಂಬಂತೆ "ಶಾರದಾ" ಎಂಬ ಬಸ್‌ನ ಹೆಸರನ್ನು ಕಂಪ್ಯೂಟರ್ ಮೂಲಕ ಅಳಿಸಿ ಹಾಕಿ ಭಾವಚಿತ್ರ ಪ್ರಕಟಿಸಿದೆ. ಈ ರೀತಿ ಮಾಡುವ ಉದ್ದೇಶದ ಹಿಂದೆ ಅಡಗಿರುವ ಕಾಣದ ಕೈಗಳ ಕೃತ್ಯವನ್ನು ಪೋಲೀಸರು ಬಯಲಿಗೆಳೆಯಬೇಕಾಗಿದೆ.

ಉಡುಪಿ ಬೆತ್ತಲೆ ಪ್ರಕರಣದಲ್ಲಿ ಪಾಕಿಸ್ತಾನದ ಧ್ವಜದ ಮೆರವಣಿಗೆ ಎಂದು ಉದ್ದೇಶಪೂರ್ವಕ ಭಾವಚಿತ್ರ ಪ್ರಕಟಿಸಿ ರಕ್ತದ ಹೊಳೆ ಹರಿಸುವ ಹುನ್ನಾರ ವಿಫಲವಾದ ಎರಡೇ ಎರಡು ತಿಂಗಳಲ್ಲಿ ಮತ್ತೆ ಅದೇ ರಕ್ತದ ದಾಹ ಉದಯವಾಣಿಗೆ ಬಂದಿದೆ.

ಪೋಲೀಸರು ಎಫ್‌ಐಆರ್‌ನಲ್ಲಿ ಏನೆಂದು ಬರೆದರು?

"ನಮ್ಮ ಬಸ್‌ಗೆ ಆಕ್ರಮಣ ಮಾಡಿ ಎಬ್ಬಿಸಿದರು. ಏನಿಲ್ಲವೆಂದೂ ನೂರರಿಂದ ನೂರ ಇಪ್ಪತ್ತೈದು ಜನರಿದ್ದರು. ಎಲ್ಲರೂ ಸೇರಿ ಎರಗಿದರು? ಹೀಗೆ ಬಜರಂಗದಳ ಪುಂಕರ ಆಕ್ರಮಣದಲ್ಲಿ ನಲುಗಿ ಹೋದ ಸ್ವಾಲಿ ಪ್ಯಾಲೇಸ್‌ನ ಮಾಲಿಕರ ಹೆಂಡತಿ ಪೋಲೀಸರಿಗೆ ದೂರು ನೀಡುವಾಗ ಹೇಳಿದ ಹೇಳಿಕೆ.

ಇದನ್ನು ಪೋಲೀಸರು '10ರಿಂದ 15 ಜನರ ಗುಂಪು' ಎಂದು ದೂರಿನಲ್ಲಿ ಬರೆದುಕೊಂಡರು. ಇದಕ್ಕೆ ಆ ಮಹಿಳೆ ಆಕ್ಷೇಪ ಎತ್ತಿ 10-15ರಲ್ಲಿ ನೂರಕ್ಕೂ ಹೆಚ್ಚಾಗಿ ನಾನೇ ನೋಡಿದ್ದೇನೆ' ಎಂದು ಗಟ್ಟಿಯಾಗಿ ಹೇಳಿದರೂ..... ಅಯ್ತಮ್ಮ ಮುಂದೇನು? ಎಂದು ತಮ್ಮ 'ನಿಯೋಜಿತ ಕರ್ತವ್ಯವನ್ನು ಮುಂದುವರಿಸಿದರು.

ಇದೇ ಬಸ್‌ನಲ್ಲಿದ್ದ ಇನ್ನೊಬ್ಬ ಮಹಿಳೆ 'ಸ್ವಾಮಿ ನನ್ನ ಕೊರಳಿಗೆ ಕೈಹಾಕಿ ಮಾಂಗಲ್ಯವನ್ನೇ ಕಿತ್ತಿಕೊಂಡುಬಿಟ್ಟರು. ಇವರೆಂಥ ಧರ್ಮಾರ್ಥಿರು?" ಎಂದು ಕೇಳಿದ ರೀತಿ ಬಜರಂಗದಳಿಗಳ ಅಧರ್ಮ-ಕರಾಳತೆಯನ್ನು ಪ್ರಶ್ನಿಸಿದಂತಿತ್ತು. ಆದರೆ ಇದೇನೂ .....ಪೋಲೀಸರು ಬಂಗಾರ ಖರೀದಿಸಿದ ರಶೀದಿ ಇದೆಯೇ' ಎಂದು ಮರುಪ್ರಶ್ನೆ ಹಾಕಿ ಇನ್‌ವೆಸ್ಟಿಗೇಷನ್ ಆರಂಭಿಸಿದರು.

ಇಷ್ಟೆಲ್ಲಾ ಆದ ಬಳಿಕ, ಪೋಲೀಸರೂ ಕಂಡ ಬಳಿಕ ಭಾಗಿಯಾದ ಬಹುತೇಕರು ಬಜರಂಗದಳದ ಕಾರ್ಯಕರ್ತರು ಎಂದು ಸಾಬೀತಾದ ಬಳಿಕವೂ ಈ ಪ್ರಕರಣ ಅಲ್ಪಸಂಖ್ಯಾತರ ಮೇಲೆ ಕೋಮುವಾದಿಗಳು ನಡೆಸಿದ ಆಕ್ರಮಣವೆಂದು ಪರಿಗಣಿಸುತ್ತಿಲ್ಲ. ಇದನ್ನು ಪಕ್ಷಕ್ಕೆ ತಳ್ಳಿ ಮಾಮೂಲಿ ದರೋಡೆ ಮಟ್ಟಕ್ಕೆ ಇಳಿಸಲು ಪೋಲೀಸ್ ಆಡಳಿತವೇ ಮುಂದಾಗಿರುವುದು ಸನ್ನಿವೇಶಕ್ಕೆ ಹಿಡಿದ ಕನ್ನಡಿ.

ಪುಟ 7ರಿಂದ........**ದಳ್ಳುರಿ**

ಶಾಮೀಲಾಗಿದ್ದಾರೆ. ಇದನ್ನು ಅಧಿಕಾರಿಗಳಿಂದ ತನಿಖೆಗೊಳಪಡಿಸಲು ಶಾಸಕರಾದ ಶ್ರೀರಾಮರೆಡ್ಡಿ ಆಗ್ರಹಿಸಿದರು. ಪೋಲೀಸರು – ಅಧಿಕಾರಿಗಳು ಕೋಮುವಾದಿಗಳೊಂದಿಗೆ ಶಾಮೀಲಾದ ಹಲವು ಉದಾಹರಣೆಗಳನ್ನು, ಕೆಲವು ಚುನಾಯಿತ ಪ್ರತಿನಿಧಿಗಳೇ (ಬಿಜೆಪಿ) ಇಂತಹ ಕ್ರಿಮಿನಲ್‌ಗಳನ್ನು ಬೆಂಬಲುಸುತ್ತಿರುವುದನ್ನು ಎಸ್.ವೈ.ಗುರುಶಾಂತ್ ಖಂಡಿಸಿದರು.

9ರ ಸಭೆಯೊಂದರಲ್ಲಿ ಮಾತನಾಡಿದ ಬಿಜೆಪಿ ಶಾಸಕ ಸುನೀಲ್‌ಕುಮಾರ್ ಒಬ್ಬ ಅನಂತು ಅಲ್ಲ, ಸಾವಿರಾರು ಅನಂತರ ಸೃಷ್ಟಿಯಾಗಬೇಕು, ಅವರ ಧ್ಯೇಯ, ಉಳಿದ ಕೆಲಸ ಮಾಡಿ ಮುಗಿಸಬೇಕು' ಎಂದು ಹೇಳಿದ್ದರ ಅರ್ಥವೇನು ಎಂದು ಪ್ರಶ್ನಿಸಿದರು ಬಿ.ಮಾಧವರು. ರೌಡಿಗಳ, ಸಮಾಜಘಾತುಕರ ಸೃಷ್ಟಿ, ಅವರ ಕೆಲಸ ಮಾಡುವುದೇ ಆದರ್ಶವೇ ಎಂದರು ಅವರು. ಹಿಂದೆ ಕಾಂಗ್ರೆಸ್ ಮುಖಂಡ ಜಬ್ಬಾರನ ಕೊಲೆಯಾದಾಗ ಈ ಅನಂತು ಬಜರಂಗದಳದವನಲ್ಲ ಎಂದು ಎದೇ ಆರ್.ಎಸ್.ಎಸ್ ಬಿಜೆಪಿ ಸಾರಿತ್ತು. ಆದರೆ ...... ಆತನೇ ಇವರ ಹುತಾತ್ಮ ಎಂದು ತಲೆ ಮೇಲೆ ಹೊತ್ತು ತಿರುಗುತ್ತಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಶಾಂತಿ-ಸೌಹಾರ್ದತೆ ಕಾಪಾಡಲು ಸಿಪಿಐ(ಎಂ) ಅಗತ್ಯವಾದ ಮುತುವರ್ಜಿ ವಹಿಸಿ, ಎಲ್ಲಾ ಪ್ರಗತಿಪರ ಶಕ್ತಿಗಳನ್ನು ಅಣಿನೆರೆಸಲು ಮುಂದಾಗುವುದಾಗಿ ಕೆ.ಆರ್.ಶ್ರೀಯಾನ್‌ರವರು ಮುಂದಿನ ಕಾರ್ಯಕ್ರಮ ಪ್ರಕಟಿಸಿದರು.

ಈ ಘಟನೆ ಬಗ್ಗೆ ಕಾಂಗ್ರೆಸ್, ದಳ, ಇತ್ಯಾದಿ ಪಕ್ಷಗಳು ಮೌನವಾಗಿರುವಾಗಲೇ, ಕ್ರಿಯಾಶೀಲವಾಗಿ ಸಿಪಿಐ(ಎಂ) ಮಧ್ಯ ಪ್ರವೇಶಿಸಿರುವುದು ಜನತೆಯಿಂದ ಶ್ಲಾಘನೆಗೆ ಒಳಗಾಗಿದೆ.

ಫ್ರೆಂಚ್ ಜನಮತದ 'ಕ್ರಾಂತಿ'........

ಪುಟ 9 ರಿಂದ

ದುಡಿದವು. ಫ್ರಾನ್ಸ್‌ನಲ್ಲಿ ಇಡೀ ಯುರೋಪು ವಹಿಸಿರೋ ಸಾಮಾಜಿಕ-ಆರ್ಥಿಕ-ರಾಜಕೀಯ ನೀತಿಗಳ ಬಗ್ಗೆ ತೀವ್ರ ಸಾರ್ವಜನಿಕ ಚರ್ಚೆ ಸಾಧ್ಯವಾಯಿತು. ಫ್ರಾನ್ಸ್‌ನ ಮೂಲೆ ಮೂಲೆಯಲ್ಲಿ ಸಾವಿರಾರು ಸಭೆಗಳಲ್ಲಿ ಈ ಚರ್ಚೆ ನಡೆದವು. 18ನೇ ಶತಮಾನ ಫ್ರೆಂಚ್ ಕ್ರಾಂತಿ, 1968 ರ ಕ್ರಾಂತಿಕಾರಿ ಬಿಕ್ಕಟ್ಟಿನಲ್ಲಿ ಕಂಡುಬಂದ ತೀವ್ರ ರಾಜಕೀಯ ಪಾಲ್ಗೊಳ್ಳುವಿಕೆ ಕಂಡುಬಂತು ಎಂದಿದ್ದಾರೆ ಹಲವು ರಾಜಕೀಯ ವೀಕ್ಷಕರು. ಇದು ಹೆಚ್ಚುಕಡಿಮೆ 'ಇನ್ನೊಂದು ಫ್ರೆಂಚ್ ಕ್ರಾಂತಿ' ಎಂದಿದ್ದಾರೆ. ಇವೆರಡೂ ಅತಿಶಯೋಕ್ತಿ ಆಗಿರಬಹುದು. ಆದರೆ ಇದೊಂದು ಅತ್ಯಂದ ಗಮನಾರ್ಹ ರಾಜಕೀಯ ಚರ್ಚೆಯಾಗಿತ್ತು ಎಂಬುದಕ್ಕೆ ಸಂಶಯವಿಲ್ಲ. ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಎಡಪಕ್ಷಗಳ ಬೆಂಬಲಿಗರು ಮಾತ್ರವಲ್ಲ ಸೋಶಲಿಸ್ಟ್-ಗ್ರೀನ್ ಪಕ್ಷಗಳ ಅರ್ಧಕ್ಕೂ ಹೆಚ್ಚು ಬೆಂಬಲಿಗರು 'ಬೇಡ' ಮತ ನೀಡಿದ್ದಾರೆ. ಫ್ರಾನ್ಸ್‌ನ 96 ಜಿಲ್ಲೆಗಳಲ್ಲಿ ಕೇವಲ 13 ಜಿಲ್ಲೆಗಳಲ್ಲಿ 'ಬೇಕು' ಮತಕ್ಕೆ ಬಹುಮತ ಸಿಕ್ಕಿತು. ದುಡಿಯುವರ್ಗದ ಜನ ಬಹುಪಾಲು ಇರುವ ಪ್ರದೇಶಗಳಲ್ಲಿ ಮತ್ತು ಯುವಕರಲ್ಲಿ ಶೇಕಡ 60-70 'ಬೇಡ' ಮತ ಬಿದ್ದಿವೆ. 'ಬೇಡ' ಮತಕ್ಕೆ ವಿಜಯ ಎಡ ಶಕ್ತಿಗಳಿಗೆ ಪ್ರಚಂಡ ವಿಜಯ. ಈ ವಿಜಯದ ರಾಜಕೀಯ ಮಹತ್ವದ ಬಗ್ಗೆ ಫ್ರೆಂಚ್ ಕಮ್ಯುನಿಸ್ಟ್ ಪತ್ರಿಕೆ 'ಲಾ ಹ್ಯೂಮನೈಟ್' ಪತ್ರಿಕೆಯ ಅಗ್ರಲೇಖನದ ಮಾತುಗಳಲ್ಲಿ ಕೇಳಿ (ಬಾಕ್ಸ್ ನೋಡಿ).

ಮುಂದೇನು ?

ಫ್ರೆಂಚ್ 'ಬೇಡ' ಫ್ರಾನ್ಸ್‌ನಲ್ಲಿ ಮಾತ್ರವಲ್ಲ ಯುರೋಪಿನ ಸರ್ಕಾರದಲ್ಲೂ ತೀವ್ರ ಬಿಕ್ಕಟ್ಟು ತಂದಿದೆ. ಫ್ರಾನ್ಸ್‌ನಲ್ಲಿ ಅಧ್ಯಕ್ಷ, ಪ್ರಧಾನಿ ಮತ್ತು ಮಂತ್ರಿಗಳನ್ನು ಬದಲಾಯಿಸಿ 'ಹೊಸ ಸರ್ಕಾರ' ನೇಮಿಸಿದ್ದಾರೆ. ಆದರೆ ಜನ-ವಿರೋಧಿ ನೀತಿಗಳನ್ನು ಬದಲಾಯಿಸಲು ರಾಜಕೀಯ ಬಿಕ್ಕಟ್ಟು ಪರಿಹಾರವಾಗುವುದಿಲ್ಲ. ಯುರೋಪಿಯನ್ ಸರ್ಕಾರ ಇನ್ನಷ್ಟು ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಈ ಸಂವಿಧಾನ ತಿರಸ್ಕೃತವಾದರೆ, ಬದಲಿ ಎನು ಎಂಬ ಬಗ್ಗೆ ಯುರೋಪಿಯನ್ ನಾಯಕರು ಯೋಜನೆಯನ್ನು ಮಾಡಿರಲಿಲ್ಲ. ಯಾವುದೇ ಬದಲಿ ಕೊಡದೆ ಈ ಸಂವಿಧಾನ ಹೇಗಿರಬೇಕು ಎಂದು ಅವರ ಹುನ್ನಾರವಾಗಿತ್ತು. ಜುಲೈನಲ್ಲಿ ಬ್ರಿಟನ್ ಪ್ರಧಾನಿ ಬ್ಲೇರ್ ಯುರೋಪಿಯನ್ ಒಕ್ಕೂಟ ಅಧ್ಯಕ್ಷತೆ ವಹಿಸಲಿದ್ದು, ಈ ಬಿಕ್ಕಟ್ಟು ಬಗೆಹರಿಸುವ ಭಾರ ಅವರ ತಲೆಯ ಮೇಲೆ ಬಿದ್ದಿದೆ.

ಇಡೀ ಜಗತ್ತಿನ ಜನತೆ ಸಹ ಯುರೋಪಿನ ಈ ತಳಮಳವನ್ನು ಕುತೂಹಲ, ಭರವಸೆಯಿಂದ ನೋಡುತ್ತಿದ್ದಾರೆ. ಯುರೋಪಿಯನ್ ಒಕ್ಕೂಟ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಪ್ರತಿ-ಶಕ್ತಿಯಾಗಿ ಹೊಮ್ಮಬೇಕು. ಅಮೆರಿಕದ ಸಹವರ್ತಿ ಅಥವಾ ಬಾಲಂಗೋಚಿಯಾಗಬಾರದು. ಅದರ ಜತೆಗೆ ಯುರೋಪ್ ತನ್ನ ಸಾಮಾಜಿಕ ಸಾಧನೆಗಳನ್ನು ಉಳಿಸೀತೇ, ಪ್ರಗತಿಪರ ಆಶಯಗಳ ತಾಣವಾಗಿ ಬೆಳೆಯಿತೇನೋ ಎಂದು ಬಯಸುತ್ತಿದೆ. ಫ್ರೆಂಚ್ ಜನತೆಯ ಈ ತೀರ್ಪು ಅವರಿಗೆಲ್ಲಾ ಈ ನಿಟ್ಟಿನಲ್ಲಿ ಭರವಸೆ ಹುಟ್ಟಿಸಿದೆ. ಆಶಾದಾಯಕವಾಗಿ ಕಂಡಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ದಾಳಿ ಎದುರಿಸಲು ಯುರೋಪಿನ ಜನತೆ ಸಜ್ಜಾಗುತ್ತಿರುವುದು ಎಲ್ಲರಿಗೂ ಹುಮ್ಮಸ್ಸು ತಂದಿದೆ.

ಅಡ್ವಾಣಿ : ತೆರೆಮರೆಯ ಕಿರುನಾಟಕ !

ಪಾಕಿಸ್ತಾನಕ್ಕೆ ಪ್ರವಾಸ ಹೋಗಿದ್ದ ಅಡ್ವಾನಿ ಆಡಿದ ಮಾತುಗಳಿಂದ ಸೃಷ್ಟಿಗೊಂಡ ಬಿಕ್ಕಟ್ಟು, ರಾಜೀನಾಮೆ ನಾಟಕ, ನಾಟಕೀಯವಾಗಿ ಅಂತ್ಯಗೊಂಡಿದೆ. ಇದರ ತೆರೆಮರೆಯಲ್ಲಿ ಅಡಗಿರುವ ಅಂಶಗಳೇನು ?

ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಎಲ್.ಕೆ.ಅಡ್ವಾಣಿಯವರ ರಾಜೀನಾಮೆಯ ಮೂರು ದಿನಗಳ ನಾಟಕ ವಿಲಕ್ಷಣ ಸ್ವರೂಪಗಳನ್ನು ತಳೆದು ಕೊನೆಗೂ ಮುಗಿದಿದೆ. ಅಡ್ವಾಣಿಯವರು ತಮ್ಮ ರಾಜೀನಾಮೆಯನ್ನು ಹಿಂದಕ್ಕೆ ಪಡೆದಿದ್ದಾರೆ. ಅದೇನೇ ಇರಲಿ, ಆರ್.ಎಸ್.ಎಸ್ ಬಿಜೆಪಿ ಮತ್ತಿತರರನ್ನು ಕಳಿಸಿತು. ಹೀಗೆ ಹುಟ್ಟಿದ್ದು ಜನಸಂಘ. ಅಂದಿನಿಂದ ಜನಸಂಘ ಹಾಗೂ ಅದರ ನಂತರದ ಅವತಾರ ಬಿಜೆಪಿ ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿ ಕೆಲಸ ಮಾಡುತ್ತಾ ಬಂದಿದೆ. ಅದರ ಮುಖ್ಯ ಗುರಿ ಭಾರತವನ್ನು ಒಂದು ಫ್ಯಾಸಿಸ್ಟ್ ಮಾದರಿಯ "ಹಿಂದೂರಾಷ್ಟ್ರ"ವಾಗಿ

ಕಣ್ಣೋಟದಿಂದ ದಾರಿ ತಪ್ಪುತ್ತಿದೆ ಎಂದು ಉಚ್ಚರಿಸುವ ಪ್ರಯತ್ನ ಅಡ್ವಾಣಿಯವರದ್ದು ಎಂಬುದು. ಅಂದರೆ ಅಡ್ವಾಣಿಯವರು ಪಾಕಿಸ್ತಾನೀ ರಾಜಕೀಯ ಮುಖಂಡತ್ವ ಈ ತಪ್ಪನ್ನು ಸರಿಪಡಿಸಿಕೊಳ್ಳಬೇಕು ಎಂದು ಪರೋಕ್ಷವಾಗಿ ಸಲಹೆ ಮಾಡಿದಂತಾಗಿದೆಯಂತೆ. ಆದರೆ ಇಂತಹ ಸೂಕ್ಷ್ಮತೆಯ ಆಶಯ ಏನಾದರೂ ಇದ್ದಲ್ಲಿ ಆರ್‌ಎಸ್‌ಎಸ್ ಆಗಲೀ, ವಿಹೆಚ್‌ಪಿಯಿಂದಾಗಲೀ ಇದಕ್ಕೆ ಒಪ್ಪಿಗೆ ದೊರೆಯಲಿಲ್ಲ. ಅದು ಜಿನ್ನಾ ಮತ್ತು ಅವರ



ಕರಾಚಿಯಲ್ಲಿರುವ ಜಿನ್ನಾ ಸಮಾಧಿ ಮುಂದೆ ಅಡ್ವಾನಿ

ಆರ್‌ಎಸ್‌ಎಸ್ ಸಾರಿತು.

ಕೇಸರಿ ಪಡೆಗಳು ಖಿನ್ನರಾಗುವ ಬೇರೆ ಪ್ರಶ್ನೆಗಳೂ ಇದ್ದವು. ಬಾಬ್ರಿ ಮಸೀದಿಯ ಧ್ವಂಸದ ಬಗ್ಗೆ ಅಡ್ವಾಣಿಯವರು ಪಾಕಿಸ್ತಾನದ ನೆಲದಲ್ಲಿ ವಿಷಾದ ವ್ಯಕ್ತಪಡಿಸಿದ್ದು ಆರ್‌ಎಸ್‌ಎಸ್‌ಗೆ ಇಷ್ಟವಿಲ್ಲದ ಬೇಸರ ತಂದಿದೆ. ಜನರಲ್ ಮುಷರ್ರಫ್ ಮತ್ತು ಪಾಕಿಸ್ತಾನದ ಸೇನೆ ಭಾರತದೊಡನೆ ಶಾಂತಿ ಪ್ರಕ್ರಿಯೆಯನ್ನು ಮುನ್ನಡೆಸಿದೆ. ಎಂಬ ಅವರ ಪ್ರಶಂಸೆ ನರೇಂದ್ರ ಮೋದಿಯಂತರವರಿಗೆ ರುಚಿಸಿಲ್ಲ. ಎಂಬುದೂ ಸ್ವಯಂವೇದ್ಯ. ನರೇಂದ್ರ ಮೋದಿಯವರು ಕೋಮುವಾದಿ ಭಾವೋದ್ರೇಕವನ್ನು ಬಡಿದೆಬ್ಬಿಸಲು 'ಮಿಯಾಂ ಮುಷರ್ರಫ್' ಎಂದೇ ಕೂಗಾಡುತ್ತಿದ್ದವರು ತಾನೇ! ಅಲ್ಲದೆ ಈಗ ನಡೆಯುತ್ತಿರುವ ಶಾಂತಿ ಪ್ರಕ್ರಿಯೆಯ ಬಗ್ಗೆ ಅವರ ಹೇಳಿಕೆಗಳು, ಟಿಪ್ಪಣಿಗಳು ಮನಮೋಹನ್‌ಸಿಂಗ್ ಸರ್ಕಾರದ ಪ್ರಯತ್ನಗಳ ಬಗ್ಗೆ ಟೀಕೆಗಳನ್ನು ಮಾಡದಂತೆ ಮೂಕಗೊಳಿಸುತ್ತಿದೆ ಎಂಬುದು ಕೇಸರೀ ಪಡೆಗಳ ಭಾವನೆ.

ಅಡ್ವಾಣಿಯವರು ಬಿಜೆಪಿಯನ್ನು ಒಂದು ಹೆಚ್ಚು ಉದಾರವಾದ ಚೌಕಟ್ಟು ಹೊಂದುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ಸಿದ್ಧಾಂತ ಮಂಡಿಸುವ ರಾಜಕೀಯ ಟಿಪ್ಪಣಿಗಾರರು ನಾವು ಈ ಮೇಲೆ ಹೇಳಿದ್ದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಅಂದರೆ ಬಿಜೆಪಿ ಕೇವಲ ಆರ್‌ಎಸ್‌ಎಸ್ ಅಂಗವಾಗಿಯಷ್ಟೇ ಕೆಲಸ ಮಾಡುತ್ತದೆ. ಹೀಗಿರುವಾಗ ಉದ್ರೇಕಕಾರಿ ಕೋಮುವಾದಿ ಭಾವನೆಗಳನ್ನು ಗಲಭೆಗಳನ್ನು ಬಡಿದೆಬ್ಬಿಸುವ



ಅಲಹಾಬಾದ್‌ನಲ್ಲಿ ಅಡ್ವಾನಿ ವಿರುದ್ಧ ಸಂಘ ಪರಿವಾರದ ಕಾರ್ಯಕರ್ತರ ಪ್ರತಿಭಟನೆ !

ಮೂಲಕ ಭಾರತದಲ್ಲಿ ಪ್ರಭುತ್ವ ಶಕ್ತಿಯ ಮೇಲೆ ಮತ್ತೆ ಹತೋಟಿ ಪಡೆಯುವ ಆರ್‌ಎಸ್‌ಎಸ್‌ನ ಪ್ರಯತ್ನಗಳು ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ವಿಪತ್ಕಾರೀ ಬೆದರಿಕೆಗಳು. ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧಾರವನ್ನು ಕಾಯ್ದುಕೊಳ್ಳಬಯಸುವ ಭಾರತೀಯ ದೇಶಪ್ರೇಮಿಗಳೆಲ್ಲರೂ ಈ ಅಪಾಯದ ಬಗ್ಗೆ ಎಚ್ಚರದಿಂದಿರಬೇಕು. 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಮಾಡಿದಂತೆ ಭಾರತೀಯ ಜನತೆ ಈಗ ಮತ್ತೊಮ್ಮೆ ಭಾರತೀಯ ಗಣತಂತ್ರವನ್ನು ರಕ್ಷಿಸಲು, ಕಾಪಾಡಿಕೊಳ್ಳಲು ಇನ್ನಷ್ಟು ಬಲಯುತವಾಗಿ ಮುಂದೆ ಬರಬೇಕು. ○

ಕೇಸರಿ ಪಡೆಗಳಲ್ಲಿನ ಬಿಕ್ಕಟ್ಟು ಆಳಗೊಳ್ಳುತ್ತಿದೆ


ನೇತೃತ್ವದ ಕೇಸರಿ ಪಡೆಗಳ ಬಿಕ್ಕಟ್ಟು ದಿನೇದಿನೇ ಆಳಗೊಳ್ಳುತ್ತಿದೆ ಎಂಬುದಂತೂ ಒಂದು ವಾಸ್ತವ ಸಂಗತಿ.

2004 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಪರಾಭವದ ನಂತರ ಕೇಸರೀಕೂಟಕ್ಕೆ ಚುನಾವಣಾ ಫಲಿತಾಂಶಗಳನ್ನು ಅರಗಿಸಿಕೊಳ್ಳಲು ಶಕ್ತವಾಗಲೇ ಇಲ್ಲ. ಅಷ್ಟೇ ಅಲ್ಲ. ಸೋಲು ಏಕಾಯಿತು ಎಂಬ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರಲೂ ಅದಕ್ಕೆ ಸಾಧ್ಯವಾಗಲಿಲ್ಲ. ವಾಜಪೇಯಿ, ಅಡ್ವಾಣಿಯವರಂತಹ ಹಿರಿಯ ಮುಖಂಡರು ಮುಂದಿನ ಪೀಳಿಗೆಗೆ ದಾರಿ ಮಾಡಿಕೊಡಬೇಕು ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಸುದರ್ಶನರ ಸಾರ್ವಜನಿಕ ಆಗ್ರಹದ ಹಿನ್ನೆಲೆಯಲ್ಲೂ ಈ ನಾಟಕೀಯ ಬೆಳವಣಿಗೆಗಳನ್ನು ಕಾಣಬೇಕು. ಆರ್‌ಎಸ್‌ಎಸ್ ಕೇಸರೀಪಡೆಯ ಇತರ ಎಲ್ಲಾ ಸಂಘಟನೆಗಳನ್ನು ಹತೋಟಿಯಲ್ಲಿಟ್ಟುಕೊಂಡಿದೆ. ಈಗ ಮತ್ತೊಮ್ಮೆ ಸ್ಪಷ್ಟವಾಗಿದೆ.

ನಮಗೆ ತಿಳಿದಿರುವಂತೆ ಮಹಾತ್ಮಾ ಗಾಂಧಿಯವರ ಹತ್ಯೆಯ ನಂತರ ಆರ್‌ಎಸ್‌ಎಸ್‌ನ ಮೇಲೆ ನಿಷೇಧ ಹಾಕಲಾಯಿತು ಹಾಗೂ ತದನಂತರ ರಾಜಕೀಯ ಚಟುವಟಿಕಟಗಳನ್ನು ನಡೆಸದಂತೆ ನಿರ್ಬಂಧಿಸಲಾಯಿತು. ಆಗ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಫ್ಯಾಸಿಸ್ಟ್ ಮಾದರಿಯ "ಹಿಂದೂರಾಷ್ಟ್ರ"ವಾಗಿ ಪರಿವರ್ತಿಸುವ ತನ್ನ ದುಷ್ಟ ರಾಜಕೀಯ ಯೋಜನೆಯನ್ನು ಪ್ರಚಾರ ಮಾಡಲು ಅದು ಪರ್ಯಾಯ ದಾರಿಗಳನ್ನು ಹುಡುಕಲಾರಂಭಿಸಿತು. 1951ರಲ್ಲಿ ನೆಹರೂ ಸಂಪುಟದಲ್ಲಿ ಮಂತ್ರಿಯಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿ ರಾಜೀನಾಮೆ ನೀಡಿ ಹೊರಬಂದು ಹೊಸದೊಂದು ಪಕ್ಷವನ್ನು ಕಟ್ಟುವ ಪ್ರಕ್ರಿಯೆಯಲ್ಲಿದ್ದಾಗ ಆರ್‌ಎಸ್‌ಎಸ್ ಆ ಪ್ರಕ್ರಿಯೆಯಲ್ಲಿ [illegible] ಎ.ಬಿ.ವಾಜಪೇಯಿ, ಎಲ್.ಕೆ.ಅಡ್ವಾನಿ, ಎಸ್.ಎಸ್.ಭಂಡಾರಿ ಮತ್ತು ದಿವಂಗತ ದೀನದಯಾಳ್ ಉಪಾಧ್ಯಾಯ



ಪರಿವರ್ತಿಸುವ ಆರ್‌ಎಸ್‌ಎಸ್ ಯೋಜನೆಯನ್ನು ಈಡೇರಿಸುವುದು. ಆದ್ದರಿಂದ ಬಿಜೆಪಿ ಮತ್ತು ಕೇಸರಿ ಪಡೆಗಳ ಇತರ ಸಂಘಟನೆಗಳ ಮೇಲೆ ಹತೋಟಿಯನ್ನಿಟ್ಟಿರುವವರು ಯಾರು ಎಂಬ ಬಗ್ಗೆ



ಎಂದೂ ಸಂದೇಹವೇ ಇರಲಿಲ್ಲ.

ಎಲ್‌ಕೆ ಅಡ್ವಾಣಿಯವರು ರಾಜೀನಾಮೆ ನೀಡಲು ಕಾರಣವಾದ ವಿವಾದದ ಕೇಂದ್ರವೆಂದರೆ ಜಿನ್ನಾ ಕುರಿತ ಅವರ ಟಿಪ್ಪಣಿಗಳು. ನ್ಯಾಯವಾಗಿ ಹೇಳುವುದಾದರೆ, ಅಡ್ವಾಣಿಯವರು ಒಬ್ಬ ಜಾತ್ಯಾತೀತ ಎಂದು ನೇರವಾಗಿ ಪ್ರಸ್ತಾಪಿಸಲೇ ಇಲ್ಲ. ಅವರು ಜಿನ್ನಾರವರ ಅಗಸ್ಟ್ 11, 1947ರ ಭಾಷಣವನ್ನು ಉದ್ಧರಿಸಿ ಆ ಪ್ರಕಾರ ಪಾಕಿಸ್ತಾನ ಒಂದು ಜಾತ್ಯಾತೀತ ಪ್ರಭುತ್ವವಾಗಬೇಕು ಎಂದಷ್ಟೇ ಪ್ರತಿಪಾದಿಸಿದರು.

ಜಿನ್ನಾ ಭಾಷಣದ ಈ ಪ್ರಸ್ತಾಪದ ಬಗ್ಗೆ ಒಂದು ಉದಾರ ವಿವರಣೆಯೆಂದರೆ ಪಾಕಿಸ್ತಾನವು ಜಿನ್ನಾರ ಎರಡು ರಾಷ್ಟ್ರ ಸಿದ್ಧಾಂತಕ್ಕೆ ಅಡ್ವಾಣಿಯವರ ಒಂದು ಅನುಮೋದನೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ಆರ್.ಎಸ್.ಎಸ್ ಈಗಲೂ ತನ್ನ 'ಹಿಂದೂರಾಷ್ಟ್ರ'ದ ಕಣ್ಣೋಟದ ಭಾಗವಾಗಿ 'ಅಖಂಡ ಭಾರತ'ದ ಘೋಷಣೆಯನ್ನು ಪ್ರತಿಪಾದಿಸುತ್ತದೆ. ಈ 'ಅಖಂಡ ಭಾರತ'ದಲ್ಲಿ ಬಾಂಗ್ಲಾದೇಶ, ಪಾಕಿಸ್ತಾನಗಳೂ ಸೇರಿವೆ. ಈ ಹಿಂದೆ ಅಡ್ವಾಣಿಯವರೇ ಪಾಕಿಸ್ತಾನ ಒಂದು 'ಲಂಚಕೋರ ಪ್ರಭುತ್ವ' ಎಂದು ವರ್ಣಿಸುತ್ತಿದ್ದರು. ದಶಕಗಳ ಕಾಲ ಇಂತಹ ದ್ವೇಷಪೂರಿತ ಪ್ರಚಾರದ ನಂತರ ಈಗ ಪಾಕಿಸ್ತಾನದೊಡನೆ ಸಂಧಾನದ ಅಡ್ವಾಣಿಯವರ ಪ್ರಯತ್ನಗಳನ್ನು ಸ್ವೀಕರಿಸಲು ಆರ್.ಎಸ್.ಎಸ್ ನಿರ್ಧರಿಸಿದೆ. ಆರ್.ಎಸ್.ಎಸ್ ಮಟ್ಟಿಗೆ ಮುಸ್ಲಿಂ-ವಿರೋಧ ಮತ್ತು ಪಾಕಿಸ್ತಾನ-ವಿರೋಧ ಎರಡಕ್ಕೂ ಒಂದೇ ಅರ್ಥ. ಈ ಗುರಿಸಾಧನೆಗೆ ಅದು ಸತತವಾಗಿ ಮುಸ್ಲಿಂ-ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸುತ್ತಿರಬೇಕು ಹಾಗೂ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಿರ ಬೇಕಾಗುತ್ತದೆ.

ಅಡ್ವಾಣಿಯವರ ಈ ಹೇಳಿಕೆಗೆ ಕೊಡಲಾಗುತ್ತಿರುವ ಇನ್ನೊಂದು ವ್ಯಾಖ್ಯೆಯೆಂದರೆ ಜಿನ್ನಾರನ್ನೂ ಒಂದು ಜಾತ್ಯಾತೀತ ವ್ಯಕ್ತಿಯೆಂದು ಹೇಳಿ, ಆ ಮೂಲಕ ಭಾರತದಲ್ಲಿ ಆರ್‌ಎಸ್‌ಎಸ್ ಮತ್ತು ಅದರ ಮುಖಂಡರ ಜಾತ್ಯಾತೀತ ಸ್ವರೂಪವನ್ನು ಸ್ಥಾಪಿಸುವುದು ಅಡ್ವಾಣಿಯವರ ದುಷ್ಟ ಪ್ರಯತ್ನ ಇದು ಎಂದು. ಜಿನ್ನಾರವರು ಎರಡು-ರಾಷ್ಟ್ರ ಸಿದ್ಧಾಂತವನ್ನು ಮುಂದಿಟ್ಟರೂ ಜಾತ್ಯಾತೀತರೆಂದು ವರ್ಣಿಸಬಹುದಾದರೆ, ಅವರಿಗಿಂತಲೂ ಎರಡು ವರ್ಷ ಮೊದಲೇ ಎರಡು-ರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿದ ಸಾವರ್ಕರ್ ಒಬ್ಬ ದೇಶಪ್ರೇಮಿ ಹಾಗೂ ಅಡ್ವಾಣಿ ಮತ್ತು ಕಂಪನಿ ಜಾತ್ಯಾತೀತರು ತಾನೇ!

ಕೇಸರಿ ಪಡೆ ಕೂಗೆಬ್ಬಿಸಿದಾಗ ತಾನು ಅದರಿಂದ ವಿಚಲಿತನಾಗಿಲ್ಲ ಎಂದು ತೋರಿಸುತ್ತಾ ಅಡ್ವಾಣಿ ಈ ಬಗ್ಗೆ ಚರ್ಚೆ ನಡೆಯಲಿ ಎಂದರು. ಪಾಕಿಸ್ತಾನದಲ್ಲಿ ತಾನು ಹೇಳಿದ್ದನ್ನು ಅಥವಾ ಮಾಡಿದ್ದನ್ನು ಪರಾಮರ್ಶಿಸಲು ಅಥವಾ ಹಿಂತೆಗೆದುಕೊಳ್ಳಲು ಅವರು ದೃಢವಾಗಿ ನಿರಾಕರಿಸಿದರು. ಅವರು ರಾಜೀನಾಮೆ ನೀಡಿದಾಗ ಚರ್ಚೆ ಮುಗಿದಿದೆ ಎಂದು

ಸಿನಿಮಾ

ಸಿನಿಮಾದ ಹೆಸರಿನ ಬಗ್ಗೆ ತಕರಾರು ಎತ್ತಿದ ಮೂಲಭೂತವಾದಿಗಳು ಬಾಂಬ್ ಸ್ಫೋಟಿಸಿ ಅಮಾಯಕರ ಹತ್ಯೆಗೈದರು. ಈ ಸಾಂಸ್ಕೃತಿಕ ಪೊಲೀಸರ ಕೃತ್ಯವನ್ನು ಯಾವ ಧರ್ಮಗ್ರಂಥ ಸಮರ್ಥಿಸುತ್ತದೆ.

ಸಿನೆಮಾ ಹಾಲ್‌ಗಳಲ್ಲಿ ಬಾಂಬ್ ಸ್ಫೋಟ

ಪ್ರತಿಭಟಿಸುವುದು ಎಂದರೆ ಭಯೋತ್ಪಾದಕ ವಿಧಾನಗಳ ಮೂಲಕವೇ?

ಕಳೆದ ವಾರ ನವದೆಹಲಿಯ ಲಿಬರ್ಟಿ ಮತ್ತು ಸತ್ಯಂ ಎಂಬ ಎರಡು ಸಿನೆಮಾ ಹಾಲ್‌ಗಳಲ್ಲಿ 15 ನಿಮಿಷಗಳ ಅಂತರದಲ್ಲಿ ಬಾಂಬ್‌ಸ್ಫೋಟ ನಡೆದಿದ್ದು, ಇದಕ್ಕೆ ಕಾರಣರಾರು ಎಂಬುದು ಇನ್ನೂ ಪೂರ್ಣ ಪತ್ತೆಯಾಗಿಲ್ಲ. ಆದರೆ ಈ ಎರಡೂ ಥಿಯೇಟರುಗಳಲ್ಲಿ ಒಂದೇ ಹೆಸರಿನ ಸಿನೆಮಾ ಓಡುತ್ತಿತ್ತು. ಅದು ಸನ್ನಿ ಡಿಯೋಲ್ ನಟಿಸಿರುವ 'ಜೋ ಬೋಲೆ ಸೋ ನಿಹಾಲ್' ಎಂಬ ಚಲನಚಿತ್ರ ಸಿಖ್ ಧಾರ್ಮಿಕ ಮೂಲಭೂತವಾದಿಗಳು ಈ ಸ್ಫೋಟವನ್ನು ನಡೆಸಿದ್ದಾರೆ ಎಂಬ ಅನುಮಾನ ಬಲವಾಗಿದೆ. ಈ ಸ್ಫೋಟದಿಂದಾಗಿ ಒಬ್ಬರು ಸತ್ತಿದ್ದು, 50 ಕ್ಕೂ ಹೆಚ್ಚು ಜನರು ಗಾಯಗೊಂಡಿರುತ್ತಾರೆ.

'ಜೋ ಬೋಲೆ ಸೋ ನಿಹಾಲ್' ಎಂದರೆ 'ಆಡಿದ್ದು ಒಳ್ಳೆಯ ಮಾತು' ಎಂದರ್ಥ. ಇಂತಹುದೇ ಅರ್ಥ ಬರುವ, 'ಬೋಲೆ ಸೋ ನಿಹಾಲ್, ಸತ್ ಶ್ರಿ ಅಕಲ್' ಎಂಬ ವಾಕ್ಯವನ್ನು ಸಿಖ್ ಸಮುದಾಯದ ಧಾರ್ಮಿಕ ಸಮಾರಂಭಗಳಲ್ಲಿ ದಿನನಿತ್ಯ ಬಳಸುತ್ತಾರೆ. ಆದ್ದರಿಂದಲೇ ಆಕ್ಷೇಪ ಎನ್ನುತ್ತಾರೆ. ಸಿನಿಮಾದ ತಲೆಬರಹಕ್ಕೆ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯವರು ತಮ್ಮ ತಕರಾರು, ಅನಿಸಿಕೆ ಇದಲ್ಲಿ ಪ್ರತಿಭಟಿಸಬಹುದು. ಇನ್ನಿತರ ಸಂಘಟನೆಗಳಾದ ಶಿರೋಮಣಿ ಅಕಾಲಿದಳ (ಮಾನ್) ಮತ್ತು ಇಂಗ್ಲೆಂಡ್‌ನಲ್ಲಿ ನೆಲೆಸಿರುವ ದಲ್ ಖಲ್ಸಾ ಮೊದಲಾದ ಸಂಘಟನೆಗಳೂ ಈ ಚಲನಚಿತ್ರ ಪ್ರದರ್ಶನವನ್ನು ವಿರೋಧಿಸಿವೆ. ಈ ಚಲನಚಿತ್ರವನ್ನು ವಿರೋಧಿಸಲು ನೀಡುತ್ತಿರುವ ಇನ್ನೊಂದು ಕಾರಣ ಪಂಜಾಬಿ ಪೊಲೀಸ್ ಆಗಿರುವ ಚಿತ್ರದ ನಾಯಕ ನಟ ಹುಡುಗಿಯರೊಂದಿಗೆ ಕೈ ಕೈ ಹಿಡಿದು ನರ್ತಿಸುತ್ತಾನಂತೆ. ಅದು ಸಿಖ್ ಧರ್ಮಕ್ಕೆ ವಿರೋಧವಂತೆ. 'ನಿಹಾಲ್' ಆಗಿರುವ (ಒಳ್ಳೆಯ) ವ್ಯಕ್ತಿ ಹೀಗೆ ಮಾಡುವುದು ಸರಿಯಲ್ಲ ಎಂಬುದು ಈ ಸಂಘಟನೆಗಳ ವಾದ.

ಚಲಚಿತ್ರಗಳಲ್ಲಿ ಅಶ್ಲೀಲತೆ, ಹಿಂಸೆಗಳನ್ನು ವೈಭವೀಕರಿಸುವುದನ್ನು ತಡೆಯಬೇಕು ಎಂಬುದು ಸತ್ಯ. ಆದರೆ ಅದು ಮೂಲಭೂತವಾದಿಗಳ ಮೂಗಿನ ನೇರಕ್ಕೆ ಇರಬೇಕು ಎಂದು ವಾದಿಸುವುದು ಸರಿಯಲ್ಲ. ಸೆನ್ಸಾರ್ ಬೋರ್ಡ್‌ನಿಂದ ಒಪ್ಪಿಗೆ ಪಡೆದ ಸಿನೆಮಾವನ್ನು ಪ್ರದರ್ಶಿಸಲು ಅವಕಾಶ ನೀಡಬೇಕು. ಇಲ್ಲವಾದಲ್ಲಿ ಕಾನೂನನ್ನು ಕೈಗೆತ್ತಿಕೊಂಡಂತಾಗುತ್ತದೆ, ಅರಾಜಕತೆಗೆ ದಾರಿ ಮಾಡಿಕೊಡುತ್ತದೆ. ಅದೇ ಸಂದರ್ಭದಲ್ಲಿ ಆ ಪ್ರತಿಭಟನೆ ಭಯೋತ್ಪಾದಕ ವಿಧಾನಗಳ ಮೂಲಕವಲ್ಲ.

ಗ್ರಾಮೀಣ ಪ್ರದೇಶದ ಬಡಮಹಿಳೆಯರನ್ನು ಭೂಮಾಲಕ ಶಕ್ತಿಗಳು ದೌರ್ಜನ್ಯಕ್ಕೆ ಒಳಪಡಿಸಿದಾಗ, ಕಛೇರಿಯಲ್ಲಿ ಕೆಲಸ ಮಾಡುವ ಮಹಿಳೆಯರು ಮೇಲಾಧಿಕಾರಿಗಳಿಂದ ಕೀಟಲೆ ಅನುಭವಿಸುತ್ತಿರುವ ದಿನನಿತ್ಯದ ಸಂದರ್ಭಗಳಲ್ಲಿ ಸೊಲ್ಲೆತ್ತದ ಧಾರ್ಮಿಕ ಸಂಘಟನೆಗಳು, ತಾವು ರೂಪಿಸಿದ ನೀತಿ ನಿಯಮಗಳಿಗೆ ವಿರುದ್ಧವಾಗಿದೆ ಎಂಬ ಕಾರಣ ನೀಡಿ ಸಿನೆಮಾ ಪ್ರದರ್ಶನಗಳು ನಡೆಯದಂತೆ ತಡೆಯುವುದು ವಿಪರ್ಯಾಸ.

ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಸದಸ್ಯರಾಗಿರುವ ಹರ್‌ದೀಪ್‌ಸಿಂಗ್, ಈ ಕುರಿತು ಪಂಜಾಬ್ ಮತ್ತು ಹರ್ಯಾಣ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು. 'ಸಿಖ್ ಜನರ ಮನಸ್ಸಿಗೆ ಆಘಾತವಾಗುತ್ತದೆ' 'ಸಿಖ್ ಧರ್ಮದ ಚರಿತ್ರೆ ಮತ್ತು ಪರಂಪರೆಯನ್ನು ಗಮನದಲ್ಲಿಟ್ಟು ಸಿನಿಮಾದ ಹೆಸರು ಬದಲಿಸಬೇಕು' ಎಂದೆಲ್ಲಾ ಅಪೀಲಿನಲ್ಲಿ ವಾದ ಮಾಡಿದ್ದರೂ ಉಚ್ಚ ನ್ಯಾಯಾಲಯವು ಅದನ್ನು ತಿರಸ್ಕರಿಸಿತ್ತು. ಇಂತಹ ವಾದಗಳನ್ನು ತಿರಸ್ಕರಿಸಿದ ಜನಸಾಮಾನ್ಯರೂ ಮನರಂಜನೆಗಾಗಿ ಸಿನಿಮಾ ನೋಡುತ್ತಿದ್ದರು.

ಮಸಾಲೆ ಚಿತ್ರ:

ಇದೊಂದು ಸಾಮಾನ್ಯವಾಗಿ ಬರುತ್ತಿರುವ ಮಸಾಲೆ ಚಿತ್ರಗಳ ಸಾಲಿಗೆ ಸೇರುತ್ತದೆ. ಪೊಲೀಸ್ ಅಧಿಕಾರಿಯಾಗಿರುವ 'ನಿಹಾಲ್' ಒಳ್ಳೆಯ ವ್ಯಕ್ತಿ. ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿರುವ ಶ್ರೀಮಂತ ಪಾತಕಿಯನ್ನು ಸೆರೆಹಿಡಿಯುವ ಸುತ್ತ ಕಥೆ ಸುತ್ತುತ್ತಿದೆ.

'ಹಿಂದೂ ದೇವತೆಗಳಿಗೆ ಅಪಮಾನವಾಗಿದೆ' ಎಂಬ ಕಾರಣ ನೀಡಿ, ಹೆಸರಾಂತ ಚಿತ್ರಕಲಾವಿದ ಎಂ.ಎಫ್ ಹುಸ್ಸೇನ್ ಅವರ ಕಲಾಕೃತಿಗನ್ನು ನಾಶಗೊಳಿಸಿದ ಹಿಂದೂ ಮೂಲಭೂತವಾದಿಗಳು, ಶತಮಾನಗಳಷ್ಟು ಹಳೆಯದಾದ ಬುದ್ಧನ ವಿಗ್ರಹವನ್ನು ವಿಕೃತಗೊಳಿಸಿದ ತಾಲಿಬಾನ್‌ನ ಮುಸ್ಲಿಂ ಮೂಲಭೂತವಾದಿಗಳು, 'ವಾಟರ್' ಚಿತ್ರದ ಚಿತ್ರೀಕರಣವನ್ನು ತಡೆಗಟ್ಟಿದ ಉತ್ತರ ಪ್ರದೇಶದ ಹಿಂದೂ ಕೋಮುವಾದಿಗಳು ಹಾಗೂ ಇದೀಗ ಮೇಲೆ ಹೇಳಿದ ಚಲನಚಿತ್ರ ಪ್ರದರ್ಶನ ರದ್ದುಗೊಳಿಸಬೇಕೆಂದು ಸಿನೆಮಾ ಮಂದಿರಗಳಲ್ಲಿ ಬಾಂಬ್ ಸ್ಫೋಟ ನಡೆಸಿದ ಸಿಖ್ ಮೂಲಭೂತವಾದಿಗಳು ಒಂದೇ ನಾಣ್ಯದ ಮುಖಗಳು. ಪ್ರಜಾಪ್ರಭುತ್ವ ಚಳುವಳಿಯ ಮೂಲಕ, ಪ್ರಗತಿಪರ ತಿಳುವಳಿಕೆಯ ಮೂಲಕ ಈ ಮೂಲಭೂತವಾದಿ ಶಕ್ತಿಗಳನ್ನು ಜನರಿಂದ ದೂರ ಮಾಡುವುದೇ ಕಲಾಸಕ್ತರ ಕೆಲಸವಾಗಬೇಕು.

- ಬಾಲಕೃಷ್ಣ

ಮೈತ್ರಿಕೂಟದ ಸರ್ಕಾರ..........

ಪುಟ 7 ರಿಂದ

ಕಾಪಾಡಲು ಬಜರಂಗದಳ, ವಿಶ್ವಹಿಂದೂ ಪರಿಷತ್‌ನ ಆಕ್ರಮಣಗಳನ್ನು ಯಶಸ್ವಿಯಾಗಿ ತಡೆಯಿತು. ಈ ಮುಂಚಿನಿಂದ ಧರಂ ಸರ್ಕಾರ ಕೊಂಚ ಭಿನ್ನವಾಗಿ ವರ್ತಿಸಿದೆ.

ಇಲ್ಲದ ಕ್ರಿಯಾಶಕ್ತಿ

ಆದರೆ ಕೋಮುವಾದವನ್ನು ಎದುರಿಸುವುದು ಕೇವಲ ಆಡಳಿತಾತ್ಮಕ ಬಲದಿಂದ ಎಂಬಂತಾಗಿದೆ. ಪ್ರಮುಖವಾಗಿ ಜನತೆಯನ್ನು ಇಂತಹ ಹುನ್ನಾರಗಳ ವಿರುದ್ಧ ಜಾಗೃತಿಗೊಳಿಸಿ ಸಕ್ರಿಯವಾಗಿ ತೊಡಗಿಸುವ ರಾಜಕೀಯ ಇಚ್ಛೆ ಹಾಗೂ ಕ್ರಿಯಾಶಕ್ತಿ ಇಲ್ಲವಾಗಿದೆ.

ಹಾಗೆಯೇ ಸರ್ಕಾರದ ಇನ್ನೊಂದು ಭಾಗಿದಾರ ಪಕ್ಷವಾಗಿರುವ ಜಾತ್ಯತೀತ ಜನತಾದಳ ಕೋಮುವಾದಿಗಳ ವಿರುದ್ಧ ಧ್ವನಿ ಎತ್ತದೇ ಇರುವುದು, ತನ್ನ ಪ್ರತ್ಯೇಕ ಅಸ್ತಿತ್ವಕ್ಕಾಗಿ ಕಾಂಗ್ರೆಸ್‌ನೊಂದಿಗೆ ಜಟಾಪಟಿ, ವಾಗ್ಯುದ್ಧಗಳಿಗೆ ತೊಡಗಿರುವುದು ಗಮನಿಸಬೇಕಾದ ಅಂಶವಾಗಿದೆ. ಇದರಲ್ಲಿ ಕೋಮುವಾದಿಗಳನ್ನೆದುರಿಸುದಾಗಿ ಹೇಳಿದ ಮೂಲ ಧ್ಯೇಯ ಮರೆಯಾಗಿ ಅಧಿಕಾರದ ಕಚ್ಚಾಟವೇ ಮುಖ್ಯ ಎಂಬುದು ಜನರೆದುರು ಬಿಂಬಿತವಾಗಿದೆ. ಇದು ಅನಾಹುತಕಾರಿ ಫಲಿತಾಂಶ ತರಲೂಬಹುದು.

ಧರಂಸರ್ಕಾರ ರಾಜ್ಯದಲ್ಲಿ ಹಲವಾರು ನಿರಾವರಿ ಪ್ರಶ್ನೆ, ಬಾಬಾಬುಡನ್‌ಗಿರಿ, ನಕ್ಸಲೀಯ ಪ್ರಶ್ನೆಯಂತಹ ಸಂದರ್ಭದಲ್ಲಿ ಸರ್ವಪಕ್ಷಗಳೊಂದಿಗೆ ಸಮಾಲೋಚಿಸುವ ಪರಿಪಾಠ ಇರಿಸಿಕೊಂಡಿದೆ. ಇದು ಸ್ವಾಗತಾರ್ಹ.

ಇಂತಹ ಒಂದು ಸಂದರ್ಭದಲ್ಲಿ ಸರ್ಕಾರದ ಆಡಳಿತ ಜನಮುಖಿಯಾಗಿದೆಯೇ ಎಂದಾಗ ಅದು ಅಷ್ಟಾಗಿ ಇಲ್ಲ. ಭಾಗಿದಾರ ಪಕ್ಷಗಳು ವ್ಯಾಜ್ಯದಲ್ಲಿ ತೊಡಗಿರುವುದರಿಂದ ಆಡಳಿತವು ಶಿಥಿಲವಾಗಿ ಅಧಿಕಾರಶಾಹಿಗಳಷ್ಟೇ ಕಾರುಬಾರಾಗುತ್ತಿದೆ. ಭ್ರಷ್ಟಾಚಾರಕ್ಕೆ ಕಡಿವಾಣ ಇಲ್ಲ. ಅಕ್ಕಿ ಹಗರಣ ತೆಲಗಿ ಸ್ಟಾಂಪ್ ಹಗರಣ, ಭೂ ಕಬಳಿಕೆ ಹಗರಣದಂತಹ ಜನರನ್ನು ಹಿಂಡುವ ಅನೇಕ ಭಾರಿ ಭ್ರಷ್ಟಾಚಾರದ ಹಗರಣದ ಬಗ್ಗೆ ಈ ಸರ್ಕಾರ ತನಿಖೆಗೊಳಪಡಿಸಿ, ಶಿಕ್ಷಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಲೇ ಇಲ್ಲ. ಹೀಗಾಗಿ ಅವುಗಳನ್ನು ಹೇಗೋ ಸಾಗಹಾಕಿ ಮುಚ್ಚಿಬಿಡುವ ಇಚ್ಛೆ ತೋರಿಸಿದೆ.

ಪುನರ್ ವಿಮರ್ಶೆ ಮಾಡಿಕೊಂಡೀತೆ?

ಒಂದು ವರುಷ ತುಂಬಿದ ಈ ಸಂದರ್ಭದಲ್ಲಾದರೂ ಮೈತ್ರಿಕೂಟದ ಸರ್ಕಾರ ಹಾಗೂ ಭಾಗೀದಾರ ಪಕ್ಷಗಳು ನಡೆದಿರುವ ಹಾದಿಯನ್ನು ಪುನರ್ ವಿಮರ್ಶಿಸಿಕೊಳ್ಳಬೇಕು. ಹೊಸದಾಗಿ ಗೊತ್ತುಗುರಿ, ನಿಗದಿಪಡಿಸಿಕೊಂಡು ಜ್ವಲಂತ ಪ್ರಶ್ನೆಗಳು, ಹಸಿವಿನ ಸಾವುಗಳು, ರೈತರ ಆತ್ಮಹತ್ಯೆಗಳು, ಕೈಗಾರಿಕೆ ಮುಚ್ಚುವಿಕೆಯಂತಹ ಜ್ವಲಂತ ಪ್ರಶ್ನೆಗಳು ಈಗಲೂ ಪರಿಹಾರಕ್ಕೆ ಕಾಯುತ್ತಿರುವ ಜನತೆಗೆ ಪರಿಹಾರ ಒದಗಿಸಬೇಕು.

ಈ ಅವಧಿಯಲ್ಲಿ ಒದಗಿಬಂದ ಎಲ್ಲಾ ಅವಕಾಶಗಳನ್ನು ಕಳೆದುಕೊಂಡಂತೆ ಹಾಗೂ ಹೀಗೂ ಸರ್ಕಾರ ಸಾಗಿದರೆ ಅಧಿಕಾರ ಕಳೆದುಕೊಳ್ಳ ಬೇಕಾದೀತು ಎಂಬ ಎಚ್ಚರ ಅಗತ್ಯ. ಹಾಗಾಗಿ ಬಿಟ್ಟಲ್ಲಿ ಕಾದಿರುವ ಕೋಮುವಾದಿಗಳ ಅಟ್ಟಹಾಸಕ್ಕೆ ಅವಕಾಶ ಕಲ್ಪಿಸಿದ ಭಾರಿ ಅನಾಹುತಕಾರಿ ಫಲವನ್ನು ರಾಜ್ಯದ ಜನತೆಗೆ ಕೊಟ್ಟಂತಾಗುತ್ತದೆ.

- ಎಸ್.ವೈ.ಜಿ

ಪತ್ರಿಕೆಗೆ ನೆನಪಿನ ಕಾಣಿಕೆ

ಮೈಕೋ ಕಾರ್ಖಾನೆಯ ಕಾರ್ಮಿಕರಾದ ಎಸ್.ಶಿವಕುಮಾರ್ ರವರು ದೀಪಿಕಾರನ್ನು ಮೇ 13 ರಂದು ಬೆಂಗಳೂರಿನಲ್ಲಿ ವಿವಾಹವಾದರು. ಈ ನೆನಪಿನಲ್ಲಿ ಐಕ್ಯರಂಗ ಪತ್ರಿಕೆಗೆ 100.ರೂ ಗಳನ್ನು ಹಾಗೂ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಗೆ 1,000.ರೂಗಳನ್ನು ಕಾಣಿಕೆ ನೀಡಿದ್ದಾರೆ. ಶಿವಕುಮಾರ್ ಡಿವೈಎಫ್‌ಐ ಮುಖಂಡ ಲಕ್ಷ್ಮಣ ಕುಮಾರ್ ರವರ ಸಹೋದರ. ಇವರದು ಪ್ರಗತಿಪರ ಕುಟುಂಬವಾಗಿದೆ. ನೂತನ ದಂಪತಿಗಳಿಗೆ ಶುಭಾಶಯಗಳು.

5ನೇ ಪುಟದಿಂದ

ಇತ್ತು ಎಂದು ನೆನಪಿಸಿಕೊಳ್ಳುತ್ತಾರೆ. ಹೀಗಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಶಾಖಾದ್ರಿ ಇಲ್ಲಿನ ಆದಾಯ ಪಡೆದುಕೊಂಡು ಅದನ್ನು ನಿರ್ಲಕ್ಷಿಸಿದ್ದಾರೆ ಎನ್ನುತ್ತದೆ ಆಡಳಿತ. ಭಕ್ತಾದಿಗಳ ಕಾಣಿಕೆಯನ್ನು ಸಂಗ್ರಹಿಸುವಲ್ಲಿಯೂ ಜಿಲ್ಲಾಡಳಿತ ಚಿಗಿಯಾಗಿದೆ. ಅದರ ಉಸ್ತುವಾರಿ ಮುಜರಾಯಿ ಇಲಾಖೆ ಬಹುತೇಕ ವಹಿಸಿಕೊಂಡಿದೆ. ಹೀಗಾಗಿ ಶಾಖಾದ್ರಿಯಾಗಿ ನಿರ್ದೇಶನದಲ್ಲಿ ಕೆಲಸ ಮಾಡುತ್ತಿರುವವರು ಈಗ ಕೆಲಸವಿಲ್ಲವಾಗಿದ್ದೇವೆ ಎಂದು ಹೇಳಿದರು.

ಇದು ಮುಜರಾಯಿ ಇಲಾಖೆಗೆ ಸೇರಿದೆ. ಇದರ ಹಕ್ಕು-ವ್ಯಾಪ್ತಿ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗಿದೆ. ಶಾಖಾದ್ರಿ ಹಕ್ಕು - ಬಾಧ್ಯತೆಗಳ ಕುರಿತೂ ವಿವಾದವಿದೆ. ಶಾಖಾದ್ರಿಗೆ ತಿಂಗಳಿಗೆ ರೂ.5000/- ಸಂಬಳ ನಿಗದಿಪಡಿಸಿದ್ದಾಗಿದೆ ಎಂದು ಅವರೇನಿದ್ದರೂ ಸಾಂಪ್ರದಾಯಿಕ ಆಚರಣೆಗೆ ಮಾತ್ರ ಇರಬೇಕು ಎನ್ನುತ್ತಾರೆ ಆಡಳಿತದವರು. ಈ ಸಂಬಳ ತೆಗೆದುಕೊಳ್ಳದೇ (2000 ಇಸ್ವಿಯಿಂದ) ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರೆ ಶಾಖಾದ್ರಿ.

ಆಯೋಗದ ಆಗ್ರಹಗಳು

ಆದರೆ ಹೈಕೋರ್ಟ್ - ಸುಪ್ರಿಂ ಕೋರ್ಟ್‌ನ ತೀರ್ಮಾನಗಳು ಇದರ ಪೀಠಾಧಿಪತಿ ಶಾಖಾದ್ರಿಯೇ ಆಗಿದ್ದಾರೆ ಎಂದು ಹೇಳಿದೆ. ಅಂದರೆ ಎಲ್ಲಾ ಮಠಾಧಿಕರಿಗೆ ಇರುವ ಹಕ್ಕು - ಬಾಧ್ಯತೆಗಳು ಇವರಿಗೂ ಇರುವುದು.

ಈ ವಾದ-ವಿವಾದ ಏನೇ ಇದ್ದರೂ ಜಿಲ್ಲಾಡಳಿತ ಏನೇ ಅಭಿವೃದ್ಧಿ ಕಾರ್ಯ ಅಥವಾ ಇನ್ಯಾವುದೇ ಕ್ರಮ ಕೈಗೊಳ್ಳುವಾಗ ಏಕಪಕ್ಷೀಯವಾಗಿ ಮುಂದಾಗಿರುವುದು ಸರಿಯಲ್ಲ. ಅದೇನಿದ್ದರೂ ಶಾಖಾದ್ರಿ ಜಿಲ್ಲಾಡಳಿತ ಪರಸ್ಪರ ಚರ್ಚಿಸಿ ಸೂಕ್ತ ಸಮನ್ವಯ ದೊಂದಿಗೆ ಕಾರ್ಯವೆಸಗಬೇಕಿತ್ತು. ಅದನ್ನು ದುರ್ಬಲಗೊಳಿಸುವುದು ಸರಿಯಲ್ಲ.

ಎರಡನೇ ಅಂಶವೆಂದರೆ ಇಂತಹ ಕಾರ್ಯ ಕೈಗೊಳ್ಳುವಾಗ ಯಾವುದೇ ಧಾರ್ಮಿಕ ಸಂಕೇತಗಳೂ ಸ್ಥಳಗಳೂ, ಭಾವನೆಗಳೂ ಘಾಸಿಯಾಗದಂತೆ ಜತನದಿಂದ ಕ್ರಮವಹಿಸಬೇಕು. ಈಗ ನಡೆದಿರುವ ಒಟ್ಟು ವಿದ್ಯಮಾನಗಳಲ್ಲಿ ಅಂತಹದ್ದನ್ನು ಕಾಣುತ್ತಿಲ್ಲ. ಒಂದು ರೀತಿಯ ನಿರ್ಲಕ್ಷ್ಯ ಅಥವಾ ಅಸಡ್ಡೆ, ಅಗೌರವ ಕಾಣುತ್ತದೆ. ಇಲ್ಲವಾದರೆ ಲೋಬಾನ, ಗಂಜಿ, ಇತ್ಯಾದಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡದೇ ಇರುವುದು. ಗೋರಿಗಳಿಗೆ ಮಣ್ಣು ಮುಚ್ಚಿದೆಯೆಂದರೂ ಅದನ್ನು ತೆಗೆಸಿ ಸತ್ಯ ಸಂಗತಿ ತೋರುವುದೂ ಆಗಿಲ್ಲ. ಹಾಗೇ ಫಕೀರರ ಕಟ್ಟೆ- ತೋಟವೂ ಸಹ. ಇಂತಹ ಕ್ರಮಗಳನ್ನು ಕೈಗೊಳ್ಳಬಾರದು.

ಜಿಲ್ಲಾಡಳಿತ ಕೈಗೊಂಡ ಕೈಗೊಳ್ಳಲಿರುವ ಕಾರ್ಯಗಳ ಬಗ್ಗೆ ಯಾವುದೇ ಪಾರದರ್ಶಕತೆ ಇಲ್ಲ. ಎಲ್ಲರೂ ಅಭಿವೃದ್ಧಿ ಕಾರ್ಯ ಒಪ್ಪಿದ್ದಾರೆ, ನಾನು ಮಾಡುತ್ತಿರುವೆ ಎಂಬ ಜಿಲ್ಲಾಧಿಕಾರಿ ಹೇಳಿಕೆ ಸಮರ್ಪಕವಲ್ಲ. ಮತ್ತು ಇದನ್ನು ಧಾರ್ಮಿಕ ಕೇಂದ್ರವೆಂಬುದಕ್ಕಿಂತ ಕೊನೆಗೆ ಪ್ರವಾಸಿಗಳ ತಾಣ ಮಾಡುವುದೇ ಮುಖ್ಯ ಉದ್ದೇಶ ಇದ್ದಂತಿದೆ.

ಮೇಲಿನ ಮೂರು ಅಂಶಗಳನ್ನು ಸರಿಪಡಿಸಲು ಸಿಪಿಐ(ಎಂ) ನಿಯೋಗ ಆಗ್ರಹಿಸಿದೆ.

ಇಂತಹ ಸೂಕ್ಷ್ಮ ಅಂಶಗಳನ್ನು ಅವಲೋಕಿಸದೇ ಕಾಂಗ್ರೆಸ್ ಜೆಡಿ(ಎಸ್) ಮುಂತಾದ ಪಕ್ಷಗಳು ಅಭಿವೃದ್ಧಿ ಕಾರ್ಯ ಹೊಗಳ ಕೈಬಿಟ್ಟವೆ. ಬಿಜೆಪಿ-ಬಜರಂಗದಳ ಅದರ ಶಾಸಕರು - ನಾಯಕರು ಸ್ವಾಗತಿಸಿದ್ದಾರೆ. ಜನಾರ್ಧನ ಪೂಜಾರಿಯವರು ತಮ್ಮದೇ ಸರ್ಕಾರ ರಾಜ್ಯದಲ್ಲಿದೆ ಎಂಬುದನ್ನು ಮರೆತು ಜಿಲ್ಲಾಧಿಕಾರಿ ಬಗ್ಗೆ ಹಗುರ ಮಾತನಾಡಿದ್ದಾರೆ.

ಆದ್ದರಿಂದ ಜಿಲ್ಲಾಡಳಿತ ಮುಖ್ಯವಾಗಿ ಸರ್ಕಾರ ಅಲ್ಲಿ ನಡೆದಿರುವ ಅತಿಕ್ರಮಣ ಅಗೌರವದ ಕಾರ್ಯಗಳನ್ನು ಸರಿಪಡಿಸಲು ಕೂಡಲೇ ಮುಂದಾಗಬೇಕು. ಬಾಬಾಬುಡನ್ ಗಿರಿಯ ದರ್ಗಾಪೀಠದ ಸೌಹಾರ್ದ ಪರಂಪರೆ ಕಾಯುವುದಕ್ಕೆ ಎಲ್ಲಾ ಕ್ರಮ ವಹಿಸಬೇಕು.

ಎಸ್.ವೈ. ಗುರುಶಾಂತ್

RBDECR 319-79/79 AIKYARANGA WEEKLY Reg. No.17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹುಡ್ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH